॥ ಶ್ರೀ ರಾಮಚಂದ್ರ ಪ್ರಸನ್ನ ॥



ಶ್ರೀಮತ್ಸಂಗ್ರಹ

ರಾಮಾಯಣ ಸುಂದರಕಾಂಡವು

(ತಾತ್ಪರ್ಯ ಸಹಿತ)

ಗ್ರಂಥಕರ್ತರು,
ಮು. ಆನಂದತೀರ್ಥಾಚಾರ್ಯರು.

1935

ಸೂಚನೆ

ಗ್ರಂಥಕರ್ತರ, ರುಜುವಿಲ್ಲದ ಪುಸ್ತಕವನ್ನು ತೆಗೆದುಕೊಂಡುವರು ಕಳವು ಛಾರ್ಜಿಗೆ ಖಂಡಿತವಾಗಿ ಗುರಿಯಾಗುವರು.

मु- आनंदतीर्थाचार्य

1. The maximum time allowed for retention of a book shall be one fortnight. It may be borrowed again if not required by others.

2. No reference books shall be lent out.

3. No borrower shall have more than two volumes out of the Library at one time.

4. Borrowers must not pass books from one to another but must return them to the Librarian.

5. Library books must not be used as class-books.

6. Any one who defaces by writing or otherwise damages any book shall pay the full cost of the book or of the entire works, if it consists of more than one volume.

7. The borrower shall be responsible for the value of the books lent out to him if they are lost, damaged or otherwise cannot be returned to the Library when they are due or recalled.

8. The presence of the voucher with the Librarian shall be considered sufficient proof of the non-return of books.

1615-36 The Bangalore Press

॥ ಶ್ರೀಃ ॥

ಶ್ರೀಮನ್ನಾರಾಯಣ ಪಂಡಿತಾಚಾರ್ಯರವರಿಂದ ವಿರಚಿತವಾದ

ಶ್ರೀಮತ್ಸಂಗ್ರಹ ರಾಮಾಯಣ ಸುಂದರಕಾಂಡವು

ಮುಳಬಾಗಲು ಅವರೂರು ನಂದಗುಡಿ

ಪೂರ್ಣಪ್ರಜ್ಞಾಚಾರ್ಯಸುತ ಆನಂದತೀರ್ಥಾಚಾರ್ಯರವರಿಂದ ಕನ್ನಡ ಭಾಷಾಂತರವು.

(ಪ್ರಥಮ ಮುದ್ರಣ ೨೦೦೦ ಪ್ರತಿಗಳು)

ಶ್ರೀ ಕರಿಗಿರಿ ಮುದ್ರಣಾಲಯದಲ್ಲಿ ಪ್ರಕಟಿಸಲ್ಪಟ್ಟಿತು.

 [1935] [ಬೆಲೆ 0-8-0

ಉಪೋದ್ಘಾತ.

ಲೋಕದಲ್ಲಿ ಶ್ರೀ ಮದ್ರಾಮಾಯಣವೆಂಬಗ್ರಂಥವು ಶ್ರೀ ರಾಮಚಂದ್ರನ ಮಹಿಮೆಯನ್ನು ಸೂಚಿಸುತ್ತೆಂಬುವುದು ಸರ್ವರಿಗೂ ವಿದಿತವಾದ ವಿಷಯವೇ ಆಗಿರುತ್ತೆ. ಆದರೆ ಶ್ರೀ ರಾಮಚಂದ್ರನ ಮಹಿಮೆಯನ್ನು ಶ್ರೀ ಹನುಮಂತನ ನಿಜ ಪರಾಕ್ರಮಾದಿಗಳಿಂದ ತಿಳಿಯಬೇಕೇಹೊರ್ತು ಬೇರೆ ಇಲ್ಲವು. (ಶಿಷ್ಯಾದಿಚ್ಛೇತ್ಸರಾಜಯುಂ) ಶ್ರೀ ರಾಮಚಂದ್ರನ ಮಹಿಮೆಯು ಶ್ರೀ ಆಂಜನೇಯನ ಪರಾಕ್ರಮರೂಪವಾಗಿ ವಾಲ್ಮೀಕಿ ಮಹರ್ಷಿಗಳು ಸುಂದರಕಾಂಡದಲ್ಲಿ ಬಹಳವಾಗಿ ವರ್ಣಿಸಿರುತ್ತಾರೆ. ಈ ವಾಲ್ಮೀಕಿ ಪ್ರಣೀತ ಮೂಲ ರಾಮಾಯಣವನ್ನು ೨೪ ಸಹಸ್ರ ಗ್ರಂಥಗಳಲ್ಲಿ ಸಂಗ್ರಹಿಸಿರುತ್ತಾರೆ. ಅದನ್ನು ಈಗಿನ ಕಾಲದಲ್ಲಿ ಪಾರಾಯಣಾದಿಗಳನ್ನು ಮಾಡಲು, ಜನಗಳಿಗೆ ಅನೇಕವಾದ ಲೌಕಿಕ, ವೈದಿಕ–ಉದರಂಭರಣಾದಿ ತಾಪತ್ರಯಗಳಿಂದ ಕಷ್ಟಸಾಧ್ಯವಾಗಿರುತ್ತೆ. ಮತ್ತು ಈ ವಾಲ್ಮೀಕಿ ರಾಮಾಯಣ ಸುಂದರಕಾಂಡದ ಕರ್ಣಾಟಕಾಭಿಪ್ರಾಯದಿಂದ ಆಬಾಲವೃದ್ಧರಿಗೂ ಸಹ ಜಾಗ್ರತೆಯಿಂದ ಅಶೇಷವಾದ ಅರ್ಥವಾಗಿ ಭಕ್ತಿಹುಟ್ಟಲು ಯಾವ ವಿಧವಾದ ಸಂಶಯವೂ ಇರುವುದಿಲ್ಲವು. ಈ ಗ್ರಂಥವು ಅಪಮೃತ್ಯುಪರಿಹಾರವೂ, ಅರಿಷ್ಟನಿವೃತ್ತಿಯೂ, ಇಷ್ಟಪ್ರಾಪ್ತಿಯೂ ಆಗಿರತಕ್ಕದ್ದಾ

ಗಿರುತ್ತದೆ. ಈ ವಿಷಯದಲ್ಲಿ ನನ್ನ ಸ್ವಾನುಭವವನ್ನು ಪ್ರಿಯ ವಾಚಕರ ಸಲುವಾಗಿ ತಿಳಿಸಲೇಪೇಕ್ಷಿಸುವೆನು. ನನ್ನ ಹಿರಿಯಮಗನಾದ ಶ್ರೀನಿವಾಸನೆಂಬ ೨೨ ವರ್ಷದ ಬಾಲಕನಿಗೆ ಟೈಫಾಯಿಡ್ ಎಂಬ ವಿಷಮಶೀತ ಜ್ವರವು ಬಂದು ೭ ನೆಯ ಮತ್ತು ೧೪ ನೆಯದಿನಗಳಲ್ಲಿ ಜೀವ ಹೋದಂತಾಗಿ ಇಹಲೋಕ ಜ್ಞಾನವಿಲ್ಲದೆ ಮಹಾ ಸಂಕಟಹುಟ್ಟಿ ಎತ್ತರವಾಗಿ ಕಪ್ಪಗಿರುವ ಯಾರೋ ಇಬ್ಬರು ಬಂದು ಕುತ್ತಿಗೆಗೆ ಹಗ್ಗ ಹಾಕುವುದಕ್ಕೆ ಬರಲು ಅದರಲ್ಲೊಬ್ಬನು ಈ ಹುಡುಗನ ತಲೆಯಹತ್ತಿರ ಒಬ್ಬ ವೃದ್ಧಬ್ರಾಹ್ಮಣನು ಕೂತುಕೊಂಡು ಏಕಚಿತ್ತಮನೋಭಾವದಿಂದಲೂ, ಭಕ್ತಿ ವಿಶ್ವಾಸದಿಂದಲೂ, ಹನುಮದುಪಾಸ್ಯ ಶ್ರೀ ಸೀತಾಪತಿ ಶ್ರೀ ರಾಮಚಂದ್ರದೇವರ ಸ್ಮರಣೆಯನ್ನು ಮಾಡುತ್ತಿರುತ್ತಾರಾದ್ದರಿಂದ ನಾವಿನ್ನು ಇವರ ಮನೆಯ ಹತ್ತಿರ ಬರಬಾರದೆಂದುಕೊಂಡು ಹೇಗೆ ಬಂದಿದ್ದರೋ ಹಾಗೆಯೇ ಹೊರಟು ಹೋದರೆಂಬದಾಗಿ ಈ ರಾಮಾಯಣ ಪಾರಾಯಣ ಪ್ರಭಾವದಿಂದ ನಿಶ್ಚೇಷ್ಟಿತನಾಗಿದ್ದವನು ಆ ತನ್ನ ಪೂರ್ವಸ್ಮೃತಿಯ ವೃತ್ತಾಂತವನ್ನು ನನ್ನಲ್ಲಿತಿಳಿಸಿದನು. ಅಂದಿನಿಂದಲೇ ಈ ಗ್ರಂಥದಲ್ಲಿ ಹೆಚ್ಚಿನಭಕ್ತಿಯು ಒಡಮೂಡಿ ಕನ್ನಡ ಭಾಷಾಂತರವನ್ನು ಮಾಡಲು ಶ್ರೀರಾಮನನ್ನು ಧ್ಯಾನಿಸಿ ಕಾರ್ಯೋದ್ಯುಕ್ತನಾದೆನು. ಆತನ ಕೃಪೆಯಿಂದ ಗ್ರಂಥವು ನಿರ್ವಿಘ್ನವಾಗಿ ಮುದ್ರಿಸಿ ವಾಚಕರ ಹಸ್ತಗತವಾಗಲು ಶ್ರೀಮದ್ಗುರು ತಂದೆ ಮುದ್ದು ಮೋಹನ ವಿಠಲಾಂಕಿತರಾದ ಪರಮಪ್ರಿಯ ಸುಬ್ಬರಾಯ ದಾಸರವರು ಸಹಾಯಕರಾಗಿ ತಮ್ಮ

ಕೃ

ಶ್ರೀಕರಿಗಿರಿ ಛಾಪಖಾನೆಯಲ್ಲಿ ಅತಿಜಾಗ್ರತೆಯಾಗಿ ಮುದ್ರಣಕಾರ್ಯವನ್ನು ನೆರವೇರಿಸಿ ಕೊಟ್ಟರು. ಇವರಿಗೆ ನನ್ನ ಪ್ರಣಾಮಗಳು.

ಈ ಗ್ರಂಥದ ಭಾಷಾಂತರವನ್ನು ಮೈಸೂರುಸಂಸ್ಥಾನದ ವಿದ್ವಶ್ಶಿಖಾಮಣಿಗಳಾದ ಸರೋವರಭೀಮ ಸೇನಾಚಾರ್ಯವರು, ಉತ್ತರಾದಿಮಠದ ಶ್ರೀ ರಂಗಮಾಧವಾಚಾರ್ಯರವರು, ಸಂಸ್ಕೃತ ಮಹಾಪಾಠಶಾಲಾ ಶ್ರೀ ಮಧ್ವರಾಯಾಚಾರ್ಯರವರು, ಪುರಾಣಪ್ರಸಿದ್ಧರಾದ ಬಾಣಾವಾರ ನರಸಿಂಹಮೂರ್ತ್ಯಾಚಾರ್ಯರವರು, ವಾಯಿ ಕರ್ ಕೃಷ್ಣಾಚಾರ್ಯರವರು ಮುಂತಾದ ಮಹನೀಯರುಗಳು ಅನುಮೋದಿಸಿರುತ್ತಾರೆ.

ಈ ಗ್ರಂಥವು ಅಪಮೃತ್ಯು ಪರಿಹಾರಕವೂ, ಅರಿಷ್ಟನಿವೃತ್ತಿಯೂ, ಇಷ್ಟಪ್ರಾಪ್ತಿಯೂ ಆಗಿರುವುದು ಇದನ್ನು ಸಕಲ ಸಜ್ಜನರೂ ಸಂಗ್ರಹಿಸಿ ಹನುಮದುಪಾಸ್ಯ ಶ್ರೀ ಸೀತಾಪತಿ ಶ್ರೀ ರಾಮಚಂದ್ರದೇವರ ಪೂರ್ಣಾನುಗ್ರಹಕ್ಕೆ ಪಾತ್ರರಾಗಬೇಕೆಂದು ಪ್ರಾರ್ಥಿಸುವ,

ಸಕಲ ಸಜ್ಜನ ವಿಧೇಯ,
ಮು. ಆನಂದತೀರ್ಥಾಚಾರ್ಯರು.

ಸಂಗ್ರಹ ರಾಮಾಯಣ

॥ ಮಂಗಳಾಚರಣ ಪ್ರಾರಂಭಃ ॥ ಶ್ರೀ ಗುರುಭ್ಯೋನಮಃ ॥ ಹರಿಃ ॥ ಓಂ ॥

ಶ್ಲೋ ॥ ವಂದೇ ವಂದ್ಯಂ ವಿಧಿ ಭವ (ಶಿವ) ಮಹೇಂದ್ರಾದಿ ವೃಂದಾರಕೇಂದ್ರೈಃ । ವ್ಯಕ್ತಂ ವ್ಯಾಪ್ತಂ ಸ್ವಗುಣ ಗಣತೋ ದೇಶತಃ ಕಾಲತಶ್ಚ ॥ ದೂತಾಽವದ್ಯಂ ಸುಖಚಿತಿಮಯೈಃ ಮಂಗಳೈ ರ್ಯುಕ್ತಮಂಗೈಃ । ಸಾನಾಥ್ಯಂನೋ ವ್ಯದಧ ದಧಿಕಂ ಬ್ರಹ್ಮ ನಾರಾಯಣಾಖ್ಯಂ ॥ ೧ ॥

ತಾ ॥ ಗ್ರಂಥಾರಂಭ ಕಾಲದಲ್ಲಿ ಶ್ರೀಮ‍ರ್ಜ ನಾರಾಯಣಪಂಡಿತಾಚಾರ್ಯರವರು ನಾರಾಯಣ ನಮನ ರೂಪ ಮಂಗಳಾಚರಣವನ್ನು ಮಾಡುತ್ತಾರೆ. ನಾನು ನಾರಾಯಣನೆಂಬ ಹೆಸರುಳ್ಳ ಪರ ಬ್ರಹ್ಮ ವಸ್ತುವನ್ನು, ನಮಸ್ಕರಿಸುತ್ತೇನೆ. ಅಥವಾ ಸ್ತೋತ್ರ ಮಾಡುತ್ತೇನೆ. ನಾರಾಯಣಾಖ್ಯ ಪರಬ್ರಹ್ಮ ವಸ್ತುವು ಎಂಥಾದ್ದೆಂದರೆ ಬ್ರಹ್ಮದೇವರು, ರುದ್ರದೇವರು, ಇಂದ್ರದೇವರು ಇವರೇ ಮೊದಲಾಗಿ ಉಳ್ಳ ದೇವತೆಗಳಿಂದ ವಂದ್ಯವಾದದ್ದೂ ಸ್ವರೂಪ ಭೂತವಾದ ಗುಣಗಳಿಂದ ವ್ಯಕ್ತವಾದದ್ದೂ, ದೇಶದಿಂದಲೂ, ಕಾಲದಿಂದಲೂ ವ್ಯಾಪ್ತವಾದದ್ದೂ ದೋಷ ದೂರವಾದದ್ದೂ, ಸರ್ವೋತ್ಕೃಷ್ಟವಾದದ್ದೂ, ಜ್ಞಾನಾನಂದಾತ್ಮಕವಾದದ್ದೂ, ಮಂಗಳಕರವಾದ ಅವಯುವಗಳಿಂದ ಕೂಡಿದ್ದೂ, ಮತ್ತು ಅನಾಥರಾದ ನಮ್ಮನ್ನು ಸನಾಥರಾಗಿ ಮಾಡಿದಂಥಾದ್ದೂ ಆಗಿರುವುದು.

ಭೂಷಾರತ್ನಂ ಭುವನ ವಲಯಸ್ಯಾಖಿಳಾಶ್ಚರ್ಯ ರತ್ನಂ। ಲೀಲಾರತ್ನಂ ಜಲಧಿ ದುಹಿತುರ್ದೇವತಾ ಮೌಳಿರತ್ನಂ ॥ ಚಿಂತಾರತ್ನಂ ಜಗತಿ ಭಜತಾಂ ಸತ್ಸರೋಜ ದ್ಯುರತ್ನಂ। ಕೌಸಲ್ಯಾಯಾಃಲಸತು ಮಮ ಹೃನ್ಮಂಡಲೇ ಪುತ್ರರತ್ನಂ ॥ ೨ ॥

ಕೌಸಲ್ಯಾ ದೇವಿಯರ ಪುತ್ರತ್ವೇನ ಅವತಾರ ಮಾಡಿದ ಶ್ರೀ ರಾಮಚಂದ್ರನೆಂಬ ರತ್ನವು ಎಂಥಾದ್ದೆಂದರೆ – ಒಡವೆಗಳಲ್ಲೆಲ್ಲಾ ಮಹಾ ಶ್ರೇಷ್ಠವಾದ ಒಡವೆಯು. ಸಮಸ್ತ ಲೋಕಗಳಿಗೂ ಆಶ್ಚರ್ಯ ಕರವಾದದ್ದು, ಲಕ್ಷ್ಮೀ ದೇವಿಯರಿಗೆ ಲೀಲಾಸ್ಪದವಾದದ್ದು. ದೇವತೆಗಳಲ್ಲೆಲ್ಲಾ ಶ್ರೇಷ್ಠವಾದದ್ದು. ಚಿಂತಾಮಣಿ ಎಂಬ ರತ್ನಕ್ಕಿಂತಲೂ ಶ್ರೇಷ್ಠವಾದದ್ದು. ಭಜನೆ ಮಾಡುವವರ ಮನಸ್ಸೆಂಬ ಕಮಲಕ್ಕೆ ಸೂರ್ಯನೋಪಾದಿಯಲ್ಲಿ ಸಂತೋಷವನ್ನು ಕೊಡತಕ್ಕದ್ದಾಗಿ ನನ್ನ ಹೃದಯ ಪ್ರದೇಶದಲ್ಲಿ ಹೆಚ್ಚಾಗಿ ಪ್ರಕಾಶಿಸಲಿ. ॥ ೨ ॥

ಮಹಾ ವ್ಯಾಕರಣಾಂ ಬೋಧಿ ಮಂಥ ಮಾನಸ ಮಂದಿರಂ ॥
ಕವಯಂತಂ ರಾಮ ಕೀರ್ತ್ಯಾ ಹನುಮಂತಮುಪಾಸ್ಮಹೆ ॥ ೩ ॥

ಮಹಾ ವ್ಯಾಕರಣವೆಂಬ ಸಮುದ್ರದಲ್ಲಿ ಮನಸ್ಸೆಂಬ ಮಂದರ ಪರ್ವತವನ್ನು ಹಾಕಿ ಮಥನ ಮಾಡಿ

(ಕಡೆದು) ರಾಮದೇವರ ಯಶಸ್ಸನ್ನು ಹೊಗಳತಕ್ಕಂಥ ಹನುಮಂತ ದೇವರನ್ನು ಉಪಾಸನೆ ಮಾಡುತ್ತೇನೆ. ಈ ಶ್ಲೋಕದ ಅಭಿಪ್ರಾಯ ವೇನೆಂದರೆ – ಹನುಮಂತದೇವರು ಸಮುದ್ರದಲ್ಲಿ ಎಷ್ಟು ನೀರು ಇದೆಯೋ, ಅಷ್ಟು ವ್ಯಾಕರಣ ಬಲ್ಲವರು ಎಂದ ಮೇಲೆ, ಮಹಾ ನವ ವ್ಯಾಕರಣ ಪಂಡಿತರೆಂದು ಸ್ವತಃ ಸಿದ್ಧವಾಯಿತು. ತಮ್ಮ ಮನಸ್ಸೆಂಬ ಮಂದರ ಪರ್ವತವನ್ನು ಇದರಲ್ಲಿ ಹಾಕಿ ಕಡೆದು, ರಾಮಚಂದ್ರ ದೇವರ ಯಶಸ್ಸನ್ನು ಹೊಗಳತಕ್ಕವರು ಎಂದ ಮೇಲೆ, ರಾಮ ಯಶೋಂಬುಧಿಯಲ್ಲಿ ಮಹಾ ಆಸಕ್ತರೆಂದು ಅಭಿಪ್ರಾಯವು.

॥ ಸಂಗ್ರಹ ರಾಮಾಯಣೆ ಪ್ರಥಮಸ್ಸರ್ಗ ಪ್ರಾರಂಭಃ ॥

॥ ಹರಿಃ ॥ ॥ ಓಂ ॥ ಶ್ಲೋ ॥ ಪ್ರಣಮ್ಯ ಸಮ್ಯಕ್ಪುರುಷಂ ಪುರಾಣ ಮವರ್ಧತೋಚ್ಚೈರ್ಹನುಮಾನ್ಮಹಾದ್ರೌ ॥ ಲಂಕಾಂ ದಿಧಕ್ಷನ್ನಿವ ಧೂಮಕೇತು ರ್ಘನೋಪಮಾಂ ತತ್ರ ಯಯೌಘನೌಘಃ ॥ ೧ ॥

ತಾ ॥ ಹನುಮಂತ ದೇವರು ಪುರಾಣ ಪುರುಷನಾದಂಥ ಶ್ರೀ ರಾಮಚಂದ್ರ ದೇವರನ್ನು ಚೆನ್ನಾಗಿ ನಮಸ್ಕಾರ ಮಾಡಿ, ಮಹೇಂದ್ರ ಪರ್ವತದಲ್ಲಿ ನಿಂತು, ಲಂಕಾ ಪಟ್ಟಣವನ್ನು ಸುಡ ಬೇಕೆಂಬ ಇಚ್ಛೆಯುಳ್ಳವನಾಗಿ, ಧೂಮಕೇತುವಿನಂತೆ (ಅಗ್ನಿಯಂತೆ) ಹೆಚ್ಚಾಗಿ ಬೆಳೆದನು. ಆ ಕಾಲದಲ್ಲಿ ಮೇಘ ಸಮೂಹವು ಹೊಗೆಯ ಸಾಮ್ಯವನ್ನು ಹೊಂದಿತು. ॥ ೧ ॥

ಲಾಂಗೂಲ ಮಾವಿಧ್ಯ ಸರೋಮ ಹರ್ಷಂ ವಿಕುಂಚ್ಯ ಕರ್ಣಾವವಲೋಕ್ಯ ಲಂಕಾಂ ||
ಗಿರಾವವಷ್ಟಭ್ಯ ಕರಾವುತಾಂಘ್ರೀ ಸ ಉತ್ಪತಿಷ್ಯ್ರ ವಿರರಾಜ ವೀರಃ || ೨ ||

ವೀರನಾದ ಹನುಮಂತ ದೇವರು ಬಾಲವನ್ನು ನೆಲಕ್ಕೆ ಹೊಡೆದು, ರೋಮ ಹರ್ಷದಿಂದ ಕೂಡಿ, ಕಿವಿಗಳನ್ನು ಗೂಟದಂತೆ ನೆಟ್ಟಗೆ ಮಾಡಿಕೊಂಡು, ಲಂಕಾಪಟ್ಟಣವನ್ನು ನೋಡಿ, ಮಹೇಂದ್ರ ಪರ್ವತವನ್ನು ಕಾಲಿನಿಂದ ತುಳಿದು ಕೈಗಳನ್ನು ಮೇಲಕ್ಕೆತ್ತಿ ಹಾರುವುದಕ್ಕೆ ಸಿದ್ಧರಾಗಿ ಪ್ರಕಾಶಿಸಿದರು.

ಪ್ರಾಣಾ ಸಮಾಯಮ್ಯ ಸಮರ್ಜು ಕಾಯೊ ಧ್ಯಾಯರ್ನ ಸ ಯೋಗೀವ ರಘು ಪ್ರವೀರಂ ||
ವ್ಯಚೀಕಸ ದ್ವ್ಯಕ್ತ ಮಥಾತ್ಮ ತೇಜಃ ಫಣಾ ಸಹಸ್ರಂ ಫಣಿನಾ ಮಿವೇಶಃ || ೩ ||

ಪಂಚ ಜ್ಞಾನೇಂದ್ರಿಯಗಳು (ರೂಪ, ರಸ, ಗಂಧ, ಶಬ್ಧ, ಸ್ಪರ್ಶ) ವಾಕ್, ಪಾಣಿ, ಪಾದ, ವಾಯು ಉಪಸ್ಥ, ಇವು ಕರ್ಮೇಂದ್ರಿಯಗಳು. ದಶ ವಿಧ ಪ್ರಾಣಗಳನ್ನು ನಿಗ್ರಹಿಸಿ, ರುಜು ಕಾಯನಾಗಿ, ರಘುಪ್ರವೀರನಾದ ಶ್ರೀ ರಾಮಚಂದ್ರ ದೇವರನ್ನು ಧ್ಯಾನ ಮಾಡುವ ಮಹಾ ಯೋಗಿಯಂತೆ ಸಹಸ್ರ ಫಣಗಳುಳ್ಳ ಶೇಷದೇವರೋಪಾದಿಯಲ್ಲಿ ತಮ್ಮ ಶರೀರ ಕಾಂತಿಯುಳ್ಳವರಾಗಿ, ದೇಹವನ್ನು ವಿಸ್ತಾರವಾಗಿ ಬೆಳೆಸಿದರು.

ಸ್ಯಾನ್ನಃ ಪುನ ರ್ದರ್ಶನ ಮಿತ್ಯುದೀರ್ಯ ಸ ಗದ್ಗದಂ ಸನ್ನಗಿರಃ ಕಪೀಂದ್ರಾ ॥
ಆಹ್ಲಾದಯ ಸ್ಸಾಹಸ ಮೇಘ ಘೋಷಃ ಸುಮೇರು ಸಂಕಾಶ ತನು ರ್ಹನೂಮಾ ॥ ೪ ॥

ಕಪಿ ಶ್ರೇಷ್ಠರುಗಳು ಆನಂದದಿಂದ ಗದ್ಗದ ಕಂಠವುಳ್ಳವರಾಗಿ, ಪುನಃ ತಮ್ಮ ಸಂದರ್ಶನವು ಜಾಗ್ರತೆಯಾಗಿ ನಮಗೆ ಲಭಿಸಲಿ ಎಂದು ಹೇಳುತ್ತಿರಲಾಗಿ, ಮೇಘದಂತೆ ಗಂಭೀರವಾದ ಧ್ವನಿಯುಳ್ಳ ಸುಮೇರು ಪರ್ವತಕ್ಕೆ ಸದೃಶವಾದ ದೇಹವುಳ್ಳವರಾಗಿ ಕಪಿಗಳನ್ನು ಸಂತೋಷ ಪಡಿಸುವಂಥಾವರಾಗಿ ಮಾತನಾಡುತ್ತಾರೆ. “ ಶ್ಯಾನ್ನ ಪುನಃ ದ್ದರ್ಶನಂ ” ಎಂಬಲ್ಲಿ ವಿಶೇಷವೇನೆಂದರೆ : “ ಮಾಯಾಹೀತ್ಯಪ ಮಂಗಳಂ ವ್ರಜಸಖೇ ಸ್ನೇಹೇನ ಹೀನಂ ವಚಃ । ತಿಷ್ಠೇತಿ ಪ್ರಭುತಾ ಯಥಾ ಮತಿ ಕುರು ಷ್ವೇಷಾಪ್ಯುದಾಶೀನತಾ ॥ ತಾತ್ಪರ್ಯ॥ ಪ್ರಯಾಣ ಕಾಲದಲ್ಲಿ ಹೋಗ ಬೇಡಿ ಅಂದರೆ - ಶುದ್ಧ ಅಪ ಶಕುನವು. ಅಮಂಗಳ ಕರವಾದ ಮಾತಾಯಿತು. ಹೋದರೆ ಹೋಗರಿ, ಬಿಟ್ಟರೆ ಬಿಡಿ ಅಂದರೆ - ಸ್ನೇಹದಿಂದ ಹೀನವಾದ ಮಾತಾಗುತ್ತೆ. ಇರಿ : ಇರಿ : ಏನು ಹೋಗೋದು ? ಅಂದರೆ – ಅವರ ಮೇಲೆ ಪ್ರಭುತ್ವ ಮಾಡಿದಂತೆ ಆಗುತ್ತೆ ; ಹ್ಯಾಗೆ ಮನಸ್ಸುಬಂದರೆ ಹಾಗೆ ಮಾಡಿ; ಅಂದರೆ – ಉದಾಶೀನತೆಯನ್ನು ತೋರಿಸಿದಂತೆ ಆಗುತ್ತೆ. ಆದ್ದರಿಂದ ಇನ್ನೇನು ಹೇಳಬೇಕಾಯ್ತು?

ಅಂದರೆ – ಜಾಗ್ರತೆಯಾಗಿ ತಮ್ಮ ಸಂದರ್ಶನವು ನಮಗೆ ಲಭಿಸಲಿ " ಎಂದು ಕಪಿಗಳೆಲ್ಲರೂ ಹನುಮಂತ ದೇವರನ್ನು ಪ್ರಾರ್ಥನ ಮಾಡಿದರು.

ರಾಮಸ್ಯ ಭೂಮ್ನಃ ಶರವತ್ಪರೇಯಃ ಪ್ರೇಕ್ಷೇಯ ಮಾರ್ಯಾ (ಸೀತಾ) ಮಧುನೈವ ನೋಚೇತ್ ॥
ಲಂಕಾಮಹಂ ಪದ್ಮ ವದಾನಯೇಯಂ ಬಧ್ವಾ ದಶಾಸ್ಯಂ ಪಶುವದ್ಧರೇಯಂ ॥ ೫ ॥

ಗುಣ ಪರಿಪೂರ್ಣನಾದ ಶ್ರೀ ರಾಮಚಂದ್ರದೇವರ ಬಾಣದಂತೆ ಮಹಾತ್ವರಾಯುಕ್ತನಾಗಿ (ಮಹಾ ವೇಗವುಳ್ಳವನಾಗಿ) ಈಗಲೇಯೇ ಲಂಕಾ ಪಟ್ಟಣಕ್ಕೆ ಹೋಗಿ, ಆರ್ಯಳಾದ ಸೀತಾ ದೇವಿಯನ್ನು ನೋಡಿ ಬರುತ್ತೇನೆ. ಹಾಗಿಲ್ಲದಿದ್ದರೆ ಆ ಲಂಕಾ ಪಟ್ಟಣವನ್ನು ಕಮಲ ಪುಷ್ಪದಂತೆ ಕೈಯಲ್ಲಿ ತರುತ್ತೇನೆ. ದಶ ಕಂಠನನ್ನು (ರಾವಣನನ್ನು) ಪಶುವಿನಂತೆ ಕಟ್ಟಿ ತರುತ್ತೇನೆ.

ಸಿಂಧೂನಥಾಂಧೂನಿವ ಶೋಷಯೇಯಂ ಗಿರೀ ಗುರ್ರೂ ಕಂದುಕವತ್ ಕ್ಷಿಪೇಯಂ ।
ಸುರಾ ಸುರಾನಪ್ಯಜವ ಜ್ಜಯೇಯಂ ತಥಾಪಿ ದೇವೀಂ ಧ್ರುವ ಮಾನಯೇಯಂ ॥ ೬ ॥

ಸಮುದ್ರಗಳನ್ನು ಕ್ಷುದ್ರ ನದಿಗಳಂತೆಯೂ ದೊಡ್ಡದೊಡ್ಡ ಬೆಟ್ಟಗಳನ್ನು ಚಂಡಿನಂತೆಯೂ ಮೇಲಕ್ಕೆ ಎಸೆಯುತ್ತೇನೆ. ದೇವ, ದೈತ್ಯರುಗಳನ್ನು ಮೇಕೆಗಳಂತೆ ಜಯಿಸಿ, ಸೀತಾದೇವಿಯನ್ನು ಖಂಡಿತವಾಗಿಯೂ ತರಲೇ ತರುತ್ತೇನೆ. ಇದು ನಿಶ್ಚಯವು.

ಸಮೀರವ ತ್ಸರ್ವ ಜಗದ್ವಿಲೇಯಂ ಪಶ್ಯೇಯ ಮಾರ್ಯಾಂ ಪುನರಾ ನಯೇಯಂ ।
ಸತ್ಯಂ ಸಖಾಯಃ ಪುನರೇವ ಸತ್ಯಂ ರಾಮ್ಯೈ ಕದಾ ಸೋಽಸ್ಮಿ ಹಿ ಪಾವಮಾನಿಃ ॥ ೭ ॥

ವಾಯುವಿನಂತೆ ಸಮಸ್ತ ಪ್ರದೇಶಗಳಲ್ಲಿಯೂ ಆರ್ಯಳನ್ನು ಹುಡುಕಿ ನೋಡಿ, ಸೀತಾದೇವಿಯನ್ನು ಪುನಃ ಈಗಲೇನೇ ಕರೆತರುತ್ತೇನೆ. ಇದು ಸತ್ಯವಾದ ಮಾತಾಗಿದೆ. ಏಕೆಂದರೆ ನಾನು ರಾಮದೇವರ, ಮುಖ್ಯ ದಾಸನಾಗಿರುತ್ತೇನೆ ॥ ೭ ॥

ಇತ್ಥಂ ಸುಗಾಂ ಕಾಮದುಘಾಂ ಪ್ರದಾಯ ಸ್ವಬಂಧುತಾಯೈ ಸುಖಜೀವನಾಯ ॥
ನಿಷ್ಪಿಡ್ಯ ಮಾಹೇಂದ್ರ ಮಿಮಂ ಪದಾಭ್ಯಾಂ ವಿನಿಷ್ಪತನ್ನಂಬರ ಮಾಲಲಂಬೆ ॥ ೮ ॥

ಈ ಪ್ರಕಾರವಾಗಿ ತಮ್ಮ ಬಂಧು ಸಮುದಾಯವು ಸುಖವಾಗಿರಲು, ಕಾಮಧೇನುವಿನಂತೆ ಇರುವ

ಮಾತನ್ನು ಕೊಟ್ಟು, ಅಂದರೆ ಕಪಿಸಮೂಹಕ್ಕೆ ಸುಖಪ್ರದವಾಗಿಯೂ, ಇಷ್ಟಾರ್ಥಗಳನ್ನು ಕೊಡುವದಾಗಿಯೂ, ಇರುವ ಮಾತುಗಳನ್ನು ಹೇಳಿ (ಮಾತುಕೊಟ್ಟು) ಮಹೇಂದ್ರಪರ್ವತವನ್ನು ಕಾಲುಗಳಿಂದ ಒತ್ತಿ, ಹಾರುವಂಥವರಾಗಿ, ಆಕಾಶಮಾರ್ಗವನ್ನು ಅವಲಂಬಿಸಿದರು ॥ ೮ ॥

ತತ್ಪೀಡಿತೋದ್ರಿ ರ್ಭುವಿ ಮಂಕ್ಷುಮುಗ್ನೋ ಮಹಾಭರಾಕ್ರಾಂತ ಇವಪ್ಲವೋಪ್ಸು ॥
ಅನುಸ್ರವಂ ಸ್ತ್ರತ್ರ್ಯಜ ಧಾತು ಧಾರಾ ವಿದಾರಿತೇದೇಹ ಇವಾಸ್ರಧಾರಾಃ ॥ ೯ ॥

ಈತನಿಂದ ಪೀಡಿತವಾದ ಈ ಪರ್ವತವು ಮಹಾಭಾರದಿಂದ ಆಕ್ರಮಿಸಲ್ಪಟ್ಟ ಹಡಗು ನೀರಿನಲ್ಲಿ ಮುಳುಗಿ ಹೋಗುವಂತೆ ಭೂಮಿಯಲ್ಲಿ ಹೂತುಗೊಂಡಿತು. ಹೀಗಾಗುತ್ತಿರಲು ಆ ಪರ್ವತದಲ್ಲಿ ಇರುವ ಧಾತುಗಳ ಧಾರೆಗಳು ಹೇಗಾಯಿತೆಂದರೆ :— ದೇಹವು ಶೀಳಲ್ಪಟ್ಟರೆ ಒಳಗಿರತಕ್ಕಂಥ ರಕ್ತ ಮಾಂಸ ಮುಂತಾದ ಒಳಗಿನ ಸಾಮಾನುಗಳು ಬಂದು ಹೇಗೆ, ಈಚೆಗೆ ಬರುವವೋ ಹಾಗೆಯೇ ಧಾರೆಗಳು ಬಂದವು॥೯॥

ಪತತ್ಯಮುಷ್ಮಿ ಪರಿಲೋಡ್ಯಮಾನಾ ಛೈಲಾ ಚ್ಛಿಲಾ ಜಾಲಮಧಃಪಪಾತ ॥
ವಿದ್ಯಾಧರಾಣಾಂಚ ತಪಸ್ವಿನಾಂಚ ಸಸುಂದರೀಕಂ ಕುಲ ಮುತ್ಪಪಾತ ॥ ೧೦ ॥

ಈ ಹನುಮಂತನು ಹಾರುತ್ತಿರುವ ವೇಗದಿಂದ ಅಲ್ಲಾಡಿಸಲ್ಪಟ್ಟ ಶಿಖರಗಳ ಸಮೂಹವು; ಪರ್ವತಗಳ ದೆಶೆಯಿಂದ ಕೆಳಗೆಬಿದ್ದವು ಮತ್ತು, ವಿದ್ಯಾಧರರೂ ತಪಸ್ವಿಗಳೂ, ಇವರುಗಳಸಮುದಾಯವು ತಮ್ಮ ತಮ್ಮಸ್ತ್ರೀಯರ ಸಮೇತರಾಗಿ ಹಾರಿ ಕೆಳಗೆಬಿದ್ದರು ॥ ೧೦ ॥

ರಾಮಪ್ರಿಯಾಂ ರಾಮಚರೋ ದಿದೃಕ್ಷುರ್ನನ್ವೇಪಪಾತೇನ ಸಸಾರಸಿಂಧುಂ ॥
ತಂ ವಿಸ್ಮಯಂ ವಕ್ತು ಮಿವ ತ್ರಿಲೋಕ್ಯಾಂ ಪರ್ಯಾನಸೇ ತತ್ರ (ಹಿ) ಸಿಂಹನಾದಃ ॥ ೧೧ ॥

ಶ್ರೀ ರಾಮದೇವರ ದೂತನಾದ ಹನುಮಂತನು ರಾಮದೇವರ ಪ್ರಿಯಳಾದ ಸೀತಾದೇವಿಯನ್ನು ನೋಡ ಬೇಕೆಂಬ ಅಪೇಕ್ಷೆಯಿಂದ ಒಂದೇಹಾರಿಕೆಯಿಂದಲೇ ಸಮುದ್ರವನ್ನು ಹಾರಿದನು. ಇಂಥಾ ವಿಸ್ಮಯವನ್ನು (ಆಶ್ಚರ್ಯವನ್ನು) ಮೂರುಲೋಕಗಳಿಗೂ, ಹೇಳುತ್ತಾನಯೇನೋ ಎನ್ನುವಹಾಗೆ ಹಾರಿದ್ದಲ್ಲದೆ ಅಲ್ಲಿ ಸಿಂಹನಾದವನ್ನೂ ಸಹ ಮಾಡಿದನೆಂಬುವುದು ಪ್ರಸಿದ್ಧವು ॥ ೧೧ ॥

ದೇವೋಪ ದೇವರ್ಷಿಗಣಾ ಅಗಣ್ಯಾಃ ವಧೂಯುತಾ ವಿಸ್ಮಯಿನಃಖಮಾಪ್ಯ ॥
ವಿಕಾಸಿಭಿ ಶ್ಚಾರುತಮೈಃ ಪ್ರಸೂನೈ ರಪೂಜಯಂಸ್ತಂ ನಯನಾಂಬುಜೈಶ್ಚ ॥ ೧೨ ॥

ಅಗಣಿತ ಸಂಖ್ಯಾಕರಾದ ದೇವತೆಗಳೂ, ಉಪದೇವತೆಗಳೂ, ದೇವಋಷಿಗಳ ಸಮೂಹವೂ ಸಹಾ, ತಮ್ಮ ತಮ್ಮ ಪತ್ನಿಯರುಗಳಿಂದ ಸಮೇತರಾಗಿ, ಆಶ್ಚರ್ಯಯುಕ್ತರಾಗಿ, ಅಂತರಿಕ್ಷಪ್ರದೇಶಿಕ್ಕೆಬಂದ, ಮನೋಹರಗಳಾದ ತಮ್ಮ ತಮ್ಮ ನೇತ್ರಕಮಲಗಳಿಂದಲೂ, ಅರಳಿದ ಸುಗುಂಧ ಯುಕ್ತವಾದ ಪುಷ್ಪಗಳಿಂದಲೂ, ಈ ಹನುಂತದೇವನನ್ನು ಪೂಜಿಸಿದರು. ಅಂದರೆಃ— ದೇವತೆಗಳು ಪುಷ್ಪವೃಷ್ಟಿಯನ್ನು ಕರೆದು, ಸಂತೋಷದಿಂದ ನೋಡುತ್ತಿದ್ದರೆಂದು ತಾತ್ಪರ್ಯ ॥ ೧೭ ॥

ಕುತೂಹಲಾ ತ್ಯಾಯತ ಲೋಚನಾಸು ಸರ್ವಾಸುತಾ ಸ್ವಾಯತ ಲೋಚನಾಸು ॥
ವದತ್ಸುಸರ್ವೇ ಷ್ವಪಿ ಸಾಧು ಸಾಧ್ವಿ ತುಚ್ಚೈರ್ಮುನೀಂದ್ರಾ ಮುದಿತಾ ಅವ್ರೋಚ್ಚ ॥ ೧೮ ॥

ಕುತೂಹಲದಿಂದ ಅತ್ಯಂತವಿಸ್ತಾರವಾದ ಕಣ್ಣುಗಳುಳ್ಳ ಸಮಸ್ತವಾದ ದೇವತಾಸ್ತ್ರೀಯರ ಸಮೂಹವು ಅಂತರಿಕ್ಷದಲ್ಲಿ "ಶಹಬಾಸ್, ಶಹಬಾಸ್" ಅಂತ ಹೇಳುತ್ತಿರಲು, ಋಷಿಶ್ರೇಷ್ಠರುಗಳು ಸಂತೋಷದಿಂದ ಹನುಮಂತದೇವರನ್ನು ಘಟ್ಟಿಯಾಗಿ ಸ್ತೋತ್ರಮಾಡಿದರು ॥ ೧೮ ॥

ಗುಣೇನಸಂಧಾಯಿ ಗುಣಾರ್ಣವೇನ ರಾಮೇಣಮುಕ್ತೋ ರಣಪಂಡಿತೇನ ॥
ಸ್ವಪಕ್ಷ ದಕ್ಷಃ ಸಫಲೋ ಹನೂರ್ಮಾ ಶರೋಪಮೋರ್ರೀ ತ್ವರತೇ ನಿಹಂತುಂ ॥ ೧೪ ॥

ಧನುಸ್ಸನ್ನು ಜ್ಯಾ ಪೂರ್ಣಮಾಡೀ, ಗುಣಗಳಿಂದ ಸಮುದ್ರಸ್ಥಾನೀಯನಾದ ರಣಪಂಡಿತನಾದ (ಯುದ್ಧದಲ್ಲಿ ಮಹಾ ವಿಶಾರದನಾದ) ಶ್ರೀ ರಾಮಚಂದ್ರದೇವರಿಂದ ಬಿಡಲ್ಪಟ್ಟ ಬಾಣವು ಬಂದು ಹೇಗೆ ಹೋಗುತ್ತದೆಯೋ ಹಾಗೆ, ಶತ್ರುಸಂಹಾರದಲ್ಲಿ ಆತುರವುಳ್ಳವನಾಗಿಯೂ ತನ್ನಪಕ್ಷವನ್ನು ಸಂರಕ್ಷಿಸತಕ್ಕ ವಿಷಯದಲ್ಲಿ ದಕ್ಷನಾದ ಹನುಮಂತನು ರಾಮದೇವರ ಬಾಣದವೇಗದಂತೆಯೇ, ಮಹಾವೇಗದಿಂದಲು ಶತ್ರುವಿನ ಪಟ್ಟಣವನ್ನು ಕುರಿತು ಹಾರಿದನು ॥ ೧೪ ॥

ಅಸ್ಯೋರುವೇಗೈರನುಕೃಷ್ಯಮಾಣಾ ನಾನಾನಗಾಶ್ಚಂದನ ಚಂಪಕಾದ್ಯಾಃ ॥
ಕೃತ್ವಾನುಯಾನಂ ಸುಮನೋಭಿಸಾರೈಃ ನಮಂತಿಭಕ್ತ್ಯಾ ಇವ ವಾರಿಪಾರೇ ॥ ೧೫ ॥

ಈ ಹನುಮಂತದೇವರ ತೊಡೆಗಳವೇಗದಿಂದ ಹುಟ್ಟಿದ ಗಾಳಿಯಿಂದ ಆಕರ್ಷಿಸಲ್ಪಟ್ಟಂಥ ಅನೇಕ ಪರ್ವತಗಳೂ, ಶ್ರೀಗಂಧ, ಚಂದನ, ಚಂಪಕಾದಿವೃಕ್ಷಗಳ ಸಮುದಾಯವು ಈ ಹಾರುತ್ತಿರುವ ಹನು

ನುಂತದೇವರಿಗೆ ಭಕ್ತರೋಪಾದಿಯಲ್ಲಿ ಕೆಲವು ದೂರವಾಗಿ ಅನುಯಾನ (ಬೆನ್ನು ಹತ್ತಿ) ನಮಸ್ಕಾರ ಮಾಡು ವಂತೆ, ಸಮುದ್ರತೀರದಲ್ಲಿ ತೋರುತ್ತಿದ್ದಿತು ॥ ೧೫ ॥

ಉಪರ್ಯುಪರ್ಯೇ ನಮಥೋ ಅಧೋಧೋ ಲಸಂತಿಮೇ ಘಾಸ್ತ್ರರಸಾಭಿಕೃಷ್ಟಾಃ ॥
ಶಿತಾ ಸಿತಾ ರಕ್ತರುಚಶ್ಚಯಾದ್ವದ್ಧರಿಪ್ರವೀರಾಃ ಪರಿವಾರಭೂತಾಃ ॥ ೧೬ ॥

ಮೇಲಕ್ಕೆ ಮೇಲಕ್ಕೆ ಹೋಗುತ್ತಾ ಇರುವ ಈತನ ವೇಗದಿಂದ ಕೆಳಗೆ ಕೆಳಗೆಮಾಡಲ್ಪಟ್ಟ ಬಿಳಪೂ,ಕಪ್ಪೂ ಕೆಂಪೂ, ಬಣ್ಣಗಳಿಂದ ಯುಕ್ತರಾದ ಕಪಿಶ್ರೇಷ್ಠರುಗಳು ಈತನನ್ನು ಅನುಸರಿಸಿದರೆ ಹೇಗೆ, ಇರುವುದೋ ಹಾಗೆ ಪರಿವಾರ ಭೂತರಾಗಿ ಇದ್ದುವು ॥ ೧೬ ॥

ನಿಪಾತವಾತೈಃ ಪರಿಲೋಡ್ಯಮಾನಃ ಫೇನಾಯಮಾನಃ ಸಕಲೋಪಿಸಿಂಧುಃ ॥
ಆಶಂಕತೇ ರಾಮಯಶೋಂಬುಧಿರ್ವಾ ಪಯೋಂಬುಧಿರ್ವೇತ್ಯಪಿಹಾರಗೌರಃ ॥ ೧೭ ॥

ಈತನುಹಾರುವ ವೇಗದಿಂದ ಹುಟ್ಟಿದಂಥ ಗಾಳಿಯಿಂದ ಅಲ್ಲೋಲ ಕಲ್ಲೋಲ ಮಾಡಲ್ಪಟ್ಟ ನೊರೆ ಗಳಿಂದ ಕೂಡಿದ ಸಮುದ್ರವೆಲ್ಲವೂ, ಇದೇನು ಸಮುದ್ರವೋ “ ಅಥವಾ ಶ್ರೀರಾಮಚಂದ್ರನ ಯಶಸ್ಸೆಂಬ

ಸಮುದ್ರವೋ ಅಂದರೆ - ರಾಮಚಂದ್ರನ ಯಶಸ್ಸೆಂಬುವುದು ಹೇಗೆ ಹರಡಿದೆಯೋ ಹಾಗೆ ಬಿಳಿಯಬಣ್ಣ ದಿಂದ ಕೂಡಿತ್ತೆಂದು ಅಭಿಪ್ರಾಯವು.

ದ್ರೋಣೀ ಕರೋತ್ಯೇಷ ಸಮುದ್ರ ಮಧ್ಯಂ ವೇಗಾಃ ನಿಲೇನಾಃ ನಿಲ ದೇವ ಸೂನುಃ ॥
ಶ್ರೇತುಂ ವಿಧಾತುಂ ಹರಿ ವಾಹಿನೀನಾಂ ಪುರೇವ ಕುರ್ವನ್ನಿವ ಲಕ್ಷ್ಮರೇಖಾಂ ॥ ೧೮ ॥

ಈ ಹನುಮಂತ ದೇವರು ಸಮುದ್ರ ಮಧ್ಯವನ್ನು ತಮ್ಮ ವೇಗದಿಂದ ದೋಣಿಯ ಹಾಗೆ ಮಾಡಿ, ಮುಂದೆ ಕಪಿ ಸೈನ್ಯವು ಹೋಗುವುದಕ್ಕೆ ಅನುಕೂಲವಾಗುವಂತೆ ಮೊದಲೇ ಗುರ್ತಿನ ರೇಖೆ ಹಾಕಿದಂತಿದ್ದಿತು.

ಇಂದ್ರಧ್ವಜಾಭಂ ಸ್ಫುರಿತ ದ್ಯುಸಂಗಿ ಲಾಂಗೂಲ ಮುಸ್ಯಾಖಿಳ ಮಂಗಳಾಯ ॥
ತದ್ವೈಜಯಂತೀ ಮಿವ ಮೇಘ ಪಾಲಿಂ ಡೋಲಾಯಮಾನಾ ಮವಲೋಕಯಧ್ವಂ ॥ ೧೯ ॥

ಕಾಮನ ಬಿಲ್ಲಿನೋಪಾದಿಯಲ್ಲಿ ಪ್ರಕಾಶಿಸುವ ಈತನ ಬಾಲವು ಆಕಾಶಮಾರ್ಗವನ್ನು ಅವಲಂಬಿಸಿ ನೋಡುವವರಿಗೆ ಮೇಘ ಮಂಡಲದಲ್ಲಿರುವ ವೈಜಯಂತಿ ಮಾಲೆಯೋ ಎಂಬುವ ಹಾಗೆ ಎಲ್ಲರಿಗೂ ಮಂಗಳ ಪ್ರದವಾಗಿ ಪ್ರಕಾಶಿಸಿತು. (ಇದು ಹನುಮಂತ ದೇವರ ಬಾಲದ ವರ್ಣನೆಯು.)

ಹಸ್ತಾವುದಸ್ತೌ ಲಸತೋಽಸ್ಯದೀರ್ಘೌ ಪೀನೌ ಸುವೃತ್ತೌ ಪವಮಾನಸೂನೋಃ ॥
ಅರ್ಘೋರ್ಧ್ವಗತೌ ಪರ್ವತ ಪಾರ್ಶ್ವಯುಗ್ಮಾ ಪಂಚಾಸ್ಯವಂತಾವಿವ ಪನ್ನಗೇಂದ್ರೌ ॥ ೨೦ ॥

ವಾಯುಪುತ್ರನಾದ ಈ ಹನುಮಂತ ದೇವರ ಎರಡು ಕೈಗಳು ಉದ್ದವಾಗಿಯೂ, ಗುಂಡಗೂ, ಪುಷ್ಟವಾಗಿಯೂ, ಪ್ರಕಾಶಮಾನವಾಗಿಯೂ, ಇರಲು ಇದು ಹೇಗಿತ್ತೆಂದರೆ " ಪರ್ವತಪಾರ್ಶ್ವದಿಂದ ಹೊರಟು ಬರುತ್ತಿರುವ ಐದು ಮುಖಗಳುಳ್ಳ ಎರಡು ಸರ್ಪಗಳೋಪಾದಿಯಲ್ಲಿ ಪ್ರಕಾಶಿಸಿದುವು."
(ಇದು ಹನುಮಂತ ದೇವರ ಹಸ್ತಗಳ ವರ್ಣನವು)

ಶಸ್ತ್ರಂವಿನಾ ಶತ್ರುಪುರೀಮುಪೈತಿ ಮತ್ತ್ರೋ ಹನೂಮಾನಿತಿ ಮಾಸ್ತುಶಂಕಾ ॥
ನಸ್ಯೇಕವಜ್ರೋ ರಿಪುಮೇತಿ ವಜ್ರೀ ದಶಾಸ್ಯಘೋರಾ ನಖನಾಮ ವಜ್ರಾಃ ॥ ೨೧ ॥

ರಾಮದೂತನಾದ ಹನುಮಂತನು ಆಯುಧವಿಲ್ಲದೆ ಶತ್ರುವಿನ ಪಟ್ಟಣವನ್ನು ಪ್ರವೇಶಿಸುತ್ತಾನಲ್ಲಾ! ಇದೇನು? ಎಂತ ತಿಳಿಯಬಾರದು. ಏಕೆಂದರೆ:–ವಜ್ರಾಯುಧವನ್ನು ಧರಿಸಿದ ಇಂದ್ರನಿಗೆ ಒಂದು ವಜ್ರಾಯುಧ ವಿದ್ದರೆ ಈತನಿಗಾದರೋ, ಹತ್ತು ಉಗುರುಗಳು ಹತ್ತು ವಜ್ರಾಯುಧವಾಯಿತು. ಆಯುಧವು ಏತಕ್ಕೆ ಇಲ್ಲವು?

(ಇದು ಉಗುರುಗಳ ವರ್ಣನೆಯು.)

ಸಹೋದಯೇತಾ ಮುದಯಾದ್ರಿಶೃಂಗೇ ರವೀ ಯದಿದ್ವೌ ನವಧಾತು ತಾಮ್ರೇ ॥
ತರ್ಹೀಕ್ಷಣೇ ತಾಮ್ರತರೇ ಸುವೃತ್ತೇ ತಾಮ್ರಾನನಾಸ್ಯಾಸ್ಯ ವಿಡಂಬಯೇತಾಂ ॥ ೨೨ ॥

ನವಧಾತುಗಳಿಂದ ತಾಮ್ರವರ್ಣವುಳ್ಳ (ಕೆಂಪಗಿರುವ) ಉದಯಾಚಲದ ಕೋಡುಗಲ್ಲಿನಿಂದ ಏಕಕಾಲದಲ್ಲಿ ಹುಟ್ಟುತ್ತಿರುವ ಇಬ್ಬರು ಸೂರ್ಯರೋಪಾದಿಯಲ್ಲಿ ಕೆಂಪುಮುಖವುಳ್ಳ ಈ ಹನುಮಂತ ದೇವರ ದುಂಡಾಗಿರುವ ಎರಡು ಕಣ್ಣುಗಳು ಥಳಥಳನೆ ಪ್ರಕಾಶಿಸಿದುವು . (ಇದು ಕಣ್ಣುಗಳ ವರ್ಣನೆಯು.)

ಅರ್ಧೋದ್ಗತೇ ಇಂದುಕಳೇಇವದ್ವೇ ದಂಷ್ಟ್ರೇ ಅಮುಷ್ಯ ಸ್ಫಟಿಕ ಸ್ಫುಟಾಭೇ ॥
ಸದ್ಭಕ್ತಿವಧ್ವಾ ಸ್ಥಿರಯೋಗ ಭಾಜಾಂ ಸುಖಾಯ ದುಃಖಾಯ ವಿಯೋಗ ಭಾಜಾಂ ॥ ೨೩ ॥

ಈ ಹನುಮಂತದೇವರ ಎರಡು ಕೋರೆದಾಡೆಗಳು ಉದಯಿಸುತ್ತಿರುವ ಇಬ್ಬರು ಚಂದ್ರರುಗಳ ಕಳೆಯೋಪಾದಿಯಲ್ಲಿ ಸ್ಫಟಿಕದಂತೆ ಮಹಾಕಾಂತಿ ಯುಕ್ತವಾಗಿಯೂ, ಸದ್ಭಕ್ತಿಯಿಂದ ಯುಕ್ತರಾದ ಯೋಗಿಗಳಿಗೆ ಸುಖಪ್ರದವಾಗಿಯೂ, ವಿಯೋಗಿಗಳಿಗೆ ಅಂದರೆ ಭಕ್ತಿಹೀನರಿಗೆ ದುಃಖಪ್ರದವಾಗಿಯೂ, ಪ್ರಕಾಶಿಸಿದುವು .

(ಇದು ಈತನ ಕೋರೆದಾಡೆಗಳ ವರ್ಣಣನೆಯು.)

ಮೇರುಸ್ಸುರೇಂದ್ರೇಣ ಸುರಾಚಲತ್ವಾ ದಚ್ಛಿನ್ನಪಕ್ಷೋಡಯತೀಹ ನೂನಂ ॥
ಇತಿಪ್ರತರ್ಕಂ ತನುತೇ ಪ್ರಜಾನಾಂ ಶರೀರಮಸ್ಯಾ ತನುಹೇಮಧಾಮ ॥ ೨೪ ॥

ಈ ಹನುಮಂತದೇವರ ಶರೀರವನ್ನು ಜನಗಳು ನೋಡಿ ಆಗತಾನೆ ಪುಟಕ್ಕೆಹಾಕಿದ ಭಂಗಾರದಂತೆ ಕಾಂತಿಯುಳ್ಳ ಶರೀರವನ್ನು ನೋಡಿ ಮೇರುಪರ್ವತವು ಇಂದ್ರನಿಂದ ರಕ್ಷಿಸಲ್ಪಟ್ಟ ರೆಕ್ಕೆಗಳುಳ್ಳದ್ದಾಗಿ ಅಂತರಿಕ್ಷದಲ್ಲಿ ಏನಾದರೂ ಹಾರುತ್ತಿದೆಯೋ, ಏನೋ? ಅನ್ನುವಹಾಗೆ ಜನಗಳು ಊಹಿಸುತ್ತಿದ್ದರು. (ಈತನ ಶರೀರ ವರ್ಣನೆಯು.)

ಅಲಂಕರೋತ್ಯಸ್ಯ ವಿಶಾಲಮೂರ್ತ್ತೇ ರುರೋವಿಶಾಲಂ ವನಮಾಲಿಕೇಯಂ ॥
ಆಕಾಶ ಮಾಕಾಶ ಸುರಾಪಗೇವ ಸಮುದ್ರಶೀಮೇವ ಭುವ್ರೋವಕಾಶಂ ॥ ೨೫ ॥

ವಿಶಾಲಮೂರ್ತಿಯಾದ ಈ ಹನುಮಂತ ದೇವರ ವಿಶಾಲವಾದ ವಕ್ಷಸ್ಥಳದಲ್ಲಿ ಇರುವ ವನಮಾಲಿಕೆಯು ಆಕಾಶದಲ್ಲಿರುವ ದೇವಗಂಗೆಯಂತೆಯೂ, ಸಮುದ್ರದಿಂದ ಆವರಿಸಲ್ಪಟ್ಟ ಭೂಮಿಯಂತೆಯೂ, ಈತನ

ವಕ್ಷಸ್ಥಳವು ಪ್ರಕಾಶಿಸುತ್ತಿದ್ದಿತು.(ಇದು ಈತನ ವಕ್ಷಸ್ಥಳದ ವರ್ಣನೆಯು.)

ವಿಸ್ತೀರ್ಣ ಭಾವೇ ದಶ ಯೋಜನಾಸ್ಯ ಛಾಯಾಂ ಬುಧೌ ತ ತ್ರಿಗುಣಾಯತೇಯಂ ॥
ಲಬ್ಧ್ವಾ ಕವೀಂದ್ರೈ ರುಪಮಾನ ಭೂಮಿ ರ್ಹನೂಮತೋ ನಹ್ಯಪರಾ ತ್ರಿ ಲೋಕ್ಯಾಂ ॥ ೨೬ ॥

ಈ ಹನುಮಂತ ದೇವರ ಹತ್ತು ಯೋಜನ ವಿಸ್ತೀರ್ಣವುಳ್ಳ ದೇಹದ ನೆರಳು ಸಮುದ್ರದಲ್ಲಿ ಬಿದ್ದು ಒಂದಕ್ಕೆ ಮೂರರಷ್ಟಾಗಿ, ಮೂರು ಲೋಕಗಳಲ್ಲಿಯೂ ಈ ಹನುಮಂತ ದೇವರಿಗೆ ಸಮಾನವಾದ ಹೋಲಿಕೆಯನ್ನು ಹೇಳಲು ಕವಿಗಳು ಮತ್ತಾರೂ ಇಲ್ಲದಂತಾಯಿತು.

ಸುರಾಧಿ ರಾಜಂ ಪತಗಾಧಿರಾಜಃ ಸುಧಾಂ ಜಿಹೀರ್ಷುರ್ಜಿತವಾ೯ ಜವೇನ ॥
ಪ್ಲವಂಗ ರಾಜೋಹಿ ಪತಂಗ ರಾಜಂ ಸೀತಾಂ ಜಿಹೀರ್ಷು ರ್ಜಿತವಾನವಶ್ಯಂ ॥ ೨೭ ॥

ದೇವತೆಗಳಿಗೆ ಒಡೆಯನಾದ ದೇವೇಂದ್ರನನ್ನು ಗರುಡ ದೇವರು ಅಮೃತವನ್ನು ತರಲು ಹೋದಾಗ ವೇಗದಿಂದ ಜಯಿಸಿದನು. ಈಗಲಾದರೋ ಕಪಿ ಶ್ರೇಷ್ಠನಾದ ಹನುಮಂತನು ಸೀತೆಯನ್ನು ನೋಡಲು ಬರುವ ವೇಗದಲ್ಲಿ ಅಂಥ ಗರುಡ ದೇವರನ್ನು ಜಯಿಸಿದನು.

ಕೋವಾ ನರೇಂದ್ರಸ್ಯ ಸಮಾನತಾಯಾಂ ವರ್ತೇತ ಯಸ್ಯಾ ನಿಲಯೇವ ತುಲ್ಯಃ ||
ಕೋವಾ ನರೇಂದ್ರಸ್ಯ ಸಮಾನತಾಯಾಂ ರಾಮಸ್ಯಯೋ ಭಾತಿ ಕೃಪಾಲತಾಯಾಂ || ೨೮ ||

ಈ ಹನುಮಂತ ದೇವರಿಗೆ ಸದೃಶರಾದವರು ವಾಯು ದೇವರ ವಿನಹ ಮತ್ತಾರೂ ಇಲ್ಲವು. ಶ್ರೀ ರಾಮಚಂದ್ರ ದೇವರ ಕೃಪೆಯೆಂಬ ಬಳ್ಳಿಯಲ್ಲಿ ಪ್ರಕಾಶಿಸುವಂಥ ವಾನರ ಶ್ರೇಷ್ಠರಾದ ಹನುಮಂತ ದೇವರಿಗೆ ಸಮಾನರಾದವರು ಮತ್ತಾರಿರುವರು? ಯಾರೂ ಇಲ್ಲವೆಂದು ಅಭಿಪ್ರಾಯವು.

ಜಯತಿ ಜಗತಿ ದಿವ್ಯ ಶ್ರೀ ತನೂರ್ಮಾ ಹನೂರ್ಮಾ
ಅಹಿತ ಮವಹಿತಾತ್ಮಾ ಬಾಹ್ಯ·ಮಭ್ಯಂತರಂಚ ||
ಲಸತಿ ವಸತಿ ಭೂತೇ ಯಸ್ಯ ಚಿತ್ತೇ ವಿಚಿತ್ರೇ
ಭುವನ ಭವನ ಪೂರ್ಣೇ ರಾಮದೇವಸ್ಸದೇತಿ || ೨೯ ||

ಇತಿ ಶ್ರೀಮತ್ಸಂಗ್ರಹ ರಾಮಾಯಣೆ ಸುಂದರಕಾಂಡೆ
ಶ್ರೀ ಮನ್ನಾರಾಯಣ ಪಂಡಿತಾಚಾರ್ಯ ಕೃತೌ ರಾಮಾಂಕೇ ಪ್ರಥಮಸ್ಸರ್ಗಸಮಾಪ್ತಃ.

ಯಾವಾತನ ವಿಚಿತ್ರವಾದ ಮನಸ್ಸಿನಲ್ಲಿ ಲೋಕಗಳಲ್ಲಿ ವ್ಯಾಪ್ತನಾದ ಶ್ರೀ ರಾಮದೇವರು ಸರ್ವದಾ ಪ್ರಕಾಶಿಸುತ್ತಾ ಇದ್ದಾರೋ, ಯಾವಾತನು ಬಾಹ್ಯವಾದ ಮತ್ತು ಆಂತರಂಗಿಕವಾದ ಶತೃಗಳನ್ನ ಜಯಿಸಿದ್ದಾನೋ, ಅಂಥ ಕಾಂತಿ ಯುಕ್ತರಾದ ಹನುಮಂತ ದೇವರು ಸಮಸ್ತ ಜಗತ್ತಿನಲ್ಲಿಯೂ ಶ್ರೇಷ್ಠನಾದ ಭಕ್ತನಾಗಿ ಅಭಿವೃದ್ಧಿಯನ್ನಹೊಂದಿ, ನಮ್ಮ ಆಂತರಂಗಿಕವಾಗಿರತಕ್ಕ ಶತೃವನ್ನು ನಾಶಮಾಡಿ, ಜಗತ್ತಿನಲ್ಲಿ ಜಯಶೀಲನಾಗಲಿ! ಜಯಪ್ರದನಾಗಲಿ!! ಎಂಬಲ್ಲಿಗೆ ಶ್ರೀಮನ್ನಾರಾಯಣ ಪಂಡಿತಾಚಾರ್ಯರವರಿಂದ ರಚಿಸಲ್ಪಟ್ಟ, ಶ್ರೀಮತ್ಸಂಗ್ರಹ ರಾಮಾಯಣ ಸುಂದರಕಾಂಡದ ರಾಮಾಂಕದ ಮೊದಲನೆಯಸ್ಸರ್ಗವು ಸಮಾಪ್ತವು.

— * * —

॥ ದ್ವಿತೀಯಸ್ಸರ್ಗ ಪ್ರಾರಂಭಃ ॥

ಶ್ಲೋ॥ ಪವಮಾನ ಸುತಂವೀಕ್ಷ್ಯ ಪ್ಲವಮಾನಂ ಮಹಾರ್ಣವಃ ॥
ಮಗ್ನಮಾತ್ಮನಿ ಮೈನಾಕಂ ಹಿಮಾದ್ರೇಃ ಸೋನು ರಬ್ರವೀತ್ ॥ ೧ ॥

ತಾ॥ ಈ ರೀತಿಯಾಗಿ ಆಕಾಶದಲ್ಲಿ ಹಾರುತ್ತಿರುವ ವಾಯುಪುತ್ರನಾದ ಹನುಮಂತನನ್ನು ನೋಡಿ ಸಮುದ್ರರಾಜನು ತನ್ನಲ್ಲಿ ಮಗ್ನನಾದ ಹಿಮವತ್ಪರ್ವತದ ಮಗನಾದ ಮೈನಾಕನನ್ನು ಕುರಿತು ಮಾತನಾಡಿದನು.

ಉತ್ತಿಷ್ಠ ಪರ್ವತ ಶ್ರೇಷ್ಠ ವಿಶ್ರಮಾರ್ಥಂ ಹನೂಮತಃ ॥
ರಾಮದೇವಸ್ಯ ದೂತೋಽಯಂ ಮಾನನೀಯೋಽಪಿ ಮಾದೃಶೈಃ ॥ ೨ ॥

ಹೇ ! ಪರ್ವತಶ್ರೇಷ್ಠನಾದ ಮೈನಾಕನೇ ! ಹನುಮಂತದೇವರು ವಿಶ್ರಮಿಸಿಕೊಳ್ಳುವುದಕ್ಕೋಸ್ಕರ ಮೇಲಕ್ಕೆ ಏಳು ! ಏಳು !! ಈತನು ರಾಮದೂತನು! ನಮ್ಮಗಳಿಂದ ಮಾನ್ಯ ಮಾಡಿಸಿ ಕೊಳ್ಳುವುದಕ್ಕೆ ಅರ್ಹನಾದವನೆಂದು ಪ್ರಸಿದ್ಧವು.

ಇತಿ ಸಾರಿಸಿಥೇ ವಾಕ್ಯಾ ದುತ್ತಸ್ಥೌ ಕಾಂಚನಾ ಚಲಃ ॥
ಕಲಾಪಶ್ಯಾಮಲೇಸಿಂಧಾ ವಚಿರಾಂಶು ರಿವಾಂಬುಧೇಃ ॥ ೩ ॥

ಹೀಗೆ ಹೇಳುವ ಸಮುದ್ರರಾಜನ ಮಾತನ್ನು ಕೇಳಿ ಮೈನಾಕಪರ್ವತನು ಸಮುದ್ರದಿಂದ ಮೇಲಕ್ಕೆ ಬಂದಿದ್ದು ಹೇಗಿತ್ತೆಂದರೆ:—ಕಲಾಪಕುಸುಮದಂತೆ ಶ್ಯಾಮಲವಾದ ಸಮುದ್ರದಲ್ಲಿ ಮಿಂಚಿನಂತೆ ಮೇಲಕ್ಕೆದ್ದನು.

ಅನೇಕಸಾನು ಮಾತ್ಮಾನಂ ನಾನಾವನ ಮನೋರಮಂ ॥
ಅನಾದೃತ್ಯೋತ್ಪತಂ ತಂ ತಂ ಹನೂಮಂತಂ ಧರೋಽಬ್ರವೀತ್ ॥ ೪ ॥

ಅನೇಕಸಾನು ಪ್ರದೇಶಗಳುಳ್ಳ ನಾನಾವಿಧವಾದ ವನಗಳಿಂದ ಮನೋಹರವಾದ ತನ್ನನ್ನು ಅನಾದರಣೆಮಾಡಿ ಮೇಲಕ್ಕೆ ಹಾರುತ್ತಿರುವ ಹನುಮಂತನನ್ನು ಕುರಿತು—ಮೈನಾಕನು ಮಾತನಾಡಿದನು.

ವೀರ ವಿಶ್ರಮ್ಯತಾ ಮತ್ರ ಭುಜ್ಯತಾಂಸ್ವಾದು ಮತ್ಫಲಂ ॥
ಬಾಂಧವಾವಯಮಿತ್ಯುಕ್ತೋ ಮಾರುತಿರ್ಗಿರ ಮಬ್ರವೀತ್ ॥ ೫ ॥

“ಹೇ ! ವೀರಾಗ್ರೇಸರನಾದ ಹನುಮಂತನೇ ! ನೀನು ಇಲ್ಲಿ ಸ್ವಲ್ಪಕಾಲ ವಿಶ್ರಮಿಸಿಕೊಳ್ಳಬೇಕು. ರುಚಿಕರವಾದ ನಮ್ಮಲ್ಲಿರುವ ಫಲಗಳನ್ನು ಭಕ್ಷಿಸಬೇಕು! ನಾವು ನಿಮ್ಮ ಬಂಧುಗಳು” ಎಂದು ಹೇಳಲು ಹನುಮಂತನು ಮಾತನಾಡುತ್ತಾನೆ.

ವಿಶ್ರಮಃಶ್ರಮಿಣಾಂ ಸೌಖ್ಯ ನಶ್ರಮೋ ಮಮವಿದ್ಯತೇ ॥
ಅವಿಶ್ರಮೇ ಪ್ರತಿಜ್ಞಾಮೇ ಕೃತಾವಾನರಸನ್ನಿಧೌ ॥ ೬ ॥

"ಹೇ ! ಸೌಮ್ಯಮೈನಾಕನೇ ! ಶ್ರಮವುಳ್ಳವರಿಗೆ ವಿಶ್ರಾಂತಿಯು ಆವಶ್ಯಕವು. ನನಗೆ ಶ್ರಮವೇ ಆಗಿಲ್ಲವು. ಅಲ್ಲದೆ ವಾನರರ ಸನ್ನಿಧಿಯಲ್ಲಿ ಸೀತಾದೇವಿಯನ್ನು ಕಾಣುವವರಿವಿಗೂ, ವಿಶ್ರಾಂತಿಯನ್ನು ಹೊಂದುವುದಿಲ್ಲವೆಂದು ವಾನರರ ಸನ್ನಿಧಿಯಲ್ಲಿ ಪ್ರತಿಜ್ಞೆಯನ್ನು ಮಾಡಿದ್ದೇನೆ."

ಅಲ್ಪಶೇಷಶ್ಚ ದಿವಸಸ್ತ್ವರೇಯಂ ಕಾರ್ಯಗೌರವಾತ್ ॥
ಮಹೀಧರ ಮಹೀಮುಕ್ತ್ವಾ ಕಸ್ಮಾನ್ಮಗ್ನೋಽಂಬು ಧೌಭವಾ್ ॥ ೭ ॥

"ಹಗಲು ಸ್ವಲ್ಪವೇ ಉಳದಿದೆ. ಕಾರ್ಯಗೌರವವು ತೀವ್ರವಾಗಿದೆ" ಎಂದು ಹನುಮಂತನು ಹೇಳಿ "ಹೇ ! ಮಹೀಧರ ಮೈನಾಕನೇ ! ನೀನು ಭೂಮಿಯನ್ನು ಬಿಟ್ಟು ಏತಕ್ಕೋಸ್ಕರವಾಗಿ ಸಮುದ್ರದಲ್ಲಿ ಮುಳುಗಿರುವಿ?" ಎಂದು ಮಾರುತಿಯು ಕೇಳಿದನು.

ಮಾರುತೇ ರೀರಿತಂ ಶ್ರುತ್ವಾ ಶಾಲಃಶ್ಯಂಭೋರಭಾಷತ ॥
ಪಕ್ಷಿಣಃಪರ್ವತಾಃ ಪೂರ್ವಮಕ್ರಿಣ್ವ್ ಭುವನತ್ರಯಂ ॥ ೮ ॥

ಮಾರುತಿಯು ಈ ವಾಕ್ಯವನ್ನು ಕೇಳಿದ ಮಹಾರುದ್ರದೇವರ ಭಾವಮೈದುನನಾದ ಮೈನಾಕನು

ಮಾತನಾಡಿದತು. "ಪೂರ್ವದಲ್ಲಿ ನಾವು ರೆಕ್ಕೆಗಳುಳ್ಳವರಾಗಿದ್ದೆವು. ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹಾರಿ ಮೂರುಲೋಕಗಳನ್ನೂ ನಾಶಮಾಡುತ್ತಿದ್ದೆವು."

ವಜ್ರೇಣವಜ್ರೀಚಿಚ್ಛೇದ ಪಕ್ಷಾನ್ನಿಶ್ಶೇಷ ಭೂಭೃತಾಂ ॥
ನೀತೋಽಹಂ ದಯಯಾಸಿಂಧುಂವಾಯುನಾ ವಾಯುನಂದನ! ॥ ೯ ॥

"ಹೇ ! ವಾಯುಪುತ್ರನೇ !! ಇದಕ್ಕೋಸ್ಕರವಾಗಿ ವಜ್ರಪಾಣಿಯಾದ ಇಂದ್ರನು ಸಮಸ್ತವಾದ ಪರ್ವತಗಳ ರೆಕ್ಕೆಗಳನ್ನು ಕತ್ತರಿಸಿದನು. ನಿಮ್ಮ ತಂದೆಯಾದ ವಾಯುದೇವರ ದಯೆಯಿಂದ ನಾನು ಸಮುದ್ರದಲ್ಲಿ ಹಾಕಲ್ಪಟ್ಟೆನು.

ಸರ್ವಾಂತರಾತ್ಮಾ ತಾತಸ್ತೇ ಪಕ್ಷದೋಮೇ ತತೋಭವಾ ॥
ಪೂಜ್ಯೋಮೇ ಪ್ರೇಷಿತಶ್ಚಾಹಂ ರಾಮಭಕ್ತೇನಸಿಂಧುನಾ ॥ ೧೦ ॥

ಸರ್ವವ್ಯಾಪಿಯಾದ ನಿಮ್ಮ ತಂದೆಯು ನನಗೆ ರೆಕ್ಕೆಗಳನ್ನು ಉಳಿಸಿ ಜೀವದಾನ ಮಾಡಿದ್ದರಿಂದ ನೀನು ನನಗೆ ನೆಂಟನು ಮತ್ತೂ, ಪೂಜ್ಯನು ಆಗಿದ್ದೀಯೆ. ನಾನು ರಾಮಭಕ್ತನಾದ ಸಮುದ್ರರಾಜನಿಂದ

ಕಳುಹಿಸಲ್ಪಟ್ಟವನು.

ಹಿರಣ್ಯನಾಭಗಾವೇವಂ ಶೃತ್ವಾಪ್ರಾಭಂಜನಿಪ್ರಭುಃ ||
ಪರಿರಭ್ಯ ಯಯೌ ದೋರ್ಭ್ಯಾಮದ್ರಿಂ ಪುರುಷರೂಪಿಣಂ || ೧೧ ||

ಈ ರೀತಿಯಾದ ಹಿರಣ್ಯನಾಭನ ಮಾತನ್ನು ಕೇಳಿ ಪ್ರಭುವಾದ ಪ್ರಾಭಂಜನಿಯು (ಹನುಮಂತನು) ಪುರುಷರೂಪಿಯಾದ ಮೈನಾಕಪರ್ವತವನ್ನು ಆಲಿಂಗಿಸಿಕೊಂಡು ಹೊರಟನು.

ಸ್ನಾನೇಪ್ಯಸ್ಯವಿಶ್ರಾಂತಂ ತಂ ಶಶಂಸುಃಸುರೇಶ್ವರಾಃ ||
ಪುಂಸಪ್ರಭಾವ ಸಾಮಗ್ರ್ಯಂ ನೈರಪೇಕ್ಷ್ಯಂಹಿ ಲಕ್ಷಣಂ || ೧೨ ||

ವಿಶ್ರಾಂತಿಗೆ ಅವಕಾಶವಿದ್ದಾಗ್ಯೂ ಕೂಡಾ, ವಿಶ್ರಾಂತಿಯನ್ನು ಹೊಂದದ ಹನುಮಂತನನ್ನು ನೋಡಿ ದೇವತಾಶ್ರೇಷ್ಠರುಗಳು ಆ ಹನುಮಂತನನ್ನು ಬಹಳವಾಗಿ ಶ್ಲಾಘನಮಾಡಿದರು. ಪುರುಷನಪ್ರಭಾವ ಸಾಮಗ್ರಿಯಲ್ಲಿ ನೈರಪೇಕ್ಷ್ಯವು ಮುಖ್ಯಲಕ್ಷಣವಾಗಿದೆ. ವಿಷಯಸಾನ್ನಿಧ್ಯವಿದ್ದಾಗ ಪುರುಷನಾದವನು ಅದನ್ನು ಅಪೇಕ್ಷಿಸದೆ ಇರುವುದಿಲ್ಲವು.

ಇಂದ್ರೋ ಗಿರೀಂದ್ರ ಮಾಚಷ್ಟ ತೋಷಿತಸ್ತೇನ ಕರ್ಮಣಾ ॥
ಅಭಯಂತೇ ಮಯಾ ದತ್ತಂ ರಾಮ ಶ್ಯಪಣಾದಿತಿ ॥ ೧೩ ॥

ಇಂದ್ರನು ಗಿರೀಂದ್ರನಾದ ಮೈನಾಕನನ್ನು ಕುರಿತು ಮಾತನಾಡುತ್ತಾನೆ:– " ನೀನು ಮಾಡಿದ ಕೆಲಸದಿಂದ ನಾನು ಸಂತುಷ್ಟನಾಗಿದ್ದೇನೆ. ನೀನು ರಾಮ ಶಿಶ್ರೂಷೆಯನ್ನು ಮಾಡಿದ್ದರಿಂದ ನಿನಗೆ ರೆಕ್ಕೆಗಳನ್ನು ಕತ್ತರಿಸದೇ ಇರುವ ಅಭಯವನ್ನು ಕೊಟ್ಟಿದ್ದೇನೆ.

ಪ್ಲವಮಾನಂ ತ ಮಾಲೋಕ್ಯ ದ್ವಿಗುಣಂ ವೇಗಮಾಗತಂ ॥
ನ್ಯಗರ್ದನ್ನಾಗಜನನೀಂ ಸುರಸಾಂ ಸರಸಾಸ್ಸುರಾಃ ॥ ೧೪ ॥

ಹೀಗಾದ ಮೇಲೆ ದ್ವಿಗುಣಿತವಾದ ವೇಗದಿಂದ (ಮೊದಲಿನಂತೆ ಎರಡರಷ್ಟು ವೇಗದಿಂದ) ಹಾರುತ್ತಿರುವ ಹನುಮಂತನನ್ನು ದೇವತೆಗಳು ನೋಡಿ ನಾಗಜನನಿಯಾದ ಸುರಸಾ ಎಂಬ ಸ್ತ್ರೀಯನ್ನು ಕುರಿತು ಮಾತನಾಡುತ್ತಾರೆ:—

ಮಾರುತೇಃಕುರುವಿಘ್ನಂ ತ್ವಂ ಜಿಜ್ಞಾಸ್ಯಾಮೋಸ್ಯ ತದ್ಬಲಂ ॥
ಯದ್ಯದಿಚ್ಛಸಿತತ್ತತ್ತೇ ವಕ್ತ್ರಮೇತು ವರೇಣನಃ ॥ ೧೫ ॥

ದೇವತೆಗಳು ಸುರಸೆಗೆ ಹೇಳಿದ್ದೇನೆಂದರೆ:– " ಎಲೈ ! ಸುರಸೆಯೆ ! ಹಾರುತ್ತಿರುವ ಹನುಮಂತನ ಬಲವನ್ನು ಪರೀಕ್ಷಿಸ ಬೇಕಾಗಿರುವುದರಿಂದ ನೀನು ಆತನಿಗೆ ಅಡ್ಡಪಡಿಸು; ಮತ್ತು ಯಾವ ಯಾವ ವರಗಳನ್ನು ನಮ್ಮನ್ನು ನೀನು ಕೇಳುವಿಯೋ ಕೇಳು; ಅದು ನಮ್ಮ ವರದಿಂದ ನಿನ್ನ ಬಾಯಿಯಲ್ಲಿ ಬೀಳಲಿ ಇದೇ ವರವು.

ದಕ್ಷಾ ದಾಕ್ಷಾಯಣೀತ್ಯುಕ್ತಾ ಭೂತ್ವಾ ಸಾ ರೂಕ್ಷ ರಾಕ್ಷಸೀ ॥
ತಸ್ಥಾವಾಸ್ಯಂ ವಿವೃಣ್ವಾನಾ ಮಾರ್ಗಮಾವೃತ್ಯ ಮಾರುತೇಃ ॥ ೧೬ ॥

ಹೀಗೆ ವರವನ್ನು ಹೊಂದಿದ ದಕ್ಷಪ್ರಜೇಶ್ವರನ ಮಗಳಾದ ಸುರಸೆಯು ಮಹಾಕ್ರೂರವಾದ ರಾಕ್ಷಸಿಯಾಗಿ ಬಾಯಿಯನ್ನು ಹಾ ! ಎಂತ ತೆಗೆದುಕೊಂಡು ಮಾರುತಿಯ ಮಾರ್ಗಕ್ಕೆ ಅಡ್ಡವಾಗಿ ನಿಂತಿದ್ದಳು.

ತಾಮವೇಕ್ಷ್ಯ ಕರಾಳಾಕ್ಷೀಂ ಪಿಂಗಾಕ್ಷೋಂದ್ರೋಭ್ಯ ಭಾಷತ ॥

ಮಾರುತೀ ರಾಮದೂತೋಸ್ಮಿ (ದಾಸೋಸ್ಮೀ) ಮಾರ್ಗೋಮೇ ದೀಯತಾಮಿತಿ॥ ೧೭ ॥

ಆ ಭಯಂಕರವಾದ ನೇತ್ರವುಳ್ಳ ಆ ಸುರಸೆಯನ್ನು ಕಂಡು ಕಪಿ ಶ್ರೇಷ್ಠನಾದ ಹನುಮಂತನು ಮಾತನಾಡಿದನು:— " ನಾನು ರಾಮದೂತನಾದ ಮಾರುತಿಯು; ನನ್ನಗೆ ದಾರಿಯನ್ನು ಬಿಡು ಎಂದನು."

ಯೋವಾ ಕೋವಾಭವೇದಾನೀಂ ವದನಂಪ್ರವಿಶಾಶುಮೇ ॥
ಇತ್ಯುಕ್ತ್ವಾಸಾಟ್ಟಹಾ ಸಾಂತಾಂ ಕಪೀಂದ್ರ:ಕುಪಿತೋಬ್ರವೀತ್ ॥ ೧೮ ॥

" ನೀನು ಯಾರಾದರೇನು ? ನನ್ನ ಬಾಯಿಯನ್ನು ಪ್ರವೇಶಮಾಡು " ಎಂದು ಸುರಸೆಯು ಹೇಳುತ್ತಿರಲು ಕಪಿ ಶ್ರೇಷ್ಠನಾದ ಹನುಮಂತನು ಕೋಪಿಸಿಕೊಂಡು ಮಾತನಾಡಿದನು.

ಕಥಂಮಾಂಗ್ರಸಸೀತ್ಯುಕ್ತ್ವಾ ವಿಗ್ರಹಂ ಜಗೃಹೇಹರಿಃ ॥
ಆಯಾಮೇಷ್ವಥವಿಸ್ತಾರೇ ಸಮಾನಂ ಬಹುಯೋಜನಂ ॥ ೧೯ ॥

ನನ್ನನ್ನು ನೀನು ಹೇಗೆ ನುಂಗುತ್ತೀಯೋ ನೋಡೋಣ? ಎಂದು ತನ್ನದೇಹವನ್ನು ಬಹು ಯೋಜನ

ವಿಸ್ತಾರವಿರುವ ಹಾಗೆ ಬೆಳೆಸಿದನು.

ವ್ಯಾದಾತ್ಸ ದ್ವಿಗುಣಂ ವಕ್ತ್ರಂ ತದ್ದೇಹಪರಿಮಾಣತಃ ॥
ಸೋಂಗುಷ್ಠಮಾತ್ರಃ ಸ್ತದ್ವಕ್ತ್ರಂ ಪ್ರವಿಶ್ಯನಿರಗಾತ್ಪ್ರಭುಃ ॥ ೨೦ ॥

ಆ ಸುರಸೆಯು ಈ ಹನುಮಂತನ ದೇಹಪರಿಮಾಣಕ್ಕೆ ಎರಡರಷ್ಟಾಗಿ ತನ್ನ ದೇಹವನ್ನು ಬೆಳೆಸಿದಳು. ಆಗ ಹನುಮಂತನು ಅಂಗುಷ್ಟ ಪ್ರಮಾಣ ದೇಹವುಳ್ಳವನಾಗಿ ಅವಳ ಬಾಯಿಯಲ್ಲಿ ಪ್ರವೇಶಿಸಿ ಕೂಡಲೇ ಹಿಂತಿರುಗಿ ಬಂದನು.

ತಸ್ಯಪ್ರಭಾವಂ ಸಂಭಾವ್ಯ ಸರಸಾ ಸುರಸಾಬ್ರವೀತ್ ॥
ಜೀರ್ವನ್ನೇವಾऽಮರ ವರಂ ತಾತರಕ್ಷಿತವಾನಸಿ ॥ ೨೧ ॥

ಸುರಸೆಯು ಈತನ ಯೋಗಪ್ರಭಾವವನ್ನು ಶ್ಲಾಘನ ಮಾಡಿ “ ಶಹಬಾಸ್ ಶಹಬಾಸ್ ”ನೀನು ಬದುಕಿಕೊಂಡೆ ಮತ್ತು ದೇವತೆಗಳ ವರವನ್ನು ರಕ್ಷಿಸಿದೆ.

ಸತ್ಯಂಲಂಕಾಮುಪೇತ್ಯತ್ವಂ ಜಾನೀಯಾ:ಜನಕಾತ್ಮಜಾಂ ॥
ತಾಮೇವಂ ವಾದಿನೀಂ ವೀರಃ ಪರಿಪೂಜ್ಯಪ್ರಪುಪ್ಲುವೆ ॥ ೨೨ ॥

ಎಲೈ ! ಕಪಿ ಶ್ರೇಷ್ಠನೇ ! ನೀನು ಖಂಡಿತವಾಗಿಯೂ, ಲಂಕಾಪಟ್ಟಣವನ್ನು ಸೇರಿ, ಜನಕ ಸುತೆಯಾದ ಸೀತಾದೇವಿಯನ್ನು ನೋಡುವೆ ? ಎಂದು ಹೇಳುತ್ತಿರುವ ಸುರಸೆಯನ್ನು ವೀರನಾದ ಹನುಮಂತನು ಚೆನ್ನಾಗಿ ಗೌರವಿಸಿ ಮೇಲಕ್ಕೆ ಹಾರಿದನು.

ತಮಾಪತತ ಕೆಮಾಲೋಕ್ಯ ಸಿಂಹಕಾಸಿಂಹವಿಕ್ರಮಂ ॥
ದೈವಾಸ್ಮೇಭೋಜನಂಪೂರ್ಣಂ ಪ್ರಾಪ್ತಮಿತ್ಯನ್ವಚಿಂತಯತ್ ॥ ೨೩ ॥

ಸಿಂಹಿಕಾ ಎಂಬ ರಾಕ್ಷಸಿಯು ಸಿಂಹದಂತೆ ವಿಕ್ರಮವುಳ್ಳ ಹಾರುತ್ತಿರುವ ಹನುಮಂತನನ್ನು ನೋಡಿ ದೈವಯೋಗದಿಂದ ಈದಿನ ನನಗೆ ಪೂರ್ಣವಾದ ಆಹಾರವು ಸಿಕ್ಕಿತೆಂದು ಆಲೋಚಿಸಿದಳು.

ವಿಧೇರ್ವರಾ ದವಧ್ಯಾಸಾ ಲಂಕಾಪಾಲನತತ್ಪರಾ ॥

ಛಾಯಾಗ್ರಹ ಇತಿಖ್ಯಾತಾ ಛಾಯಾಂ ಜಗ್ರಾಹ ಮಾರುತೇಃ ॥ ೨೪ ॥

ಆ ಸಿಂಹಿಕೆಯು ಬ್ರಹ್ಮದೇವರ ವರದಿಂದ ಅವಧ್ಯಳೂ, ಛಾಯಾಗ್ರಹವೆಂದು ಪ್ರಸಿದ್ಧಳೂ, ಲಂಕಾ ಪಟ್ಟಣವನ್ನು ರಕ್ಷಣಮಾಡುವುದರಲ್ಲಿ ದಕ್ಷಳೂ ಆಗಿದ್ದಳು. ಅಂಥ ಸಿಂಹಿಕೆಯು ಈ ಹನುಮಂತನ ಛಾಯಾವನ್ನು ಹಿಡಿದು, ನುಂಗುವುದಕ್ಕೆ ಸೆಳೆದಳು.

ಲೋಕಘ್ನೀಮಿವ ಲೋಕ್ಯಾಯಂ ದಾನವೀಂ ವಿವೃತಾನನಾಂ ॥
ಅಭೂದದ್ರಿ ನಿಭಸ್ಸೋಪಿ ವಕ್ತ್ರೇಣಾಂಬರ ಮಾ ವೃಣೋತ್ ॥ ೨೫ ॥

ಲೋಕವನ್ನೆಲ್ಲಾ ಸಂಹಾರ ಮಾಡತಕ್ಕ ಮತ್ತು ವಿಶಾಲವಾದ ಬಾಯಿಯನ್ನು ತೆಗೆದುಕೊಂಡಿರುವ ಈ ರಾಕ್ಷಸಿಯನ್ನು ನೋಡಿ ಹನುಮಂತನು ಪರ್ವತಕ್ಕೆ ಸದೃಶವಾದ ಆಕಾರವುಳ್ಳವನಾಗಿ ತನ್ನ ಬಾಯಿಯಿಂದ ಅಂತರಿಕ್ಷವನ್ನೆಲ್ಲಾ ವ್ಯಾಪಿಸಿದನು.

ಸ್ವತನುಂ ತನುತಾಂ ನೀತ್ವಾ ಹನುಮಾನಾವಿವೇಶತಾಂ ॥

ಹೃದಯಂ ನಿರ್ದಯಂ ತಸ್ಯಾಃ ಬಿಭೇದ ನಖರೈಃಖರೈಃ ॥ ೨೬ ॥

ತನ್ನ ದೇಹವನ್ನು ಸಣ್ಣದಾಗಿ ಮಾಡಿಕೊಂಡು ಹನುಮಂತ ದೇವರು ಆ ಸಿಂಹಕೆಯ ಬಾಯಿಯನ್ನು ಹೊಕ್ಕು ಅಲ್ಲಿ ದೊಡ್ಡರೂಪವನ್ನು ತಾಳಿ ದಯಾಶೂನ್ಯಳಾದ ಅವಳ ಹೃದಯವನ್ನು ತೀಕ್ಷ್ಣವಾದ ಉಗುರುಗಳಿಂದ ಸೀಳಿದರು.

ಆಂತ್ರಮಾಲಿನ ಮುತ್ಕ್ರಾಂತಂ ತಾಂ ನಿಹತ್ಯ ಮಹಾಹರಿಂ ॥
ನರಸಿಂಹ ಮಿವಾಽಸಂಸ್ಥ್ಯ ಮಸ್ತುರ್ವ ಸುರಕಿಂನರಾಃ ॥ ೨೭ ॥

ಆ ಸಿಂಹಿಕೆಯನ್ನು ಕೊಂದು ಕರಳು ಮಾಲೆಯನ್ನು ಧರಿಸಿ ಮೇಲಕ್ಕೆ ಬರುತ್ತಿರುವ ಹಿರಣ್ಯಕಶಿಪುವಿನ ಕರಳನ್ನು ಬಗೆದು ಮಾಲೆಯನ್ನು ಧರಿಸಿದ ಮಹಾ ಭಯಂಕರವಾದ ರೂಪವುಳ್ಳ ನರಸಿಂಹ ದೇವರಂತೆ ಪ್ರಕಾಶಿಸುತ್ತಿರುವ ಈ ಹನುಮಂತ ದೇವರನ್ನು ನೋಡಿ ದೇವತೆಗಳೂ, ಕಿನ್ನರರೂ ಸಹ, ಈ ಹನುಮಂತನನ್ನು ಸ್ತೋತ್ರಮಾಡಿದರು.

ಹನೂರ್ಮ ಭೂರಿಮಹಿರ್ಮ ಹತಾಸರ್ವ್ವೇಹಿತಾ ಸ್ತ್ವಯಾ ॥
ಖೇಚರಾಃ ಖೇಚರಿಷ್ಯಂತಿ ತ್ವಾಂ ಗಾಯಂತೋಽಭಯಂ ವಿನಾ ॥ ೨೮॥

ಅಗಾಧವಾದ ಮಹಿಮೆವುಳ್ಳ ಎಲೈ ! ಹನುಮಂತನೇ ! ನಿನ್ನಿಂದ ಸರ್ವ ಶತೃಗಳೂ, ಸಂಹರಿಸಲ್ಪಟ್ಟರು- ಆದ್ದರಿಂದ ಅಂತರಿಕ್ಷದಲ್ಲಿ ಸಂಚಾರ ಮಾಡುವ ದೇವತೆಗಳೆಲ್ಲರೂ, ನಿನ್ನನ್ನು ಸ್ತೋತ್ರಮಾಡುತ್ತಾ, ಭಯವಿಲ್ಲದೆ ಸಂಚಾರ ಮಾಡುತ್ತಾರೆ.

ಇತಿಸಂಸ್ತುವತಃಸರ್ವ್ವಾ ದಿವ್ಯಪುಷ್ಪ ಪ್ರವರ್ಷಿಣಃ ॥
ಅಪಾಂಗೇನೋಪಸಂಗಮ್ಯ ಪ್ಲವಗೇಂದ್ರಃಪ್ರಪುಪ್ಲುವೇ ॥ ೨೯ ॥

ಈ ಪ್ರಕಾರವಾಗಿ, ಸ್ತೋತ್ರಮಾಡುತ್ತಾ, ದಿವ್ಯವಾದ ಪುಷ್ಪವೃಷ್ಟಿಯನ್ನು ಕರೆಯುತ್ತಿರುವ ಸಮಸ್ತ ದೇವತೆಗಳನ್ನೂ,ಹನುಮಂತನು ತನ್ನ ಕಡೆಗಣ್ಣಿನ ನೋಟದಿಂದಲೇ, ಅವರಿಗೆ ತನ್ನ ಕೃತಜ್ಞತೆಯನ್ನು ಸೂಚಿಸಿ ಹಾರಿದನು.

ಉಲ್ಲೋಲ ಮೇಘ ಕಲ್ಲೋಲಂ ಲೋಲ ಸತ್ವ ಗಣಾಕುಲಂ ||
ಅಂಬರಂಚಾಂಬುರಾಶಿಂಚ ಸಸಮಂ ಸಮುಲಂಘಯತ್ || ೩೦ ||

ಆ ಹನುಮಂತನು ತೆರೆಗಳಂತೆ ಒಂದರ ಹಿಂದೆ ಒಂದು ಬರುತ್ತಿರುವ ಮೇಘಗಳ ಸಮೂಹವುಳ್ಳಅಂತರಿಕ್ಷವನ್ನು ದುಷ್ಟಪ್ರಾಣಿಗಳಿಂದಲೂ ಮತ್ತು ಚಂಚಲವಾದ ಅಲೆಗಳಿಂದ ಕೂಡಿರುವ ಸಮುದ್ರವನ್ನು ಏಕಕಾಲದಲ್ಲಿ ಒಂದೇಸಾರಿ ಲಂಘಿಸಿದನು.

ಆಲಂಬ ಶಿಖರೇ ಲಂಬೇ ಲಂಕಾ ಪ್ರಾಕಾರ ರೂಪಕೇ ||
ನಿಪಪಾತ ಕಪಿಶ್ರೇಷ್ಠಃ ಸತ್ರಿಕೂಟೋಪ ಶೋಭಿತೇ || ೩೧ ||

ಆ ಕಪಿಶ್ರೇಷ್ಠನಾದ ಹನುಮಂತನು ಉದ್ದವಾದ ಶಿಖರದಿಂದ ಕೂಡಿ, ಲಂಕಾಪಟ್ಟಣಕ್ಕೆ ಪ್ರಾಕಾರದಂತಿರುವ ತ್ರಿಕೂಟಪರ್ವತದ ಶಿಖರದ ಮೇಲೆ ಹಾರಿದನು.

ಆಪಾತತೋಭ್ಯಾಪತತೋ ವಾತಪುತ್ರಸ್ಯ ನಿಸ್ವನಾತ್ ||

ಖಗಾಮೃಗಾ ದಶ ದಿಶೋ ವಿತ್ರಸ್ತಾದುದ್ರುವುರ್ದ್ರುತಂ ॥ ೩೨ ॥

ರಭಸದಿಂದ ಹಾರುತ್ತಿರುವ ಹನುಮಂತನ ನಿಶ್ವಾಸದ ಘಾಳಿಯಿಂದ ಅಂತರಿಕ್ಷ ಸಂಚಾರಿಗಳಾದ ಪಕ್ಷಿಗಳು ಭೂಮಿಯ ಮೇಲೆ ಸಂಚರಿಸುವ ಪ್ರಾಣಿಗಳೂ ಸಹ, ಹತ್ತು ದಿಕ್ಕುಗಳಿಗೂ ಭಯದಿಂದ ಜಾಗ್ರತೆಯಾಗಿ, ಓಡತೊಡಗಿದುವು.

ಪುಷ್ಪಾಣಿವವೃಷುಃ ವೃಕ್ಷಾಃ ತಸ್ಮಿನ್ನಾಪತಿತೇಽಸತಿ ॥
ವಿಕ್ರಾಂತಿಮತಿ ಸಂಭ್ರಾಂತಾಬಾಂಧವಾ ಇವ ಬಾಂಧವೇ ॥ ೩೩ ॥

ಆಶ್ಚರ್ಯಭರಿತರಾದ ಬಂಧುಗಳು ತಮ್ಮ ಬಂಧುಗಳು ಮಾಡಿದ ವಿಲಕ್ಷಣವಾದ ಕಾರ್ಯಕ್ಕೆ ಸಂತೋಷಪಟ್ಟವರಾಗಿ ಪುಷ್ಪಗಳನ್ನು ಎರಚುವಂತೆ ಹನುಮಂತನು ಸುರಸಾ, ಸಿಂಹಿಕಾ, ಮುಂತಾದ ರಾಕ್ಷಸ್ತ್ರೀಯರನ್ನು ಸಂಹಾರಮಾಡಿದ ಆಶ್ಚರ್ಯಕರವಾದ ಕಾರ್ಯವನ್ನು ನೋಡಿ ವೃಕ್ಷಗಳು ಪುಷ್ಪಗಳನ್ನು ಎರಚಿದುವು.

ಬಲಾತ್ಮನೊ ಹನುಮತೊ ನಗ್ಲಾನಿರ್ವಿಕ್ರಮೇಽಪ್ಯಭೂತ್ ॥

ನಹಿತೇಜಸ್ವಿ ನೋವಹ್ನೇರ್ಶಿಶೀಥೇಽಪ್ಯಂಧಕಾರಿತಾ ॥ ೩೪ ॥

ಅಗ್ನಿಗೆ ರಾತ್ರಿಯಲ್ಲಿಯೂ ಕೂಡ, ಹೇಗೆ ಅಂಧಕಾರದಿಂದ ತೇಜೋಗ್ಲಾನಿಯು ಹೇಗೆ ಆಗುವುದಿಲ್ಲವೋ, ಹಾಗೆ ಬಲಿಷ್ಠನಾದ ಹನುಮಂತನು ಅಸಾಧ್ಯವಾದ ಕಾರ್ಯಗಳನ್ನು ಮಾಡಿದಾಗ್ಯೂ ಕೂಡ, ಆತನ ಶಕ್ತಿಯು ಕುಂದಲಿಲ್ಲವು.

ತ್ರಿಕೂಟಶೃಂಗ ಮಾರುಹ್ಯ ಪ್ರೇಕ್ಷ್ಯಮಾಣೋ ದಿಶೋದಶ ॥
ಲಂಕಾಮಲಂಕಾರವತೀಂ ಸದೃಶೇಂದ್ರ ಪುರೀಮಿವ ॥ ೩೫ ॥

ತ್ರಿಕೂಟಪರ್ವತದ ಕೋಡಗಲ್ಲನ್ನು ಹತ್ತಿ, ಹತ್ತು ದಿಕ್ಕುಗಳನ್ನೂ ನೋಡುತ್ತಿರುವ ಹನುಮಂತನು ಇಂದ್ರನ ಅಮರಾವತೀಪಟ್ಟಣದೋಪಾದಿಯಲ್ಲಿ ಅಲಂಕಾರದಿಂದಪ್ರಕಾಶಿಸುವ ಲಂಕಾಪಟ್ಟಣವನ್ನುನೋಡಿದನು

ಗಂಭೀರ ಪರಿಖಾಂ ಭೀಮಾಂ ಬಹುಪ್ರಾಕಾರ ದುರ್ಗಮಾಂ ॥
ದೃಷ್ಟ್ವಾ ಲಂಕಾಂ ಗಿರೀಂದ್ರಸ್ಥಾಂ ನಾನಾಯಂತ್ರಾಮಚಿಂತಯತ್ ॥ ೩೬ ॥

ಗಂಭೀರವಾದ ಅಗಳತೆಗಳಿಂದ (ಕಂದಕ) ಕೂಡಿದ ದುರ್ಗಮಗಳಾದ ಅನೇಕ ಪ್ರಾಕಾರಗಳಿಂದ ಕೂಡಿದ, ಮಹಾ ಭಯಂಕರವಾದ ಲಂಕಾಪಟ್ಟಣವನ್ನು ನೋಡಿ, ಪರ್ವತಾಗ್ರದಲ್ಲಿ ಕುಳಿತಿರುವ ಹನುಮಂತನು ನಾನಾವಿಧವಾಗಿ ಆಲೋಚಿಸಿದನು.

ನನೂನಂ ವಾನರಾಣಾಂಸ್ಯಾಲ್ಲಂಘನಂ ಲವಣೋದಧೇಃ ॥
ಅಥಾಪಿ ಲಂಘಿತವತಾಂ ಪುರೀಯಂ ಸುಗಮಾಕಥಂ ॥ ೩೭ ॥

ಈ ಲವಣ ಸಮುದ್ರವನ್ನುಹಾರಲು ಖಂಡಿತವಾಗಿಯೂ, ಕಪಿಗಳಿಂದ ಸಾಧ್ಯವಿಲ್ಲವು. ಒಂದು ವೇಳೆ ಲಂಘಿಸಿದರೂ, ಈ ಭಯಂಕರವಾದ ಲಂಕಾಪಟ್ಟಣವನ್ನು ಸುರಕ್ಷಿತವಾಗಿ ಸೇರಲಾರರು.

ಚಿಂತಯಾತಾಂತಿ ಕಾರ್ಯಾ ಕಿಂ? ನಾಸ್ತಿರಾಮಸ್ಯದುಷ್ಕರಂ ॥
ರಾಮದೇವ ಪ್ರಸಾದೇನ ಕಿಂ ? ಮಮಾಸ್ತಿಚ ದುಷ್ಕರಂ ॥ ೩೮ ॥

ಚಿಂತೆ ಮಾಡಿದ್ದರಿಂದ ಏನು ಪ್ರಯೋಜನ? ರಾಮ ದೇವರಿಗೆ ಮಾಡಲಸಾಧ್ಯವಾದ ಕಾರ್ಯವು

ಯಾವುದೂ ಇಲ್ಲವು. ಆ ರಾಮದೇವರ ಅನುಗ್ರಹದಿಂದ ನನಗೆ ದುಷ್ಕರವಾದಕಾರ್ಯವು ಯಾವುದೂ ಇಲ್ಲವು.

ಅರುಣೀ ಭವತೀದಾನೀಂ ತರಣಿ ಸ್ತರುಣೋ ಯಥಾ ||
ಅಸ್ತಂಗತೇಽಸ್ಮಿನ್ ಯಾಸ್ಯಾಮಿ ಮಾದ್ರಾಕ್ಷುರ್ಮಾಂಹಿ ರಾಕ್ಷಸಾಃ || ೩೯ ||

ಈಗ ಸೂರ್ಯನು ಅರುಣ ವರ್ಣದಿಂದ ವಿಶಿಷ್ಟನಾಗಿದ್ದಾನೆ. (ಕೆಂಪಗಿದ್ದಾನೆ.) ಈತನು ಅಸ್ತಂಗತನಾಗುವುದರಲ್ಲೇ ನಾನು ಲಂಕಾ ಪಟ್ಟಣವನ್ನು ಕುರಿತು ಹೋಗುತ್ತೇನೆ. ಹಗಲಿನಲ್ಲಿ ಹೋದರೆ, ರಾಕ್ಷಸರು ನನ್ನನ್ನು ನೋಡುತ್ತಾರೆ. ಆದ್ದರಿಂದ ಕತ್ತಲಾದನಂತರ ಪಟ್ಟಣವನ್ನು ಪ್ರವೇಶ ಮಾಡುತ್ತೇನೆ.

ಮಾ ಮಮೀ ರಾಕ್ಷಸಾ ವೀಕ್ಷ್ಯ ಶಂಕೇರನ್ ಈದೃಶಾ ಕೃತಿಂ ||
ಅಣುಃ ಪುರೀಂ ಪ್ರವೇಕ್ಷ್ಯಾಮಿ ತತೋಽನ್ವೇಷ್ಟುಂ ನೃಪಾತ್ಮಜಾಂ || ೪೦ ||

ಈ ದೊಡ್ಡದಾದ ಆಕಾರವುಳ್ಳ ನನ್ನನ್ನು ಆ ರಾಕ್ಷಸರು ನೋಡಿ, ಇವನ್ಯಾರು? ಎಂದು ಸಂಶಯ ಪಡಬಹುದು. ಆದ್ದರಿಂದ ನಾನು ಅಣುರೂಪನಾಗಿ ಸೀತಾದೇವಿಯರನ್ನು ಹುಡುಕುವುದಕ್ಕೋಸ್ಕರ ಈ ಪಟ್ಟಣ

ವನ್ನು ಪ್ರವೇಶ ಮಾಡುತ್ತೇನೆ.

ಇತಿ ಸಂಚಿತ್ಯ ಶೈಲಾಭೋ ಬಿಡಾಲಾಭೋ ಬಭೂವಸಃ ॥
ಯೋಗೈಶ್ವರ್ಯ ಬಲೇನೈವ ಯೋಗೀಶ ವರ ವಲ್ಲಭಃ ॥ ೪೧ ॥

ಈ ಪ್ರಕಾರವಾಗಿ ಚೆನ್ನಾಗಿ ಆಲೋಚನೆಮಾಡಿ, ಹನುಮಂತನು ಪರ್ವತದಂತಿದ್ದ ತನ್ನರೂಪವನ್ನು ಯೋಗೀಶ್ವರರಿಗೆ ಶ್ರೇಷ್ಠನಾದ ಹನುಮಂತನು ಪರಮಾತ್ಮನಲ್ಲಿಟ್ಟ ಭಕ್ತಿಯಬಲದಿಂದ, ಬೆಕ್ಕಿನಂತೆ ಸಣ್ಣ ರೂಪವನ್ನು ಧಾರಣ ಮಾಡಿದನು.

ಮತ್ತ ಪ್ರಮತ್ತ ಸ್ತ್ರೀ ಪುಂಸ್ಕಂ ಪುರಂ ಶುದ್ಧಿ ವಿವರ್ಜಿತಂ ॥
ಅಭಿಚಾರ ಇವ ಕ್ರೂರಃ ಪ್ರದೋಷೇ ಪ್ರಾಪ್ತವಾನ್ ಕಪಿಃ ॥ ೪೨ ॥

ಮತ್ತರಾಗಿಯೂ, ಒಬ್ಬರಿಗಿಂತ ಒಬ್ಬರು ಪ್ರಮತ್ತರಾಗಿಯೂ ಇರುವ ಸ್ತ್ರೀ ಪುರುಷರುಗಳಿಂದ ಕೂಡಿದ, ಎಲ್ಲೆಲ್ಲಿಯೂ ಶುದ್ಧಿ ವಿವರ್ಜಿತವಾದ, ಲಂಕಾ ಪಟ್ಟಣವನ್ನು ಹನುಮಂತನು ಮಾಂತ್ರಿಕ ಕೃತ್ಯದವ

ರಂತೆ ಪ್ರದೋಷ ಕಾಲದಲ್ಲಿ ಪ್ರವೇಶ ಮಾಡಿದನು.

ಅಚ್ಛಿದ್ರವ ಪ್ರವಸನಾಂ ಮಣಿ ಹೇಮ ವಿಭೂಷಣಾಂ ॥
ಸ ಪುರೀಂ ಸ್ತ್ರೀ ಮಿವಾ ದ್ರಾಕ್ಷೀ ತ್ಪೀನೋನ್ನತ ಗೃಹಸ್ತನೀಂ ॥ ೪೩ ॥

ಛಿದ್ರವಿಲ್ಲದೇ ಇರುವ, ಕೋಟೆಗಳೆಂಬ ವಸ್ತ್ರಗಳನ್ನು ಉಟ್ಟು, ರತ್ನಗಳೂ, ಭಂಗಾರಗಳೂ, ಇವುಗಳಿಂದ ವಿಭೂಷಿತಳಾಗಿಯೂ, ಪುಷ್ಟವಾಗಿಯೂ, ಉನ್ನತವಾಗಿಯೂ ಇರುವ ಮನೆಗಳೆಂಬ ಸ್ತನ ಪ್ರದೇಶಗಳಿಂದ ಕೂಡಿದ ಸ್ತ್ರೀಯಂತೆ ಇರುವ ಆ ಲಂಕಾಪಟ್ಟಣವನ್ನು ಹನುಮಂತನು ನೋಡಿದನು.

ಇಂದುಹಾಸೇನ ಸಂದೀಪ್ತ ಸೌಧಗಂಡೇನ ಪಾಂಡುನಾ ॥
ಆಹ್ವಯತ್ಸಹರಿಂ ನೂನಂಪಾಣಿಕಾಂತ್ಯಾ ಪತಾಕಯಾ ॥ ೪೪ ॥

ಆ ಲಂಕಾಪಟ್ಟಣವೆಂಬ ಸ್ತ್ರೀಯು ಚಂದ್ರನ ಕಳೆಯೆಂಬ ಮುಗುಳುನಗೆಯಿಂದಲೂ, ಬಿಳವುಬಣ್ಣಗಳುಳ್ಳ ಉಪ್ಪರಿಗೆಗಳೆಂಬ ಗಂಡ (ಕಪೋಲ) ಪ್ರದೇಶಗಳಿಂದಲೂ, ಪ್ರಕಾಶಿಸುತ್ತಿರುವ ಪತಾಕೆಗಳೆಂಬ ಕೈಗ

ಳಿಂದ ಈ ಕಪಿಶ್ರೇಷ್ಠನಾದ ಹನುಮಂತನನ್ನು ಕರೆಯುತ್ತಿದ್ದಳು.

ಪತ್ಯೌ ಧನಪತೌ ಯಾತೇ ಭಜಂತ್ಯುಪಪತಿಂ ಖಳಂ ॥
ಲಜ್ಜಿತೇವಾ ಸೃಣೋಲ್ಲಂಕಾ ಧೂಮಪಟ್ಯಾ ನಿಜಂ ವಪುಃ ॥ ೪೫ ॥

ತನ್ನಪತಿಯಾದ ಕುಬೇರನು ಹೊರಟು ಹೋಗುತ್ತಿರಲು ಲಂಕಾಪಟ್ಟಣವೆಂಬ ಸ್ತ್ರೀಯು ಉಪಪತಿಯಾದ, ದುಷ್ಟನಾದ ರಾವಣನನ್ನು ಸೇರಲು ಇಷ್ಟವಿಲ್ಲದವಳಾಗಿ ನಾಚಿಕೆಯಿಂದ ತನ್ನಶರೀರವನ್ನು ಮುಚ್ಚಿಕೊಳ್ಳುತ್ತಾಳೆಯೋ ಎಂಬುವ ಹಾಗೆ ಬಹಳ ಎತ್ತರವಾದ ಲಂಕಾಪಟ್ಟಣವನ್ನು ಸುತ್ತಲೂ, ಧೂಮವರ್ಣವಾದ ಮೇಘಗಳು ಆವರಿಸಿಕೊಂಡಿದ್ದವು. ಅಂದರೆ:— ಆ ಲಂಕಾಪಟ್ಟಣವು ಬಹಳ ಎತ್ತರವಾಗಿ ಮೇಘಮಂಡಲದವರಿವಿಗೂ, ವ್ಯಾಪಿಸಿದ್ದಿತು.

ಕಸ್ತ್ವಂ ಪುರ ಪ್ರವೇಶೀತಿ ಭತ್ಸ೯ಯಂತೀ ನವಂತ್ಯತ್ರ॥
ತಾಡಯಾಮಾಸ ತಂ ಚಂಡೀಸ್ತ್ರೀರೂಪಾ ಪುರದೇವತಾ ॥ ೪೬ ॥

ಸ್ತ್ರೀರೂಪವನ್ನು ಧರಿಸಿರುವ ಲಂಕಾಪಟ್ಟಣಾಭಿಮಾನಿ ದೇವತೆಯಾದ "ಲಂಕಿಣೀ" ಎಂದು ಹೆಸರುಳ್ಳ ಚಂಡಿಯು. "ಎಲೈ ಹನುಮಂತನೇ ! ಪಟ್ಟಣಪ್ರವೇಶ ಮಾಡುತ್ತಿರುವ ನೀನು ಯಾರು ? ಎಂಬದಾಗಿ ತಿರಸ್ಕಾರಮಾಡುತ್ತಾ, ಘಟ್ಟಿಯಾಗಿ ಕೂಗುತ್ತಾ ಆ ಹನುಮಂತನನ್ನು ಹೊಡೆದಳು.

ಅಚಿಕೀರ್ಷುಃಕಪಿವರಃ ಸ್ತ್ರೀವಧಂಸ ಜುಗುಪ್ಸಿತಂ ॥
ವಾಮೋ ವಾಮಕರಾಗ್ರೇಣ ತಾಂ ಮನಾಕ್ಪ್ರತ್ಯತಾಡಯತ್ ॥ ೪೭ ॥

ಕಪಿಶ್ರೇಷ್ಠನಾದ ಹನುಮಂತನು ಸ್ತ್ರೀ ವಧೆಯು ಜಿಗುಪ್ಸಿತವೂ, ಮತ್ತು ನಿಂದಾರ್ಹವೂ, ಎಂದು ಯೋಚಿಸಿ ವಾಮರೂಪಿಯಾದ ಹನುಮಂತನು ತನ್ನ ಎಡಗೈಯ್ಯಿನ ಕೊನೆಯಿಂದ ಅವಳನ್ನುಮೆತ್ತಗೆಹೊಡೆದನು.

ಪೀಡಿತಾ ತಾಡಿತೇನಾಸ್ಯ ವಿಹ್ವಲಾ ಪ್ರಹ್ವತಾಂ ಗತಾ ॥
ಗದ್ಗದಾಕ್ಷರ ಮೂಚೇಸಾ ವಾಂಜನೇಯಂ ಕೃತಾಂಜಲಿಃ ॥ ೪೮ ॥

ಈ ಹನುಮಂತನ ಸ್ವಲ್ಪವಾದ ಏಟಿನಿಂದ ಬಹಳವಾಗಿ, ಪೀಡಿತಳಾಗಿ, ದುಃಖಿಸುತ್ತಾ ನಮ್ರಳಾಗಿ

ಬಗ್ಗಿ ಕೈ ಜೋಡಿಸಿಕೊಂಡು ಗದ್ಗದವಾದ ಕಂಠದಿಂದ ಮಾತನಾಡಿದಳು.

ಸ್ವಾಗತಂ ತೇ ಮಹಾಭಾಗ ಜಾನೇತ್ವಾಂ ಬ್ರಹ್ಮಣೋಗಿರಾ ॥
ಲಂಕಾಸಂಕಟಕಾಲೇತ್ವಾಂ ಕಪಿರ್ಜೇತಾ ಬಲಾದಿತಿ ॥ ೪೯ ॥

ಎಲೈ ! ಮಹಾನುಭಾವನಾದ ಹನುಮಂತನೇ ! ನಿನಗೆ ಸ್ವಾಗತವು. " ನೀನು ಬಂದಿದ್ದು ಒಳ್ಳೆಯದಾಯಿತು; ನಿನ್ನನ್ನು ನಾನು ಬಲ್ಲೆ, ಯಾವಾಗ ಕಪಿಯು ಬಂದು ನಿನ್ನನ್ನು ಬಲವಂತದಿಂದ ಜಯಿಸುವನೋ (ಜಯಿಸುತ್ತಾನೋ) ಆಗಲೇ, ಈ ಲಂಕಾಪಟ್ಟಣಕ್ಕೆ ಮಹದ್ವಿಪತ್ತು ಸಂಭವಿಸುವುದೆಂದು ತಿಳಿ " ಎಂದು ಬ್ರಹ್ಮದೇವರು ನನಗೆ ಹಿಂದೆ ಹೇಳಿದ್ದರು.

ವೀರ ವೀರಪ್ರಣಯಿನೀಂ ಮೃಗಯಸ್ವಮೃಗೇಕ್ಷಣೇಂ॥
ವ್ಯಾಳೈರಪ್ಯನಃಕಂಪ್ಯಾಯಾಃ ಕ್ಷಮಸ್ವಾಗಃಸ್ತ್ರಿಯೋಮಮ ॥ ೫೦ ॥

ಹೇ ! ವೀರಾಗ್ರೇಸರನೇ ! ವೀರಪತ್ನಿಯಾಗಿಯೂ, ಜಿಂಕೆಯಕಣ್ಣುಗಳಂತೆ ಕಣ್ಣುಗಳುಳ್ಳವಳಾ

ಗಿಯೂ, ಕ್ರೂರಿಗಳಾದ ರಾಕ್ಷಸೀಯರ ಮಧ್ಯದಲ್ಲಿ ಇರುವ ಸೀತೆಯನ್ನು ಹುಡುಕು. ಮತ್ತು ಸ್ತ್ರೀಯಾದ ನನ್ನ ಅಪರಾಧವನ್ನು ಕ್ಷಮಿಸು ಎಂದು ಕೇಳಿಕೊಂಡಳು.

ತಾ ಮೇವಂ ವಾದಿನೀಂ ದೀನಾಂ ಮಾಭೀರಿತಿ ವಿಸೃಜ್ಯಸಃ||
ಅದ್ವಾರೇಣ ಬಲೋದಾರಃಪ್ರವಿವೇಶ ರಿಪೋಃಪುರೀಂ || ೫೧ ||

ಈ ರೀತಿಯಾಗಿ ಹೇಳುತ್ತಿರುವ ದೀನಳಾದ ಆ ಲಂಕಿಣಿಯನ್ನು ಕುರಿತು "ನೀನು ಭಯಪಡಬೇಡ" ಎಂದು ಅಭಯವನ್ನುಕೊಟ್ಟು, ಬಲಾಢ್ಯನಾದ ಆ ಹನುಮಂತನು ಅದ್ವಾರದಿಂದ ಹೋಗಿ ಶತ್ರುವಿನ ಪಟ್ಟಣವನ್ನು ಪ್ರವೇಶಿಸಿದನು.

ದ್ವಿಷಾಂ ಮೂರ್ಧ್ನಿಪದಂ ವಾಮಂ ಚಕ್ರೇನಿದ್ರಾಮುಪೇಯುಷಾಂ ||
ಪಶ್ಚಾತ್ಕರಿಷ್ಯನ್ಸರಣೇ ದೀರ್ಘನಿದ್ರಾಮುಪೇಯುಷಃ || ೫೨ ||

ಹನುಮಂತನು ನಿದ್ರೆಮಾಡುತ್ತಿರುವ ಶತೃಗಳತಲೆಯಮೇಲೆ ತನ್ನ ಎಡಗಾಲಿನಿಂದ ತುಳಿದು ಮುಂದೆ

ನಿಮಗೆ ಯುದ್ಧದಲ್ಲಿ ಸೀರ್ಘನಿದ್ರೆಯನ್ನು ಉಂಟುಮಾಡುತ್ತೇನೆಂಬದಾಗಿ ಹೇಳುತ್ತಾ, ಸೀತಾದೇವಿಯನ್ನು ಹುಡುಕುತ್ತಿದ್ದನು.

ಸುಂದರೀ ಸುಂದರಾಕಾರೇ ಮಂದಿರೇ ಮಂದಿರೇಹರಿಃ ॥
ದದರ್ಶರಾಕ್ಷಸಾ೯ರೂಕ್ಷಾ೯ ನಾನಾವಸ್ಥಾನವಸ್ಥಿತಾ೯ ॥ ೫೩ ॥

ಹನುಮಂತನು ಸುಂದರವಾಗಿಯೂ, ಮಂದರಪರ್ವತದಂತೆ ಉನ್ನತವಾಗಿಯೂ, ಪ್ರತಿಯೊಂದು ಮನೆಯಲ್ಲಿಯೂ, ಭಯಂಕರಾಕಾರವಾಗಿಯೂ, ನಾನಾವಸ್ಥೆಗಳನ್ನು ಹೊಂದಿದವರಾಗಿಯೂ ಇರುವ ರಾಕ್ಷಸರನ್ನು ನೋಡಿದನು.

ಮತ್ತಾ೯ ಪ್ರಮತ್ತಾನ್ನುನ್ಮತ್ತಾ೯ ನಾನಾಪಾನರತಾನಪಿ ॥
ಸುರತೋತ್ಸವಸಂಸಕ್ತಾ೯ ರಮಣೀಭಿ ರ್ವೈಕ್ಷತ ॥ ೫೪ ॥

ಮತ್ತರಾದವರನ್ನೂ, ಅತಿವಿನ ಪ್ರಮತ್ತರಾದವರನ್ನೂ, ಹುಚ್ಚರಂತೆ ಇರುವವರನ್ನೂ, ನಾನಾವಿಧ

ವಾದ ಮದ್ಯಗಳನ್ನು ಪಾನಮಾಡುವದರಲ್ಲಿ ಚೆನ್ನಾಗಿ ಆಸಕ್ತರಾದವರನ್ನೂ, ಸ್ತ್ರೀಯರುಗಳಿಂದ ಕೂಡಿ, ಸುರತೋತ್ಸವ ಸುಖದಲ್ಲಿ ಸಂಪೂರ್ಣವಾಗಿ ಆಸಕ್ತರಾದವರನ್ನೂ ಸಹ, ಹನುಮಂತನು ನೋಡಿದನು.

ಜುಹ್ವತೋಽಗ್ನಿಂಚ ಜಪತೋಽಧ್ಯಾಯತೋ ಬ್ರಹ್ಮರಾಕ್ಷಸಾನ್ ||
ನಾನಾಯುಧ ಧರಾಂಶ್ಚಾನ್ಯಾನ್ ಅಪಶ್ಯತ್ಪುರ ರಕ್ಷಿಣಃ || ೫೫ ||

ಅಗ್ನಿಯಲ್ಲಿ ಹೋಮ ಮಾಡುತ್ತಲೂ, ಜಪಮಾಡುತ್ತಲೂ, ಬ್ರಹ್ಮನನ್ನು ಕುರಿತು ಧ್ಯಾನಮಾಡುತ್ತಲೂ ನಾನಾವಿಧವಾದ ಆಯುಧಗಳನ್ನು ಧರಿಸಿಕೊಂಡಿರುವ ಇತರರಾದ ಪಟ್ಟಣವನ್ನು ರಕ್ಷಿಸುವ ರಾಕ್ಷಸರನ್ನೂ ಸಹ, ಹನುಮಂತನು ನೋಡಿದನು.

ವೈಷ್ಣವಃ ವಿಷ್ಣುಗಾಯಂತಂ ಸದಾ ಸತ್ಯರತಂ ತತಃ ||
ವಿಭೀಷಣಂ ಲೋಕಹಿತೇರತಂ ಮಂಗಳನ್ಯೈಕ್ಷತ || ೫೬ ||

ಹನುಮಂತನು ಸರ್ವದಾ ಶ್ರೀ ರಾಮಚಂದ್ರ ದೇವರನ್ನು ಗಾನಮಾಡುತ್ತಲೂ, ವಿಷ್ಣುಭಕ್ತನಾ

ಗಿಯೂ, ಸತ್ಯದಲ್ಲಿನಿರತನಾಗಿಯೂ,ಲೋಕಹಿತದಲ್ಲಿ ಆಸಕ್ತನಾಗಿಯೂ ಇರುವ ವಿಭೀಷಣನನ್ನು ನೋಡಿದನು.

ದುರುಶ್ವಾಸಂ ಗಾಢನಿದ್ರಂ ಉನ್ಮತ್ತಂ ಪರ್ವತೋಪಮಂ ||
ಕುಂಭಕರ್ಣಂ ಸಮಾಲೋಕ್ಯ ಶಿರೋಧುರ್ನ್ವ ಸ ಮಾರುತಿಃ || ೫೮ ||

ದುಷ್ಟವಾದ ದುರ್ಗಂಧಯುಕ್ತವಾದ ಉಚ್ಛ್ವಾಸ ನಿಶ್ವಾಸಗಳುಳ್ಳ ಗಾಢನಿದ್ರೆಯುಳ್ಳವನಾದ, ಉನ್ಮತ್ತನಾದ, ಪರ್ವತಪ್ರಾಯನಾದ, ಕುಂಭಕರ್ಣನನ್ನು ನೋಡಿ ಆ ಮಾರುತಿಯು ತಲೆಯನ್ನು ಅಲ್ಲಾಡಿಸಿದನು.

ತತೋವಿಗ್ರಾಂಸಭಗಿನೀಂ ರಾಕ್ಷಸೇಂದ್ರಸ್ಯ ದುಷ್ಕೃತಿಂ ||
ವಿನಾಶಿನೀಂ ರಾಕ್ಷಸಾನಾಂ ಪಲಪಾನಾಶನೈರ್ಯುತಾಂ || ೫೯ ||

ಅನಂತರದಲ್ಲಿ ರಾವಣನ ತಂಗಿಯೂ, ದುಷ್ಕಾರ್ಯ ಪ್ರವರ್ತಕಳೂ, ರಾಕ್ಷಸರೊಡನೆಕೂಡಿ ಮಾಂಸಾಹಾರ ಮದ್ಯಪಾನಾಸಕ್ತಳೂ, ವಸ್ತ್ರ ವಿಹೀನಳೂ ಆದ ಶೂರ್ಪನಖಿಯನ್ನು ಕಂಡನು.

ನಗ್ನಾಂ ಪ್ರಸ್ತ ಶಿರಃ ಕೇಶಾಂ ಪಾನಾದುನ್ಮತ್ತ ಚೇತಸಾಂ ||

ಗಾಯಂತೀಂ ವಿಸ್ವರಂ ಹಾಸ್ಯಾ ದುರ್ಭಗಾಂ ಶ್ಲಕ್ಷ್ಣೇತರಾಂ ‖ ೫೯ ‖

ವಸ್ತ್ರ ವಿಹೀನಳಾಗಿಯೂ, ತಲೆಯ ಕೂದಲನ್ನು ಬಿಚ್ಚಿಕೊಂಡವಳಾಗಿಯೂ, ಮದ್ಯ ಪಾನದಿಂದ ಮದಿಸಿದವಳಾಗಿಯೂ, ಅಪಸ್ವರದಿಂದ ಗಾನಮಾಡುತ್ತಲೂ, ನಗುತ್ತಲೂ, ಮಹಾ ಭಯಂಕರಾಕಾರವುಳ್ಳ ಶೂರ್ಪನಖಿಯನ್ನು ಕಂಡನು.

ಕರೋ ಭಯೇನ ಶಿರಸಾ ಧುನ್ವತಾ ಪ್ರಭಯಂ ಕರೀಂ ‖
ಅತ್ಯಂತಮಿವ ನೃತ್ಯಂತೀಂ ಸಹಿತಾಂ ಪಿಶಿತಾಶಿಭಿಃ ‖ ೬೦ ‖

ಎರಡು ಕೈಗಳನ್ನೂ ತಲೆಯ ಮೇಲಿಟ್ಟುಕೊಂಡು, ತಲೆಯನ್ನು ಅಲ್ಲಾಡಿಸುತ್ತಾ, ಭಯಂಕರಾಕಾರ ವಾಗಿ, ರಾಕ್ಷಸೀಯರೊಡನೆ ಅತ್ಯಂತವಾಗಿ ಕುಣಿಯುತ್ತಿರುವ ಶೂರ್ಪನಖಿಯನ್ನು ಕಂಡನು.

ಇಂದ್ರಜಿನ್ಮುಖ್ಯ ಪುತ್ರಾಣಾಂ ರಾವಣಸ್ಯ ಗೃಹೇ ಗೃಹೇ ‖
ತತ್ರ ತತ್ರ ಸಮಾಲೋಕ್ಯ ಜಾನಕೀಂ ಕಿಲ ನೈಕ್ಷತ ‖ ೬೧ ‖

ರಾವಣನ ಮಕ್ಕಳಾದ ಇಂದ್ರಜಿತ್ತುವೇ ಮೊದಲಾಗಿವುಳ್ಳ ಪ್ರತಿಯೊಬ್ಬರ ಮನೆಗಳಲ್ಲಿಯೂ ಹುಡುಕಿ ಅಲ್ಲಲ್ಲಿ ಚೆನ್ನಾಗಿ ನೋಡಿ, ಜಾನಕಿಯನ್ನು ನೋಡಲಿಲ್ಲವಲ್ಲಾ ! ಎಂದುಕೊಂಡನು.

ರಾಕ್ಷಸೀ ರೈಕ್ಷತಾನೇಕಾ ಮಾನಿನೀಃ ಕಾಮಿನೀರಪಿ ||
ವಿಲಾಸಿನೀ ಭೋಗಿನೀಶ್ಚ ಯೋಗಿನೀಶ್ಚ ವಿಯೋಗಿನೀಃ || ೬೨ ||

ಹನುಮಂತನು ಅನೇಕ ಮಂದಿ ರಾಕ್ಷಸ ಸ್ತ್ರೀಯರನ್ನೂ, ಮಾನಿನೀಯರನ್ನೂ, ಕಾಮಿನೀಯರನ್ನೂ ರಾವಣನ ಹೆಂಡತಿಯರನ್ನೂ, ಯೋಗಿನೀಯರನ್ನೂ, ಅವಿಯೋಗಿನೀಯರನ್ನೂ, ವಿಲಾಸಿನೀಯರನ್ನೂ, ಭೋಗಿನೀಯರನ್ನೂ ಸಹ ನೋಡಿದನು.

ಕ್ರೀಡಿತಾಃ ಪೀಡಿತಾಃ ಪ್ರೋತಾಃ ಮುದಿತಾಃ ರುದಿತಾನಪಿ ||
ಲಾಲಿತಾಃ ಭರ್ತ್ಸಿತಾಃ ಕಾಂಶ್ಚಿತ್ ಮಾತೃಭಿಃ ದೃಷ್ಟವಾನಸೌ || ೬೩ ||

ಈ ಹನುಮಂತನು ಆಟವಾಡುವವರನ್ನೂ, ಪೀಡಿತರಾದವರನ್ನೂ, ರಕ್ಷಿತರಾದವರನ್ನೂ ಸಂತೋ

ಷದಿಂದ ಕೂಡಿದವರನ್ನೂ, ಅಳುತ್ತಿರುವವರನ್ನೂ, ಲಾಲಿಸಲ್ಪಟ್ಟವರನ್ನೂ, ಝುವರಿಸಲ್ಪಟ್ಟವರನ್ನೂ, ಗದರಿಸಲ್ಪಟ್ಟವರನ್ನೂ, ಮಾತೃಸದೃಶರಾದವರನ್ನೂ ಸಹ ನೋಡಿದನು-

ಚತುರಂಗಂತು ಕಾಮಂನೊ ಯುದ್ಧಂಸ್ಯಾದಿತಿ ಗರ್ಜಿಶಂ ||
ಚತುರಂಗಂತು ಕಾಮಂನೊನಿದ್ರಾಂ ಸೈನ್ಯಮವೈಕ್ಷತ || ೬೪ ||

ನಮ್ಮೊಂದಿಗೆ ಯಥೇಚ್ಛವಾಗಿ ಯುದ್ಧವಾಗಬೇಕೆಂದು ಅಪೇಕ್ಷಿಸುತ್ತಿರುವ ಚತುರಂಗ ಸೈನ್ಯವನ್ನೂ ಚತುರನಾದ ಹನುಮಂತನು ನಿದ್ರೆಮಾಡುತ್ತಿರುವ ಚತುರಂಗ ಸೈನ್ಯವನ್ನೂ ನೋಡಿದನು.

ರಾಮಾನನಾಭಂ ಹನುಮಾನಯಂತಂ ಖೇ ವೀಕ್ಷ್ಯ ಪೂರ್ಣೇಂದು ಮಮಾನಯಂತಂ ||
ನಾಥಂ ಹಸಸ್ಮಾರ ಸಮಾನಯಂತಂಭರ್ತ್ರಾ ಸುಖೇನೈವ ಸಮಾನಯಂತಂ ||೬೫ ||

ಇತಿ ಶ್ರೀಮನ್ನಾರಾಯಣ ಪಂಡಿತಾಚಾರ್ಯ ಕೃತೌ ಶ್ರೀಮತ್ಸಂಗ್ರಹರಾಮಾಯಣೇ
ಸುಂದರಕಾಂಡೇ ರಾಮಾಂಕೇ ದ್ವಿತೀಯಸ್ಸರ್ಗಃ || ಶ್ರೀ ರಾಮಚಂದ್ರಃ ಪ್ರೀಯತಾಂ ||

ಈ ಹನುಮಂತನು ಅಂತರಿಕ್ಷದಲ್ಲಿ ಆಗತಾನೆ ಉದಯಿಸುತ್ತಿರುವ ರಾಮಚಂದ್ರದೇವರ ಮುಖದಂತೆ ಕಾಂತಿಯುಕ್ತವಾದ ಪೂರ್ಣಚಂದ್ರನನ್ನುನೋಡಿ, ಭಕ್ತರುಗಳನ್ನು ಸುಖದಿಂದ ಪ್ರೀತಿಸುವಂಥ ತನ್ನ ಒಡೆಯನಾದ ರಾಮಚಂದ್ರದೇವರನ್ನು ಮನಸ್ಸಿನಲ್ಲಿ ಸ್ಮರಿಸಿಕೊಂಡನು.

ಇತಿ ಶ್ರೀಮತ್ಸಂಗ್ರಹರಾಮಾಯಣದ ಸುಂದರಕಾಂಡದ ರಾಮಾಂಕದ ಎರಡನೆಯಸರ್ಗದಲ್ಲಿ
ಮುಳಬಾಗಲು ಅವರೂರು ನಂದಗುಡಿ ಪೂರ್ಣಪ್ರಜ್ಞಾಚಾರ್ಯಸುತ
ಆನಂದತೀರ್ಥಾಚಾರ್ಯರವರಿಂದ ವಿರಚಿತವಾದ ಕರ್ಣಾಟಕಾಭಿಪ್ರಾಯದ ದ್ವಿತೀಯಸ್ಸರ್ಗವು.

— ೦ —

ತೃತೀಯಸ್ಸರ್ಗಃ ಪ್ರಾರಂಭಃ ॥ ಹರಿಃ ॥ ಓಂ ॥

ಶ್ಲೋ ॥ ಪ್ರಹಸ್ತಕುಂಭಕರ್ಣಾದಿ ರಾಕ್ಷಸಾನಾಂ ಗೃಹೇಗೃಹೇ ॥
ಸವಿಮೃಗ್ಯಸರೋಜಾಕ್ಷೀಂ ರಾವಣಾಂತಃಪುರಂ ಯಯೌ ॥ ೧ ॥

ತಾ ॥ ಆ ಹನುಮಂತಸು ಪ್ರಹಸ್ತ ಕುಂಭಕರ್ಣ ಇವರೇ ಮೊದಲಾಗಿವುಳ್ಳ, ರಾಕ್ಷಸರುಗಳ ಮನೆ ಮನೆಗಳಲ್ಲಿಯೂ, ಸೀತಾದೇವಿಯನ್ನು ಹುಡುಕಿ ರಾವಣನ ಅಂತಃಪುರವನ್ನು ಕುರಿತು ಹೊರಟನು.

ವಾಹರತ್ನೈರ್ವಧೂರತ್ನೈಃ ರತ್ನೈರ್ವಾಸೋ ವಿಭೂಷಣೈಃ ॥
ಆಶ್ಚರ್ಯರತ್ನೈಃಸರ್ವೈಶ್ಚ ಸಂಪೂರ್ಣಂಪುರಮೈಕ್ಷತ ॥ ೨ ॥

ವಾಹನಶ್ರೇಷ್ಠಗಳಿಂದಲೂ, ವಧೂರತ್ನಗಳಿಂದಲೂ, ಅಮೌಲ್ಯವಾದ ರತ್ನಗಳಿಂದಲೂ, ಉತ್ತಮವಾದ ವಸ್ತ್ರಗಳಿಂದಲೂ, ಅಲಂಕರಿಸಲ್ಪಟ್ಟ ಅತ್ಯಾಶ್ಚರ್ಯಕರವಾದ ರತ್ನಗಳಿಂದ ಎಲ್ಲಾ ಕಡೆಗಳಲ್ಲಿಯೂ, ಪರಿಪೂರ್ಣವಾದ ಲಂಕಾಪಟ್ಟಣವನ್ನು ಹನುಮಂತನು ನೋಡಿದನು.

ಯಾನಿ ಯಾನಿ ವರೀಯಾಂಸಿ ವಸ್ತೂನಿ ಭುವನತ್ರಯೇ ॥
ತಾನಿತಾನ್ಯುಪನೀತಾನಿ ರಕ್ಷಸೈಕ್ಷತ ಮಾರುತಿಃ ॥ ೩ ॥

ಮೂರುಲೋಕಗಳಲ್ಲಿಯೂ ಶ್ರೇಷ್ಠತರವಾದ ವಸ್ತುಗಳು ಯಾವ್ಯಾವದು ಇವೆಯೋ, ಅವುಗಳನ್ನೆಲ್ಲಾ

ರಾಕ್ಷಸನಾದ ರಾವಣನು ಸಂಗ್ರಹಮಾಡಿರುವುದನ್ನು ಹನುಮಂತನು ನೋಡಿದನು.

ಅಂತಃಪುರಾಂತರೇಽಪಶ್ಯಕ್ಕೇವಲಂ ರಾವಣಾಲಯಂ ||
ಅರ್ಧಯೋಜನವಿಸ್ತಾರಂ ಸಾರ್ಧಯೋಜನಮಾಯತಂ || ೪ ||

ಹನುಮಂತನು ರಾವಣಾಸುರನ ಅಂತಃಪುರದ ಮಧ್ಯಭಾಗದಲ್ಲಿರುವ ಅರ್ಧಯೋಜನ ವಿಸ್ತೀರ್ಣವುಳ್ಳದ್ದಾಗಿಯೂ, (ಒಂದೂವರೆ) ಯೋಜನ ಅಗಲವುಳ್ಳದ್ದಾಗಿಯೂ ಇರುವ ರಾವಣಾಸುರನ ಮುಖ್ಯವಾದ ಅಂತಃಪುರವನ್ನು ನೋಡಿದನು.

ಮಣಿಹೇಮ ಮಯೋತಸ್ಮಿ ಭವನೇಭುವನಾದ್ಭುತೇ ||
ದೀಪ್ತಂ ವಿಮಾನ ಮಾಚಷ್ಟ ಸಜ್ಯೋತಿ ರಿವ ತೇಜಸೀ || ೫ ||

ಆ ಹನುಮಂತನು ಮೂರು ಲೋಕಗಳಲ್ಲಿಯೂ, ಅದ್ಭುತವಾಗಿರುವ ಮತ್ತು ರತ್ನಗಳಿಂದಲೂ, ಭಂಗಾರಗಳಿಂದಲೂ, ನಿರ್ಮಿತವಾದ ಆ ಮನೆಯಲ್ಲಿ ತೇಜಸ್ಸಿನ ಮಧ್ಯದಲ್ಲಿರುವ ದೀಪದೋಪಾದಿಯಲ್ಲಿ,

ಪ್ರಕಾಶಿಸುವ ವಿಮಾನವನ್ನು ಕಂಡನು.

ಮಣಿಶ್ರೇಣಿ ಶ್ರಿಯಾಗೌರೇ ಪುಷ್ಪಕೇಪುರುಷರ್ಷಭಃ ‖
ಅಪಶ್ಯದ್ರಾವಣಂಸುಪ್ತಂ ಶಶಿಬಿಂಬೇ ಶಶಂ ಯಥಾ ‖ ೬ ‖

ಚಂದ್ರಬಿಂಬದಲ್ಲಿರುವ ಮಲದೋಷಾದಿಯಲ್ಲಿ ಮಣಿಮಯ ಖಚಿತವಾದ ಮತ್ತು ಪ್ರಕಾಶದಿಂದ ಬಿಳುಪು ಬಣ್ಣವನ್ನು ಹೊಂದಿರುವ ಪುಷ್ಪಕವಿಮಾನದಲ್ಲಿ ಮಲಗಿ ನಿದ್ರಿಸುತ್ತಿರುವ ರಾವಣನನ್ನು ಪುರುಷ ಶ್ರೇಷ್ಠನಾದ ಹನುಮಂತನು ನೋಡಿದನು.

ಪರಿವಾರ್ಯಪತಿಂ ವೀರಂ ಶಯಾನಂ ಶಯನೋತ್ತಮೇ ‖
ಸಹಸ್ರಂ ವರನಾರೀಣಾಂ ತತ್ರಸರ್ವಾಂಗ ಸುಂದರಂ ‖ ೭ ‖

ಉತ್ತಮವಾದ ಹಾಸಿಗೆಯಲ್ಲಿ ಮಲಗಿರುವ ವೀರನಾದ ಪತಿಯನ್ನು ಸುತ್ತುವರಿದು ಮಲಗಿರುವ ಸರ್ವಾಂಗಸುಂದರರಾದ ಅನೇಕಮಂದಿ ಸ್ತ್ರೀಯರನ್ನು ನೋಡಿದನು.

ವಿಮೃಗ್ಯ ಸುಚಿರಂ ಪೀತ್ವಾ ಮದಿರಾಂ ಮದಿರೇಕ್ಷಣಾಃ ॥
ಕಾಂತಾರತಿ ಪರಿಶ್ರಾಂತಾಃ ಶೇರತೇ ಸ್ಮಾತಿನಿದ್ರಯಾ ॥ ೮ ॥

ಚಂಚಲಾಕ್ಷಿಯರಾದ ಸ್ತ್ರೀಯರು ಒಳ್ಳೇಮದ್ಯವನ್ನು ಆರಿಸಿ ಕುಡಿದು ಕಾಂತನ ರತಿಯಿಂದ ಅತಿ ಪರಿಶ್ರಾಂತರಾಗಿ ಬಹಳ ನಿದ್ರೆಯಿಂದ ಕೂಡಿರುವ ಸ್ತ್ರೀಯರನ್ನು ಕಂಡನು.

ಸ್ತ್ರೀರತ್ನಮಾಲಾವಲಯೇ ತಸ್ಮಿನ್ ರುಚಿರ ರೋಚಿಷಿ ॥
ಮಹಾನೀಲಮಣಿಶ್ಯಾಮೋ ರಾವಣೋ ನಾಯಕಾಯಿತಃ ॥ ೯ ॥

ಆ ಸ್ತ್ರೀಯರೆಂಬ ರತ್ನಮಾಲಿಕೆಯ ಕಾಂತಿಯ ಮಧ್ಯದಲ್ಲಿ ಶ್ಯಾಮಲವರ್ಣ ವಿಶಿಷ್ಟವಾದ ಮಹಾ ನೀಲಮಣಿಯಂತೆ ಪ್ರಕಾಶಿಸುತ್ತಿರುವನಾಯಕನಾದ ರಾವಣನನ್ನು ಹನುಮಂತನು ಕಂಡನು.

ಹಂತ ಸೋಽಯಂ ಖಲಇತಿ ಪ್ರೇಕ್ಷತೈನಂ ಸ ಮಾರುತಿಃ ॥
ವಿಕಸ್ವರಾಭ್ಯಾಂ ನೇತ್ರಾಭ್ಯಾ ಮುಪಸೃತ್ಯಾಽಕುತೋಭಯಃ ॥ ೧೦ ॥

ಇವನೇಯೋ ! ಆ ನಾರೀಚೋರನಾದ ನೀಚನು. ಎಂದು ಅಗಲವಾಗಿ ತೆರೆಯಲ್ಪಟ್ಟ ಕಣ್ಣುಗಳಿಂದ ಭಯರಹಿತನಾಗಿ ಹತ್ತಿರಕ್ಕೆ ಬಂದು ಹನುಮಂತನು ರಾವಣನನ್ನು ನೋಡಿದನು.

ವಜ್ರಪಾತಾಂಕಿತೌ ತಸ್ಯ ಭುಜಗೇಂದ್ರೋಪಮೌ ಭುಜೌ ||
ರಕ್ತಚಂದನ ಸಂಶಿಕ್ತೌ ಪರ್ಯಂಕೇ ಪರಿಸಾರಿತೌ || ೧೧ ||

ಆ ರಾವಣನ ಭುಜಗಳು ವಜ್ರಾಯುಧದ ಪೆಟ್ಟಿನಿಂದ ಗುರ್ತಿಸಲ್ಪಟ್ಟವುಗಳಾಗಿಯೂ, ಸರ್ಪಶ್ರೇಷ್ಠನಾದ ವಾಸುಕಿಯ ದೇಹದಂತೆ ನೀಳವಾಗಿಯೂ, ಕೆಂಪುಗಂಧದಿಂದ ಬಳಿಯಲ್ಪಟ್ಟವುಗಳಾಗಿಯೂ, ಇದ್ದು ಹಾಸಿಗೆಯಲ್ಲಿ ಚಾಚಲ್ಪಟ್ಟಿದ್ದವು.

ದೇದೀಪ್ಯಮಾನೈರಾಕಲ್ಪೈ ಸ್ತದ್ದೇಹೇಮಾಷಮೇಚಕೇ ||
ನೀಲಾಂಬುದ ತಟಿತ್ತೃಷ್ಯೈರ್ದೀಪ ದೀಪ್ತಿರಜೀಯತ || ೧೨ ||

ಉದ್ದಿನಕಾಳಿನ ರಾಶಿಯಂತೆ ಕಪ್ಪುಬಣ್ಣವುಳ್ಳ ಆ ರಾವಣನ ದೇಹದಲ್ಲಿ ದೀಪಗಳ ಸಮೂಹವು

ನೀಲವರ್ಣವಾದ ಮೇಘಮಧ್ಯದಲ್ಲಿ ಪ್ರಕಾಶಿಸುವ ಮಿಂಚಿನಂತೆ ಹೊಳೆಯುತ್ತಿದ್ದವು.

ಅತಿಪ್ರಮಾಣ ಘ್ರಾಣಸ್ಯ ಪ್ರಾಣೋತ್ಥಾಃಶ್ವಾಸ ವಾಯವಃ ||
ದೀಪಾನ್ನಶಮಯಾಂಚಕ್ರುಃವ್ಯಕ್ತಂ ಮಣಿಮಯತ್ವತಃ || ೧೩ ||

ಬಹುದೊಡ್ಡ ಪ್ರಮಾಣವುಳ್ಳ (ಆಕಾರವುಳ್ಳ) ಹನುಮಂತನ ಮೂಗಿನಿಂದ ಹೊರಟಂಥ ನಿಶ್ವಾಸದ ಗಾಳಿಯು ಅಲ್ಲಿದ್ದ ದೀಪಗಳನ್ನು ಆರಿಸಲಿಲ್ಲವು? ಏಕೆಂದರೆ:— " ಆ ದೀಪಗಳೆಲ್ಲವೂ ಜೀವ ಮಣಿಗಳೇ ಆಗಿದ್ದುವು" ಆದ್ದರಿಂದ ಆರಿಹೋಗಲಿಲ್ಲವೆಂದು ತಾತ್ಪರ್ಯವು.

ವಿಲೋಕ್ಯೈವಂ ವಿಧಾಕಾರಂ ಸುಪ್ತಂತಂ ತದುಪಾಂತಿಕೇ ||
ಮಂಡೋದರೀ ಮಥಾ ಪಶ್ಯ ತ್ಕಾಂತಾ ಮಂತಃ ಪುರೇಶ್ವರೀಂ || ೧೪ ||

ಈ ರೀತಿಯಾಗಿ ರಾವಣನ ಪಕ್ಕದಲ್ಲಿಮಲಗಿರುವ ಆತನ ಪಟ್ಟದರಾಣಿಯಾದ ಮಂಡೋದರಿಯನ್ನು ಹನುಮಂತನು ಕಂಡನು.

ಕಿಂ ? ದೇವೀ ದಾನವೀ ಕಿಂ ? ವಾ ಕಾನ್ಯೇಷಾ ಕಾಮವಲ್ಲರೀ ||
ಇತ್ಯಾ ಶಂಕ್ಯ ನಸೀತೇತಿ ತಾರ್ಕಿಕ ಸ್ಸಮ ತರ್ಕಯತ್ || ೧೫ ||

ಈಕೆಯು ದೇವತಾಸ್ತ್ರೀಯೋ ? ಅಥವಾ ದಾನವಿಯೋ ? ಇನ್ಯಾರಿರಬಹುದು ? ಎಂದು ಆಲೋಚಿಸಿ, ಸೀತೆಯಂತೂ ಅಲ್ಲವು ಎಂಬದಾಗಿ ತಾರ್ಕಿಕನಾದ ಹನುಮಂತನು ಚೆನ್ನಾಗಿ ಊಹಿಸಿದನು.

ಸಹಸ್ರಶಃ ಸಹಪ್ರೇಷ್ಟೈಃ ಪಾನ ಭೂಮಿ ಮುಪೇಯುಷೀಃ ||
ದದರ್ಶ ದರ್ಶನೀಯಾಂಗೀಃ ರಂಗನಾಃ ಸ ಪ್ಲವಂಗಮಃ || ೧೬ ||

ಆ ಕಪಿ ಶ್ರೇಷ್ಠನಾದ ಹನುಮಂತನು ತಮ್ಮ ತಮ್ಮ ಪ್ರಿಯರಿಂದೊಡಗೂಡಿ, ಪ್ರೇಷ್ಟರಿಂದ ಕೂಡಿಕೊಂಡು ಮನೋಹರವಾದ ಅವಯವಗಳುಳ್ಳ ಸ್ತ್ರೀಯರು ಪಾನಸ್ಥಳವನ್ನುಕುರಿತು ಬರುವುದನ್ನು ನೋಡಿದನು

ಬಭೌ ಪಾನಸ್ಥಲಂ ರೂಪ್ಯ ಚಷಕಾನಾಂ ಶತಾನ್ವಿತಂ ||
ತಸ್ಯೋಪಮಾ ಪದಂ ಶ್ಯಾಚ್ಚೇ ಚ್ಛತ ಶ್ಚಂದ್ರಂ ನಭ ಸ್ಥಳಂ || ೧೭ ||

ಆ ಪಾನ ಸ್ಥಳವು ಬೆಳ್ಳಿಯಿಂದ ಮಾಡಲ್ಪಟ್ಟ ಸಾವಿರಾರು ಪಾನ ಪಾತ್ರೆಗಳಿಂದ ಶೋಭಿತವಾಗಿತ್ತು. ಇದನ್ನು ನೋಡಿದರೆ ನೂರಾರು ಚಂದ್ರಗಳಿಂದ ಕೂಡಿದ ಅಂತರಿಕ್ಷದಂತೆ ಕಾಣುತ್ತಿತ್ತು.

ಯತ್ರ ಯತ್ರ ವಿಲಾಸಿನ್ಯೋ ವಿಲಾಸಂ ವಿಪುಲಂ ದದುಃ ||
ಹರಿ ಸ್ಸ ತತ್ರ ತತ್ರಾಗಾ ದ್ರಾಮ ಸೇವೈಕ ಭೂಷಣಃ || ೧೮ ||

ಎಲ್ಲೆಲ್ಲಿ ವಿಲಾಸಿನೀಯರಾದ ಸ್ತ್ರೀಯರು ಯಥೇಚ್ಛವಾಗಿ ಕ್ರೀಡಿಸುತ್ತಿದ್ದರೋ, ಅಲ್ಲೆಲ್ಲವೂ ರಾಮ ಸೇವಾಧುರಂಧರನಾದ ಹನುಮಂತನು ಹೋಗಿ ಹುಡುಕಿದನು.

. ಗೃಹೋರ್ಧ್ವ ಗೃಹ ಸೌಧೇಷು ಪ್ರಕೋಷ್ಠೇ ವಲಭೀಷುಚ ||
ಚೈತ್ಯ ಚತ್ವರ ರಥ್ಯಾಸು ವಿಚಿಕ್ಯೇಚ್ಛಲ ಜಾನಕೀಂ || ೧೯ ||

ಮನೆಗಳ ಮೇಲ್ಭಾಗವಲ್ಲಿಯೂ, ಪ್ರಾಸಾದಗಳಲ್ಲಿಯೂ, ಪ್ರಾಕಾರಗಳಲ್ಲಿಯೂ, ಬಿಸಲು ಮಚ್ಚುಗಳಲ್ಲಿಯೂ, ಗೋಪುರಗಳಲ್ಲಿಯೂ, ಚೌಕಗಳಲ್ಲಿಯೂ, ಬೀದಿಗಳಲ್ಲಿಯೂ, ಸೀತಾ ಕೃತಿಯನ್ನು ಹುಡುಕಿದನು.

ಕ್ವಚಿದ್ವಾರಂ ವಿವೃಣ್ವಾನಃ ಕ್ವಚಿಚ್ಚ ವಿವೃತಂ ವಿಶ‌ ॥
ಕ್ವಚಿಜ್ಜಲಾಂತರೇಸ್ಯೈವ ಪ್ರಾವಿಶತ್ ಪ್ರಾಣನಂದನಃ ॥ ೨೦ ॥

ಕೆಲವುಬಾಗಿಲುಗಳನ್ನು ತೆಗೆದು ಹುಡುಕುತ್ತಲೂ, ತೆರೆದಿರುವ ಬಾಗಿಲುಗಳಲ್ಲಿ ಪ್ರವೇಶಮಾಡಿ ಹುಡುಕುತ್ತಲೂ, ಕೆಲವು ಕಿಟಕಿಗಳ ಮೂಲಕವಾಗಿಯೂ, ಪ್ರವೇಶಿಸಿ ಹುಡುಕಿದನು.

ಅವಾಪ್ಯವಾಪೀ ನನ್ವಿಷ್ಯನ್ ದೇವಾಲಯಲತಾಲಯಾನ್ ॥
ಜಲಾಶಯಾಂಶ್ಚ ವಿವಿಧಾ಼ ಚಚಾರಾಸಂಗವೋಽಹರಿಃ ॥ ೨೧ ॥

ನಿಸ್ಸಂಗನಾದ ಹನುಮಂತನು ಭಾವಿಗಳನ್ನೂ, .ದೇವಾಲಯುಗಳನ್ನೂ, ಲತಾಗೃಹಗಳನ್ನೂ, ನಾನಾವಿಧವಾದ ಜಲಾಶಯುಗಳನ್ನೂ, ಹೊಂದಿ ಸೀತೆಯನ್ನು ಹುಡುಕುವವನಾಗಿ ಅಲ್ಲಲ್ಲಿ ಸಂಚಾರಮಾಡಿದನು.

ಬಹಿರಂತಶ್ಚ ವಿಚರನ್ ವಾಯುವದ್ವಾಯುನಂದನಃ ॥
ಚತುರಂಗುಲಮಾತ್ರಂಚಪುರ್ಯಾಂ ನ ವ್ಯಚಿನೋನ್ನಹಿ ॥ ೨೨ ॥

ವಾಯುಪುತ್ರನಾದ ಹನುಮಂತನು ವಾಯುವಿನಂತೆ ಒಳಗೂ, ಹೊರಗೂ, ಹುಡುಕಿಕೊಂಡು ಓಡಾಡುತ್ತಾ, ಆ ಲಂಕಾಪಟ್ಟಣದಲ್ಲಿ ನಾಲ್ಕು ಅಂಗುಲದಷ್ಟು ಜಾಗವನ್ನೂ ಕೂಡ ಬಿಡದೆ ಹುಡುಕಿದನು.

ಚಿಂತಯಾಮಾಸ ಹನುಮಾ ನದೃಷ್ಟ್ವಾ ಜಾನಕೀತನುಂ ||
ಮಯಾ ನದೃಷ್ಟಾ ಸಾ ದೇವಿ ಕಾರ್ಯಂಸಕಲ ಮಾಕುಲಂ || ೨೩ ||

ಹನುಮಂತನು ಸೀತಾಪ್ರತಿಕೃತಿಯನ್ನು ಕಾಣದೆ ಬಹಳವಾಗಿ ಆಲೋಚನೆ ಮಾಡಿ ನನ್ನಿಂದ ಸೀತೆಯು ಕಾಣಲ್ಪಡಲಿಲ್ಲವೂ? ಬಂದ ಕಾರ್ಯವು ನೆರವೇರಲಿಲ್ಲವಲ್ಲಾ! ಮುಂದೇನು ಗತಿಯೆಂದು ವ್ಯಾಕುಲನಾದನು.

ನಾಗಾಂಗನಾ ನಾಕನಾರೀ ನಗರ್ಯಾ ರಾಕ್ಷಸೀರಪಿ ||
ಅದ್ರಾಕ್ಷಂ ಯಾಸ್ಸವಸ್ಥಾಸು ತಾನಹಂತಸಭೋಚಿತಾಃ || ೨೪ ||

ನಾನಾಂಗನೆಯರನ್ನೂ ನಾಗಕನ್ಯಕೆಯರನ್ನೂ, ದೇವತಾಸ್ತ್ರೀಯರನ್ನೂ, ನಾಗರೀಕ ಸ್ತ್ರೀಯರನ್ನೂ ರಾಕ್ಷಸಸ್ತ್ರೀಯರನ್ನೂ ಸಹ ನಾನಾವಸ್ಥೆಗಳಲ್ಲಿ ಇರುವುದನ್ನು ಕಂಡನು.

ನಾ ವಸ್ತ್ರಾಸ್ತ್ರಿಯ ಈಕ್ಷೇತ ಬ್ರಹ್ಮಚಾರೀ ವಿಶೇಷತಃ ॥
ಇತಿಶಾಸ್ತ್ರಗತಿಂ ನಾಹ ಮದ್ರಾಕ್ಷಂ ಕಾರ್ಯಗೌರವಾತ್ ॥ ೨೫ ॥

ವಸ್ತ್ರಹೀನಳಾದ ಸ್ತ್ರೀಯನ್ನು ಯಾರೂ ನೋಡಬಾರದು; ಅದರಲ್ಲಿಯೂ ಬ್ರಹ್ಮಚಾರಿಯಂತೂ, ಸರ್ವಥಾ ನೋಡಬಾರದು; ಎಂಬದಾಗಿ ವಿಶೇಷ ನಿಯಮವಿರುತ್ತದೆ. ಹೀಗೆ ಶಾಸ್ತ್ರವಿರುತ್ತದೆ. ಇಂಥಹ ಶಾಸ್ತ್ರವನ್ನು ಆತಿಕ್ರಮಿಸಿ ಕಾರ್ಯಗೌರವದ ದೆಶೆಯಿಂದ ನೋಡಿದ್ದಾಯಿತು.

ಲವಣಾಬ್ಧಿರ್ವೃಥಾ ತೀರ್ಣೋ ನಕಾರ್ಯಾಬ್ಧಿರ್ಮಹಾನಯಂ ॥
ನಾನಾ ನಾರ್ಯೋ ವೃಥಾ ದೃಷ್ಟ್ವಾ ರಾಮನಾರೀ ನಹಾಬತ ॥ ೨೬ ॥

ಲವಣ ಸಮುದ್ರವು ವ್ಯರ್ಥವಾಗಿ ನನ್ನಿಂದ ದಾಟಲ್ಪಟ್ಟಿತು. ಕಾರ್ಯವೆಂಬ ಸಮುದ್ರವು ನನ್ನಿಂದ ದಾಟಲ್ಪಡಲಿಲ್ಲವೂ; ಇದೇ ಮುಖ್ಯವಾದದ್ದು; ಮಹದನ್ಯಾಯವಾಯ್ತು; ನಾನಾವಿಧರಾದ ಸ್ತ್ರೀಯರುಗಳನ್ನು ನೋಡಿದ್ದಾಯಿತು. ಅಯ್ಯೋ ! ರಾಮನಾರಿಯೇ ! ಸಿಕ್ಕಲಿಲ್ಲವಲ್ಲಾ ! ಆಹಾ ! ಖೇದವು ! ಎಂತ ವ್ಯಾಕುಲಿತ

ನಾದನು.

ಮಮತ್ವಸಂಗ ಮನಸೋ ನದೋಷೋ ವಿಷಯೇ ಕ್ಷಣಾತ್ ॥
ವಿಷಯೈರ್ನಹಿಲೇಪೋಸ್ತಿ ವಹ್ನಿವಾಯು ವಿವಸ್ವತಾಂ ॥ ೨೭ ॥

ಅಸಂಗ ಮನಸ್ಕನಾದ ನನಗಾದರೋ ವಿಷಯದರ್ಶನದಿಂದ ದೋಷವಿಲ್ಲವು; ಏಕೆಂದರೆ:— ಬೆಂಕಿ, ಗಾಳಿ, ಸೂರ್ಯ, ಇವರುಗಳಿಗೆ ವಿಷಯಲೇಪವಿಲ್ಲವೆಂದು ಧರ್ಮಶಾಸ್ತ್ರಸಿದ್ಧವು. (ಈ ಶ್ಲೋಕದಿಂದ ಹನುಮಂತನು ವಾಯುವಿನ ಅಂಶ ಸಂಭೂತನೆಂದು ವ್ಯಕ್ತವಾಗುವುದು.)

ಯನ್ನದೇವೀ ಮಯಾದೃಷ್ಟಾ ಸಂಕಟಃಸಹಿನಾಪರಃ ॥
ತಾ ಮದೃಷ್ಟ್ವಾ ಕಪೀಃಪ್ರಾಪ್ಯ ಕಿಂನು ವಕ್ಷ್ಯಾಮಿಷಂಡವತ್ ॥ ೨೮ ॥

ಸೀತೆಯು ನನ್ನಿಂದ ಕಾಣಲ್ಪಡದೆ ಹೋದರೇ, ಅದಕ್ಕಿಂತಲೂ ಬೇರೆಯಾದ ದುಃಖವಿಲ್ಲವು. ಆ ಸೀತೆಯನ್ನು ನೋಡದೆ, ನಾನು ಹಿಂತಿರುಗಿ ಹೋಗಿ, ಕಪಿಗಳನ್ನು ಸೇರಿ, ಷಂಡನಂತೆ ನಾನು ಸೀತೆಯನ್ನು ನೋಡ

ಲಿಲ್ಲವೆಂಬದಾಗಿ ಹೇಗೆ ಹೇಳಲಿ? ಎಂಬದಾಗಿ ಯೋಚಿಸಿದನು.

ಸೀತಾ ನದೃಷ್ಟೇತಿ ಕಥಂ ವಕ್ಷ್ಯೇ ಸಂ ವಂದ್ಯರಾಘವಂ ॥
ಅವೇಕ್ಷಿಷ್ಯೇಕಥಂ ತಸ್ಯ ಪೂರ್ಣಚಂದ್ರೋಪಮಂ ಮುಖಂ ॥ ೨೯ ॥

ಸೀತಾದೇವಿಯನ್ನು ನಾನು ನೋಡಲಿಲ್ಲವೆಂದು ಶ್ರೀ ರಾಮಚಂದ್ರನಿಗೆ ಹೇಗೆ ಹೇಳಲಿ? ಆ ಶ್ರೀ ರಾಮಚಂದ್ರನ ಪೂರ್ಣಚಂದ್ರ ಸದೃಶವಾದ ಮುಖವನ್ನು ತಾನೇ ನಾನು ಹೇಗೆ ನೋಡಲಿ? ಎಂಬದಾಗಿ ಆಲೋಚಿಸಿದನು.

ಸೀತಾ ಕ್ವಾಪಿ ನದೃಷ್ಟೇತಿ ವಚನಂ ವಿಷಮಂ ವಿಷಂ ॥
ನರೇಂದ್ರ ವಾನರೇಂದ್ರಾಣಾಂ ಕುಲಯೋರ್ವಿಲಯ ಪ್ರದಂ ॥ ೩೦ ॥

ಸೀತಾದೇವಿಯನ್ನು ನಾನು ಎಲ್ಲಿಯೂ ಕಾಣಲಿಲ್ಲವೆಂಬ ಮಾತು ಭಯಂಕರವಾದ ಮಹಾವಿಷದ ಪ್ರಾಯವಾಗಿರುವುದು ಏಕೆಂದರೆ:— ಈ ಮಾತನ್ನು ಕೇಳಿದ ಕೂಡಲೇ ವಿರಹ ತಾಪದಿಂದ ಪ್ರಾಣವನ್ನು

ಬಿಡುವನು. ರಾಮನು ಸತ್ತದ್ದನ್ನು ಕೇಳಿ ಸುಗ್ರೀವನೂ,ಸಾಯುವನು. ಆದ್ದರಿಂದ ರಾಮನ ವಂಶವೂ, ಸುಗ್ರೀವನ ವಂಶವೂ, ಸಹ ಒಂದೇ ಮಾತಿನಿಂದ ನಾಶವಾಗುವುದು. ಆದ್ದರಿಂದಲೇ ಈ ಮಾತು ಮಹಾ ಭಯಂಕರವಾದ ವಿಷಯವೆಂದು ಹೇಳಿದ್ದು.

ಸರ್ವಂ ವಿಕ್ರಮ ಜಾಲಂಹಿ ನಿಷ್ಫಲಂಹೀಂದ್ರಜಾಲವತ್ ॥
ದೇವೀಮಪಶ್ಯತೋ ಯದ್ವಲ್ಲಾಲಿತ್ಯಂ ಫೇನಸಂಪದಃ ॥ ೩೧ ॥

ಸೀತಾದೇವಿಯನ್ನು ಕಾಣದೇ ಇರುವ ನನ್ನ ಪರಾಕ್ರಮವೆಲ್ಲವೂ, ಇಂದ್ರಜಾಲ ವಿದ್ಯದೋಪಾದಿಯಲ್ಲಿ ನಿಷ್ಫಲವಾಯಿತು. ಮತ್ತು ನೀರಿನ ಮೇಲಿನ ಗುಳ್ಳೆಯಂತೆ ಕ್ಷಣಮಾತ್ರದಲ್ಲಿ ನಾಶವಾಯಿತು.

ಮುಷ್ಟಿಘಾತೈರ್ದುರಾಚಾರಂ ರಾವಣಂ ಮಾರಯಾಮಿವಾ ॥
ಅಥವಾ ಪಶುವದ್ಬಧ್ವಾ ರಾಮಪಾರ್ಶ್ವಂ ನಯಾಮಿವಾ ॥ ೩೨ ॥

ದುರಾಚಾರಿಯಾದ ರಾವಣನನ್ನು ಮುಷ್ಟಿಗಳಿದಂ ಹೊಡೆದು ಕೊಲ್ಲಲೋ? ಅಥವಾ ಪಶುವಿನಂತೆ

ಕಟ್ಟಿ ರಾಮನ ಸಮೀಪಕ್ಕೆ ಕರೆದುಕೊಂಡು ಹೋಗಲೋ? ಎಂಬದಾಗಿ ಆಲೋಚಿಸಿದನು.

ಅಶೋಕ ವನಿಕಾಂ ಯಾಯಾ ಮಶೋಕ ವನಿತಾಂ ವರಾಂ ||
ಅಥಾಪ್ಯಹಂ ವಿಚೇಷ್ಯಾಮಿ ಶ್ಯಾದ್ಯತ್ನಃ ಸಫಲೋಯತಃ || ೩೩ ||

ಅಶೋಕವನಕ್ಕೆ ಹೋಗುತ್ತೇನೆ; ಅಲ್ಲಿ ಶೋಕರಹಿತಳಾದಂಥ ಶ್ರೇಷ್ಠಳಾದ ಸೀತಾದೇವಿಯನ್ನು ನನ್ನ ಪ ಯತ್ನವು ಸಫಲವಾಗುವಹಾಗೆ ಹುಡುಕುತ್ತೇನೆ.

ನಮೋಸ್ತು ರಾಮ ರಾಮಾಯ್ಯೆ ರಾಮಾಯಾಪಿ ನಮೋನಮಃ ||
ಭೂಮ್ನೇ ಸರ್ವಾಂತರಾ ಯಾಪಿ ಸರ್ವ ಸಿದ್ಧಿ ಪ್ರದಾಯಿನೇ || ೩೪ ||

ಶ್ರೀ ರಾಮಚಂದ್ರದೇವರಿಗೋಸ್ಕರ ನಮಸ್ಕಾರ ನಮಸ್ಕಾರವು. ರಾಮದೇವರ ಪತ್ನಿಯಾದ ಸೀತಾ ದೇವಿಗೂ ನಮಸ್ಕಾರ, ನಮಸ್ಕಾರ, ನಮಸ್ಕಾರವು.

ಇತ್ಯಾಲೋಚ್ಯ ವಿವಿಚ್ಯಾಸೌ ಕಾರ್ಯಂ ನಿರ್ಧಾರ್ಯ ವೀರ್ಯವಾನ್ ||

ಅಶೋಕ ವನಿಕಾಂ ಪ್ರಾಯಾ ತ್ಸರ್ವರ್ತು ಫಲ ಪುಷ್ಪಣೀಂ ॥ ೩೫ ॥

ಈ ರೀತಿಯಾಗಿ ಹನುಮಂತನು ಆಲೋಚಿಸಿ, ಬಲಿಷ್ಠನಾದ ತಾನು ಮಾಡ ಬೇಕಾದ ಕಾರ್ಯವನ್ನು ನಿಶ್ಚಯಿಸಿ, ಸರ್ವ ಋತು ಫಲ ಪುಷ್ಪಗಳಿಂದ ಕೂಡಿದ, ಅಶೋಕವನವನ್ನು ಕುರಿತು ಪ್ರಯಾಣ ಮಾಡಿದನು.

ಅಶೋಕ ರೋಚಿಷಾ ಶೋಣಂ ವನ ಮೈಕ್ಷತ ವಾನರಃ ॥
ಪದ್ಮರಾಗೈ ರಿವಾ ಕೀರ್ಣಂ ಹರಿತೋ ಪಲ ಪರ್ವತಂ ॥ ೩೬ ॥

ಆ ಹನುಮಂತನು ಆಶೋಕ ಪುಷ್ಪದ ಕಾಂತಿಯಿಂದಲೂ, ಕೆಂಪುಬಣ್ಣವುಳ್ಳದ್ದಾಗಿಯೂ, ಪದ್ಮರಾಗ ಮಣಿಗಳಿಂದ ಕೂಡಿದ್ದಾಗಿಯೂ, ಹರಿನ್ಮಣಿ ಪರ್ವತದಿಂದ (ನೀಲವರ್ಣಪರ್ವತ) ಕೂಡಿದ್ದಾಗಿಯೂ ಇರುವ ಆಶೋಕ ವನವನ್ನು ನೋಡಿದನು.

ನದೀ ತ್ರಿಕೂಟಾ ತ್ಪತಿತಾ ವನ ಮಧ್ಯಂ ವ್ಯರಾಜಯತ್ ॥
ರಮ್ಯಂ ಶೀಮಂತ ಶೀಮೇವ ಶೀಮಂತಿನ್ಯಾಃ ಶಿರೋರುಹಂ ॥ ೩೭ ॥

ತ್ರಿಕೂಟ ಪರ್ವತದಿಂದ ಹುಟ್ಟಿದ ಒಂದಾನೊಂದು ನದಿಯು ಈ ಅಶೋಕ ವನದ ಮಧ್ಯದಲ್ಲಿ ಹರಿದು ಪ್ರಕಾಶಿಸುತ್ತಿದ್ದಿತು. ಅದನ್ನು ನೋಡಿದರೆ ಸ್ತ್ರೀಯರ ಬೈತಲೆಯು ತಲೆಯ ಮಧ್ಯ ಪ್ರದೇಶದಲ್ಲಿ ಹೇಗೆ ಪ್ರಕಾಶಿಸುವುದೋ ಹಾಗೆ ಇದ್ದಿತು.

ಭವನೇ ಪವನಸ್ಯಾಥ ವನೇ ಪವನ ನಂದನಃ ||
ವಿಜಹಾರ ಯಥಾ ಕಾಮಂ ಪ್ಲವಮಾನ ಇತ ಸ್ತತಃ || ೩೮ ||

ವಾಯು ಪುತ್ರನಾದ ಹನುಮಂತನು ಆ ಪ್ರಕಾಶಿತವಾದ ವನ ಮಧ್ಯದಲ್ಲಿ ಯಥೇಚ್ಛವಾಗಿ ಅಲ್ಲಿಂದಿಲ್ಲಿಗೆ ಕುಪ್ಪಳಿಸುತ್ತಾ ಕ್ರೀಡಿಸಿದನು.

ಕಾಂಚನೀನಾಂಚ ವಲ್ಲೀನಾಂ ಕಾಂಚನಾನಾಂಚ ಶಾಖಿನಾಂ ||
ಸಮಭ್ಯನಂದ ತ್ಸಂಯೋಗಂ ದಂಪತೀನಾಮಿವ ಪ್ರಭುಃ || ೩೯ ||

ಪ್ರಭುವಾದ ಹನುಮಂತನು ಭಂಗಾರಮಯವಾದ ಬಳ್ಳಿಗಳನ್ನು ಭಂಗಾರಮಯವಾದ ಕೊಂಬೆ

ಗಳುಳ್ಳ ಮರಕ್ಕೆ ಸೇರಿಸುತ್ತಾ, ಗಂಡ – ಹೆಂಡತಿಯರನ್ನು ಒಟ್ಟಿಗೆ ಸೇರಿಸುವ ಸ್ವಾಮಿಯಂತೆ ಪ್ರಕಾಶಿಸಿದನು.

ಚೈತ್ರಂ ಚೈತ್ರ ರಥಸ್ಯೇದಂ ಕಾಂತ್ಯಾ ನಂದನ ನಂದನಂ ||
ಮಣಿ ಹೇಮ ಮಯಂ ಸರ್ವಂ ಉದ್ಯಾನಂ ಸಸ ವೈಕ್ಷತ || ೪೦ ||

ಆ ವನವು ತನ್ನ ಕಾಂತಿಯಿಂದ ಕುಬೇರನ ಚೈತ್ರರಥವೆಂಬ ವನವನ್ನೂ, ದೇವೇಂದ್ರನ ನಂದನ ವನವನ್ನೂ ಸಹ ತಿರಸ್ಕರಿಸುವಂತಿದ್ದು, ಸಮಸ್ತವಾದ ರತ್ನಗಳಿಂದಲೂ, ಭಂಗಾರದಿಂದಲೂ ತುಂಬಿ ಪ್ರಕಾಶಿಸುತ್ತಿದ್ದುದನ್ನು ಹನುಮಂತನು ನೋಡಿದನು.

ವನೇ ತುಚ್ಛೇತರ ಚ್ಛಾಯೇ ದದರ್ಶ ಪವನಾತ್ಮಜಃ ||
ಶಿಂಶುಪಾಂ ಕಾಂಚನಮಯೀಂ ಮೇಘೇ ಸೌದಾಮಿನೀ ಮಿವಾ || ೪೧ ||

ಆ ಅಶೋಕವನದಲ್ಲ ಆ ಹನುಮಂತನು ಮೇಘ ಮಧ್ಯದಲ್ಲಿರುವ ಮಿಂಚಿನೋಪಾದಿಯಲ್ಲಿ ಪ್ರಕಾಶಿಸುತ್ತಿರುವ ಕಾಂಚನಮಯವಾದ ಶಿಂಶುಪಾವೃಕ್ಷವನ್ನು ಕಂಡನು.

ತತ್ರ ಪ್ರವಾಳ ಸೋಪಾನಂ ಚೈತ್ಯೈ ಪ್ರಾಸಾದ ಮದ್ಭುತಂ ||
ಸಹಸ್ರ ಸ್ತಂಭ ವೈಕ್ಷಿಪ್ತ ಶ್ರೀಮತ್ಕನಕ ವೇದಿಕಂ || ೪೨ ||

ಆ ವನಮಧ್ಯದಲ್ಲಿ ಹವಳದ ಸೋಪಾನಗಳಿಂದಲೂ, ಸಹಸ್ರ ಕಂಭಗಳಿಂದಲೂ, ಭಂಗಾರದ ಜಗಲಿಗಳಿಂದಲೂ ಕೂಡಿದ, ಉನ್ನತವಾದ ಗೋಪುರವುಳ್ಳ ಒಂದು ಮಹಡಿಯ ಮನೆಯನ್ನು ಕಂಡನು.

ಇಮಾಂ ನದೀಂ ಶಿವ ಜಲಾಂ ಶಿವ ಚ್ಛಾಯಾಂಚ ಶಿಂಶುಪಾಂ ||
ಸಾ ತನ್ವೀ ಸೇವತೇ ನೂನ ಮಿತ್ಯ ಮನ್ಯತ ಮಾರುತಿಃ || ೪೩ ||

ಮರುತ್ಪುತ್ರನಾದ ಹನುಮಂತನು ಶುಭ್ರವಾದ ನೀರುಳ್ಳ ಈ ನದಿಯನ್ನೂ, ದಟ್ಟವಾದ ನೆರಳುಳ್ಳ, ಈ ಶಿಂಶುಪಾ ವೃಕ್ಷವನ್ನು ಸೀತಾದೇವಿಯು ಆಶ್ರಯಿಸಿಕೊಂಡಿರುತ್ತಾಳೆಂಬದಾಗಿ ಆಲೋಚಿಸಿದನು.

ತಸ್ಯಾ ಏಕತಮಾಂ ಶಾಖಾಂ ಶಾಖಾಮೃಗ ಪತಿ ಶ್ಶನೈಃ ||
ಆರುಹ್ಯ ಸಂವೃತಃ ಪರ್ಣೈಃ ದದರ್ಶ ಸ ದಿಶೋ ದಶ || ೪೪ ||

ಆ ಕಪಿಶ್ರೇಷ್ಠನಾದ ಹನುಮಂತನು ಆ ಶಿಂಶುಪಾವೃಕ್ಷದ ಒಂದಾನೊಂದು ಕೊಂಬೆಯನ್ನು ಜಾಗ್ರತೆಯಾಗಿ ಹತ್ತಿ, ಎಲೆಗಳಿಂದ ತನ್ನ ದೇಹವನ್ನು ಮರೆಮಾಡಿಕೊಂಡು ಹತ್ತು ದಿಕ್ಕುಗಳನ್ನೂ, ಸೀತಾದೇವಿಯನ್ನು ಹುಡುಕಲು ನೋಡುತ್ತಿದ್ದನು.

ತತ್ರದೀನಾ ಮಿವಾದೀನಾಂ ಮಲಿನಾಮಿವ ಚಾಮಲಾಂ ॥
ಕೃಶಾ ಮಿವೋಪವಾಸೇನ ಹ್ಯಕೃಶಾಂ ಪ್ರಕೃತಿಂ ಶ್ರಿಯಃ ॥ ೪೫ ॥

ಆ ಅಶೋಕ ವೃಕ್ಷದ ಅಡಿಯಲ್ಲಿ ಅದೀನಳಾದರೂ ಕೂಡ ದೀನಳಂತೆಯೂ, ಪರಿಶುದ್ಧಳಾದರೂ ಕೂಡ ಮಲಿನಳಂತೆಯೂ, ಅಕೃಶಳಾದರೂ ಕೂಡ ಉಪವಾಸದಿಂದ ಕೃಶಳಾದಂತೆಯೂ ತೋರುತ್ತಿರುವ ಸ್ವಭಾವತಃ ಕಾಂತಿಯುಕ್ತಳಾದ ಸೀತಾದೇವಿಯನ್ನು ಹನುಮಂತನು ನೋಡಿದನು.

ಫುಲ್ಲಪದ್ಮಪಲಾಶಾಕ್ಷೀಂ ಪೂರ್ಣಚಂದ್ರ ನಿಭಾನನಾಂ ॥
ನಿಸ್ತಪ್ತ ಸ್ವರ್ಣವರ್ಣಾಂಗೀಂ ಸಾಕ್ಷಾತ್ಸರ್ವಾಂಗ ಸುಂದರೀಂ ॥ ೪೬ ॥

ಪದ್ಮದಳದೋಪಾದಿಯಲ್ಲಿ ವಿಶಾಲವಾದ ಕಣ್ಣುಗಳುಳ್ಳ ಪೂರ್ಣಚಂದ್ರನಂತೆ ಕಾಂತಿಯುಕ್ತವಾದ ಮುಖವುಳ್ಳ ಪುಟಕ್ಕೆ ಹಾಕಿದ ಭಂಗಾರದಂತೆ ಮೈಬಣ್ಣವುಳ್ಳ, ಸರ್ವಾಂಗಗಳಿಂದಲೂ, ಸುಂದರಿಯಾದ ಸೀತಾದೇವಿಯನ್ನು ಹನುಮಂತನು ಕಂಡನು.

ಆಲಂಬಿನೀಂ ಕೇಶವೇಣೀಂ ಕೃತ್ವಾಜಘನಮಂಡಲೇ ॥
ಆಸೀನಾಂ ಮವನೀಪೃಷ್ಟೇ ಸಂತತಾ ಶ್ರಾಂಬು ಸಂತತಿಂ ॥ ೪೭ ॥

ಜೋಲಾಡುತ್ತಿರುವ ಕೇಶವೇಣಿಯುಳ್ಳ ನೆಲದ ಮೇಲೆ ಕೂತಿರುವ ಸಂತತವಾಗಿ ಕಣ್ಣೀರು ಧಾರೆಯನ್ನು ಸುರಿಸುತ್ತಿರುವ ಮೊಣಕಾಲಿನಮೇಲೆ ತಲೆಯನ್ನಿಟ್ಟು ಕೊಂಡಿರುವ ಸೀತಾದೇವಿಯನ್ನು ಕಂಡನು.

ಹಂತ್ಯೈಕ ವಸನಾಂ ಕೈಶ್ಚಿತ್ ಭೂಷಿತಾಂ ಭೂಷಣೈರಪಿ ॥
ಮಾರುತಿಃ ಶಿಂಶುಪಾಮೂಲೇ ಮಾಯಾಸೀತಾಮವೈಕ್ಷತ ॥ ೪೮ ॥

ಏಕವಸ್ತ್ರಧಾರಿಯಾಗಿಯೂ, ಎಲ್ಲೋ ಕೆಲವು ಒಡವೆಗಳನ್ನು ಮಾತ್ರ ಇಟ್ಟುಕೊಂಡು ಶಿಂಶುಪಾ

ವೃಕ್ಷದ ಬುಡದಲ್ಲಿ ಕೂತುಕೊಂಡಿರುವ ಮಾಯಾಸೀತೆಯನ್ನು ಹನುಮಂತನು ನೋಡಿದನು.

ತಾಕ್ಷಸಾರೇಃ ಪ್ರಿಯಾಂಭಾರ್ಯಾಂ ರಾಕ್ಷಸೀಗಣ ಮಧ್ಯಗಾಂ ॥
ಮೃಗೀಮಿವ ಶ್ವಗಣಗಾಂ ದೃಷ್ಟ್ವಾ ಚಿಂತಾಮವಾಪಸಃ ॥ ೪೯ ॥

ರಾಕ್ಷಸರಿಗೆಲ್ಲಾ ಶತೃವಾದ ಶ್ರೀ ರಾಮಚಂದ್ರದೇವರ ಪ್ರಿಯಪತ್ನಿಯಾದ ರಾಕ್ಷಸೀಯರುಗಳ ಸಮೂಹದ ಮಧ್ಯದಲ್ಲಿ, ನಾಯಿಗಳ ಸಮೂಹದ ಮಧ್ಯದಲ್ಲಿರುವ, ಹೆಣ್ಣುಜಿಂಕೆಯೋಪಾದಿಯಲ್ಲಿರುವ ಸೀತೆಯನ್ನು ನೋಡಿ, ಆ ಹನುಮಂತನು ಬಹಳವಾಗಿ ಚಿಂತಿಸಿದನು.

ರಾಮದೇವಸ್ಯ ದೇವೀಯಂ ವ್ಯಕ್ತಮಾಯತಲೋಚನಾ ॥
ಈದೃಶಂ ಲಕ್ಷಣಂ ತೇನ ಕೀರ್ತಿತಂ ಪುಣ್ಯಕೀರ್ತಿನಾ ॥ ೫೦ ॥

ಈಕೆಯ ವಿಶಾಲವಾದ ಕಣ್ಣುಗಳೇ ಈಕೆಯು ರಾಮದೇವರ ಪತ್ನಿಯಾದ ಸೀತಾದೇವಿಯೆಂದು ವ್ಯಕ್ತ ಮಾಡಿಕೊಡುತ್ತ್ರವೆ ಈ ವಿಧವಾದ ಈ ಕಣ್ಣುಗಳ ಲಕ್ಷಣವನ್ನು ಪುಣ್ಯಕೀರ್ತಿಯಾದ ರಾಮನು ನನಗೆಹೇಳಿದ್ದನು

ಹ್ರಿಯಮಾಣಾ ಮಯಾ ದೃಷ್ಟಾ ಸೇಯಮೇವೇತಿ ಭಾತಿಮೇ ॥
ತಸ್ಯೋತ್ತರೀ ಯಸ್ಯ ಸಮಂ ಉತ್ತರೀಯ ಮಿದಂ ಧೃವಂ ॥ ೫೧ ॥

ರಾಮದೇವರಿಂದ ಹೇಳಲ್ಪಟ್ಟಿದ್ದ ಲಕ್ಷಣಗಳೇ ಆಗಿರುತ್ತವೆ. ರಾವಣನಿಂದ ಅಪಹೃತಳಾದ ಸೀತಾದೇವಿಯು ನನ್ನಿಂದ ನೋಡಲ್ಪಟ್ಟಳು. ಈಕೆಯೇ ಆ ಸೀತಾದೇವಿಯೆಂದು ನನಗೆ ಈಕೆಯು ಧರಿಸಿರುವ ಉತ್ತರೀಯದಿಂದಲೇ, ಆಕಾಶಮಾರ್ಗವಾಗಿ ಹೋಗುವಾಗ ಬಿಟ್ಟು ಹೋಗಿದ್ದ ಉತ್ತರೀಯಕ್ಕೆ ಸಮವಾಗಿದೆ. ಆದ್ದರಿಂದ ಈಕೆಯೇ ಸೀತಾದೇವಿಯೆಂದು ನನ್ನ ಬುದ್ಧಿಗೆ ಹೊಳೆಯುತ್ತದೆಂದು ಹನುಮಂತನು ತಿಳಿದುಕೊಂಡನು.

ಕಥಂ ವಿಶ್ವೇಶ್ವರೀ ಸೀತಾ ಸ್ವಯಂ ವಿಶ್ವೇಶ್ವರಪ್ರಿಯಾ ॥
ದುಃಖಿನೀತಿ ಮಹಾಚೋದ್ಯಂ ಪ್ರತಿಭಾ ಮೇ ನಿರಸ್ಯತಿ ॥ ೫೨ ॥

ವಿಶ್ವೇಶ್ವರನಾದ ರಾಮದೇವರ ಪತ್ನಿಯಾಗಿಯೂ, ಸ್ವಯಂ ವಿಶ್ವೇಶ್ವರಿಯಾಗಿಯೂ ಇರುವ ಸೀತಾ

ದೇವಿಯು ಈಗ ದುಃಖಿನಿಯಾಗಿದ್ದಾಳೆಂಬುವುದು ಬಹಳ ಆಶ್ಚರ್ಯವಾಗಿದೆ. ಇದನ್ನು ತಿಳಿಯಲು ನನ್ನ ಪ್ರತಿಭೆಯು ಬಹಳ ಕುಂಠಿತವಾಯಿತು.

ಅನುಕುರ್ವಾಣಯೋರ್ಲೋಕಂ ದೇವದೇವ್ಯೋ ರದೀನಯೋಃ ॥
ದುಃಖ ಮೋಹಾದಿಕಾ ಮಿಥ್ಯಾ ನಟ ನಟ್ಯೋರಿವ ಧ್ರುವಂ ॥ ೫೩ ॥

ಸ್ವರೂಪತಃ (ಸ್ವಭಾವತಃ) ಅದೀನರಾದ ದೇವದೇವಿಯರು ಲೋಕವನ್ನು ಅನುಕರಿಸುವ ನಟರೋಪಾದಿಯಲ್ಲಿ ಇಬ್ಬರನ್ನೂ (ರಾಮನು—ಸೀತಾದೇವಿಯು) ಸಹದುಃಖ ಮೋಹಾದಿಗಳನ್ನು ಹೊಂದುವುದು ಸುಳ್ಳು. ಈ ಮಾತು ಸತ್ಯವು.

ಮಾಯಾಮಯೀಮಿಮಾಂ ಸೃಷ್ಟ್ವಾ ಸೀತಾಪ್ರತಿಕೃತಿಂ ನಿಜಾಂ ॥
ಸ್ವಯಮಂತರ್ಹಿತಾ ವ್ಯಕ್ತ ಮಿತ್ಥಂ ಮೇ ಪ್ರತಿಭಾ ಶುಭಾ ॥ ೫೪ ॥

ಆ ಸೀತಾದೇವಿಯು ತನ್ನ ಮಾಯೆಯಿಂದ ತನ್ನ ಪ್ರತಿಕೃತಿಯನ್ನು ಈ ರೀತಿಯಲ್ಲಿ ಸೃಷ್ಟಿಸಿ ತಾನು

ಯಾರಿಗೂ ತಿಳಿಯದೆ ಅಂತರ್ಹಿತಳಾಗಿರುತ್ತಾಳೆಂದು ನನ್ನ ಬುದ್ಧಿಗೆ ತೋರುತ್ತದೆಂಬದಾಗಿ ಹನುಮಂತನು ಆಲೋಚಿಸಿದನು.

ಮನಸಾ ವಿಮೃಶನ್ನೇವಂ ಮರುತಃಸ್ತನುಜೋಮುಹುಃ ॥
ಆಸ್ತೇ ಪರ್ಣೈರ್ನಿಲೀನಾತ್ಮಾ ಕೃಶಾನುರಿವ ಭಸ್ಮಭಿಃ ॥ ೫೫ ॥

ಮರುತ್ಪುತ್ರನಾದ ಹನುಮಂತನು, ಈ ರೀತಿಯಾಗಿ ಮನಸ್ಸಿನಲ್ಲಿ ಪುನಃ ಪುನಃ ವಿಮರ್ಶಿಸಿ, ಬೂದಿ ಮುಚ್ಚಿದ ಕೆಂಡದಂತೆ, ಆ ಅಶೋಕ ವೃಕ್ಷದ ಎಲೆಗಳ ಮಧ್ಯದಲ್ಲಿ ಅಡಗಿಕೊಂಡಿದ್ದನು.

ಚಿತ್ತಂ ಬಭೌ ಸ್ಫುರತಿ ರಾಮ ಪದಾರವಿಂದೇ ।
ನೇತ್ರೇ ರಮಾ ಪ್ರತಿ ಕೃತೇ ಶ್ಚರಣಾರವಿಂದೇ ॥
ಕೋಪೋದಯೋ ಹನುಮತೋ ದಶ ವಕ್ತ್ರ ಸೈನ್ಯೇ ।
ಪ್ರೇಮೋದಯ ಸ್ಸಪದಿ ವಾನರ ರಾಜ ಸೈನ್ಯೇ ॥ ೫೬ ॥

ಇತಿ ಶ್ರೀಮನ್ನಾರಾಯಣ ಪಂಡಿತಾಚಾರ್ಯ ಕೃತೌ ಶ್ರೀಮತ್ಸಂಗ್ರಹ ರಾಮಾಯಣೇ ಸುಂದರ
ಕಾಂಡೇ ರಾಮಾಂಕೇ ತೃತೀಯ ಸ್ಸರ್ಗಃ ॥

— ೦ —

ಮರುತ್ಪುತ್ರನಾದ ಹನುಮಂತನ ಚಿತ್ತವು, ರಾಮ ದೇವರ ಪಾದಾರವಿಂದದಲ್ಲಿಯೂ, ಆತನ ಕಣ್ಣುಗಳು ರಮಾ ಪ್ರತಿ ಕೃತಿಯಾದ ಮಾಯಾ ಸೀತೆಯ, ಪಾದ ಪದ್ಮಗಳಲ್ಲಿಯೂ ನೆಲೆಗೊಂಡಿದ್ದುವು. ಮತ್ತು ಹನುಮಂತನ ಕೋಪವು ರಾವಣನ ಸೈನ್ಯದಲ್ಲಿತ್ತು. ಪ್ರೇಮವು ಸುಗ್ರೀವನ ಸೈನ್ಯದಲ್ಲಿತ್ತು.

ಇತಿ ಶ್ರೀಮತ್ಸಂಗ್ರಹರಾಮಾಯಣದ ಸುಂದರಕಾಂಡದ ರಾಮಾಂಕದ ಮೂರನೆಯಸರ್ಗದಲ್ಲಿ
ಮುಳಬಾಗಲು ಅವರೂರು ನಂದಗುಡಿ ಪೂರ್ಣಪ್ರಜ್ಞಾಚಾರ್ಯಸುತ
ಆನಂದತೀರ್ಥಾಚಾರ್ಯರವರಿಂದ ವಿರಚಿತನಾದ ಕರ್ಣಾಟಕಾಭಿಪ್ರಾಯದ (ಸಂಪೂರ್ಣವು.)

— ೦ —

ಚತುರ್ಥಸ್ಸರ್ಗಃ ಪ್ರಾರಂಭಃ ‖ ಹರಿಃ ‖ ಓಂ ‖

ಪರೀತಃ ಪದ್ಮ ನಯನಾಂ ಪರಿವಾರತ್ವ ಮಾಗತಾಃ ‖
ರಾಕ್ಷಸೀ ರೈಕ್ಷತ ಹರಿ ರ್ವರಟಾ ಮಿವ ಟಿಟ್ಟಿಭಿಃ ‖ ೧ ‖

ಕಪಿ ಶ್ರೇಷ್ಠನಾದ ಹನುಮಂತನು ಸುತ್ತು ಮುತ್ತಲೂ ರಾಕ್ಷಸ ಸ್ತ್ರೀಯರಿಂದ ಪರಿವಾರತ್ವವನ್ನು ಹೊಂದಿದ, ಪದ್ಮ ಲೋಚನೆಯಾದ ಸೀತಾದೇವಿಯನ್ನು ಟಿಟ್ಟಿಭಿ ಪಕ್ಷಿಗಳ ಮಧ್ಯದಲ್ಲಿ ಸಂಕಟಪಡುತ್ತಿರುವ ಸ್ತ್ರೀ ಹಂಸ ಪಕ್ಷಿಯಂತೆ ಕಂಡನು.

ನಾನಾ ವೃಗ ಪತಂಗಾನಾಂ ಸುರೂಪ ವದನಾದಿಕಾಃ ‖
ಏಕ ಹಸ್ತಾಂಘ್ರಿ ನೇತ್ರಾದ್ಯಾ ದ್ವಿ ನಾಸಾ ಜಠರಾದಿಕಾಃ ‖ ೨ ‖

ನಾನಾ ವಿಧವಾದ ವೃಗಗಳ ಮತ್ತು ಪಕ್ಷಿಗಳ ರೂಪದಂತೆ ವದನಾದಿಗಳುಳ್ಳ, ಒಂದು ಕೈ, ಒಂದು ಕಾಲು,ಒಂದುಕಣ್ಣುವುಳ್ಳ, ಎರಡುಮೂಗುಗಳುಳ್ಳ, ಎರಡುಹೊಟ್ಟೆಗಳುಳ್ಳ, ರಾಕ್ಷಸ ಸ್ತ್ರೀಯರಗಳನ್ನು ಕಂಡನು

ಪಾದಾದಿಷ್ಟಮುಖೀಕಾಶ್ಚಿದ್ವ್ಯತ್ಯಸ್ತಾವಯವಾಸ್ತಥಾ।
ದೃಷ್ಟ್ವಾನ್ಯೈಕಾಂತಿಕೀಂ ಮೇನೇ ಸ್ರಷ್ಟುಃಸೃಷ್ಟಿಂ ಸ ಪಾವನಿಃ ॥ ೩॥

ಪಾದಾದಿ ಸ್ಥಳಗಳಲ್ಲಿ ಮುಖಗಳುಳ್ಳವರು ಕೆಲವರನ್ನೂ, ವ್ಯತ್ಯಸ್ತವಾದ ಅವಯವಗಳುಳ್ಳವರು ಕೆಲವರೂ, ಇಂತಹವರನ್ನು ನೋಡಿ,ಸೃಷ್ಟಿಕರ್ತನಸೃಷ್ಟಿಯು, ಒಂದುರೀತಿ ಆದದ್ದಲ್ಲವೆಂದು ಆ ವಾಯುಪುತ್ರನಾದ ಹನುಮಂತನು ತಿಳಿದನು-

ಸಪದ್ಯ ಪರರಾತ್ರೋತ್ಥೈಃಪವನೈಃತ್ರಿಗುಣೋತ್ಕಟೈಃ ॥
ಉಪದೀಪಿ ದಶಾಸ್ಯಸ್ಯ ಮಾಯಾಸ್ತ್ರೀ ಮನ್ಮಥಾನಲಃ ॥ ೪ ॥

ಅಪರ ರಾತ್ರಿಯಲ್ಲಿ ಉತ್ಪನ್ನವಾದ ಉತ್ಕಟಗಳಾದ ಮೂರು ಗುಣಗಳು ಅಂದರೆ :— ಶೈತ್ಯ ಮಾಂದ್ಯ, ಸೌರಭ್ಯ, ಇವು ಮೂರೂ ಗಾಳಿಯ ಗುಣಗಳು. ಈ ತ್ರಿಗುಣಗಳಿಂದ ಉತ್ಕಟಗಳಾದ ಗಾಳಿಯಿಂದ

ದಶಕಂಠನ ಮಾಯಾಸೀತಾ ನಿಮಿತ್ತಕವಾದಂಥ ಮದನಾಗ್ನಿಯು ಉದ್ದೀಪಿತವಾಯಿತು.

ತೇನ ತಾತಪ್ಯಮಾನೋಽಸೌ ತಲ್ಪತಃಸಹಸೋತ್ಥಿತಃ ||
ಅಶೋಕವನಿಕಾಂ ಪ್ರಾಯಾ ನ್ಮನ್ಮಥಾಂಧಃಖಲನ್ನಿವ || ೫ ||

ಆದರಿಂದ ಸುಡಲ್ಪಟ್ಟವನಾಗಿ ಹಾಸಿಗೆಯಿಂದ ಬೇಗ ಎದ್ದು, ಮನ್ಮಥಾಂಧನಾದ ರಾವಣನು ಎಡವುತ್ತಾ, ಮುಗ್ಗುರಿಸುತ್ತಾ, ಅಶೋಕವನಕ್ಕೆ ಬಂದನು.

ಚಾರ್ವಂಗ್ಯ ಶ್ಚಾಮರ ಛತ್ರ ಪ್ರದೀಪೈಃ ಪ್ರತಿದೀಪಿತಾಃ ||
ಅನ್ವಯುಃಕಿಂಚಿದುನ್ನಿದ್ರಾಃ ಪ್ರಮದಾಸ್ತಂ ಮದಾಲಸಾಃ || ೬ ||

ಆ ರಾವಣನನ್ನು ಅನೇಕ ಮೋಹನಾಂಗಿಯರು ಚಾಮರ,ಛತ್ರ,ದೀಪ,ಇವುಗಳನ್ನು ಹಿಡಿದುಕೊಂಡವರಾಗಿಯೂ, ಮದೋನ್ಮತ್ತರಾಗಿಯೂ, ಅರ್ಧನಿದ್ರೆಯಿಂದ ಕೂಡಿ ಹಿಂಬಾಲಿಸಿಕೊಂಡು ಬಂದರು.

ತಮಾಪ ತಂ ತ ಮಾಲೋಕ್ಯ ವಿವರ್ಣವದನಾಸತೀ ||

ಸಸ್ಸೃಜೇ ವೇಪಥುಮತೀ ಶ್ವಾಸಂ ದೀರ್ಘಾನಶೀತಲಮ್ ॥ ೭ ॥

ಈ ಪ್ರಕಾರವಾಗಿ ಏಳುತ್ತಾ,ಬೀಳುತ್ತಾ, ಬರುತಿದ್ದ ರಾವಣನನ್ನು ನೋಡಿ, ಪತಿವ್ರತೆಯಾದ ಸೀತಾದೇವಿಯು ವಿವರ್ಣವಾದ ಮುಖವುಳ್ಳವಳಾಗಿ,ಗಡ ಗಡನೆ ನಡುಗುತ್ತಾ, ದೀರ್ಘವಾಗಿಯೂ, ಉಷ್ಣವಾಗಿಯೂ ಇರುವ ನಿಶ್ವಾಸಗಳನ್ನು ಬಿಟ್ಟಳು.

ಊರುಭ್ಯಾಂ ಮ್ಲಾನವಾಸೋಭ್ಯಾಂ ಛಾದಯಂತೀ ತನೂದರಂ ॥
ಸ್ತನಾವಪ್ಯತನೂ ದೋರ್ಭ್ಯಾಂ ಸಾ ಬಭೂವ ಪರಾಙ್ಮುಖೀ ॥ ೮ ॥

ಮಲಿನವಾದ ವಸ್ತ್ರಗಳುಳ್ಳ ತೊಡೆಗಳಿಂದ ಕೋಮಲವಾದ ಉದರವನ್ನು ಆಚ್ಛಾದನ ಮಾಡಿಕೊಂಡವಳಾಗಿ, ಎರಡು ಬಾಹುಗಳಿಂದಲೂ, ದೊಡ್ಡದಾದ ಸ್ತನಪ್ರದೇಶಗಳನ್ನು ಮುಚ್ಚಿಕೊಂಡು ಬೇರೆಯ ಕಡೆಗೆ ಮುಖವನ್ನು ತಿರುಗಿಸಿಕೊಂಡವಳಾದಳು.

ರಾವಣೋವಿದ್ಧಹೃದಯಃ ಪಂಚಸಾಯಕ ಸಾಯಕೈಃ ||
ಚಾಪಲಂ ವಿಪುಲಂಪ್ರಾಪ್ಯ ತಾಂಸಾಂ ತ್ವೇನೇದಮಬ್ರವೀತ್ || ೯ ||

ರಾವಣನು ಮನ್ಮಥನ ಬಾಣಗಳಿಂದ ವಿದವಾದ ಹೃದಯವುಳ್ಳವನಾಗಿ, ಬಹಳ ಚಾಪಲ್ಯದಿಂದ, ಆಕೆಯನ್ನು ಕುರಿತು ಸಾಂತ್ವ ವಚನಗಳಿಂದ ಮಾತನಾಡಿದನು.

ಮನ್ಯೇ ತ್ವಾ ಮಿಂದಿರೇ ಶೋರೋ ಮಂದಿರಾ ಮಿಂದಿರಾ ಮಹಂ ||
ಲಾವಣ್ಯವಲ್ಲೀ ಪುಷ್ಪಾಣಿ ತವಾಂಗಾನಿ ಸ್ಮರೇಷವಃ || ೧೦ ||

ಇಂದಿರೇಶನ ವಕ್ಷಸ್ಥಳವೇ ಮಂದಿರವಾಗಿ ಉಳ್ಳ ಇಂದಿರೇ ಎಂಬುವುದನ್ನು ನಾನು ತಿಳಿದಿದ್ದೇನೆ. ಮತ್ತು ಲಾವಣ್ಯವೆಂಬ ಬಳ್ಳಿಯಲ್ಲಿರುವ ಪುಷ್ಪಗಳು ಮನ್ಮಥನ ಬಾಣಗಳಂತೆ ನನಗೆ ಹಿಂಸೆ ಕೊಡುತ್ತವೆ.

ವಿಶ್ವೈಶ್ವರ್ಯ ಮಿದಂ ಪಶ್ಯ ಮಮ ಮಾನಿನಿ ಮಾನಿನಃ ||
ಅಸ್ಮಿನ್ಮೇ ಯೌವನ ವನೇ ಲಸತ್ವಂ ಲಲನಾ ಲತೇ || ೧೧ ||

ಹೇ ! ಮಾನಿನೀ! ಕೇಳು ! ನಾನಾಪ್ರಕಾರವಾದ ಈ ನನ್ನ ಸಮಸ್ತವಾದ ಐಶ್ವರ್ಯವನ್ನೂ ನೋಡು. ನನ್ನ ಯೌವನಾಖ್ಯವಾದ ವನದಲ್ಲಿ ಲಲನೆ ಎಂಬ ಲತೆಯಂತಿರುವ ನೀನು ಪ್ರಕಾಶಿಸು.

ಕಥಂ ದ್ರಕ್ಷ್ಯತಿ ರಾಮಸ್ತ್ವಾಂ ದೃಷ್ಟ್ವಾವಾ ನೇಷ್ಯತೇ ಕಥಂ ||
ತಸ್ಮಾತ್ತ್ವಂ ತಾಪಸಂ ಹಿತ್ವಾ ಭಜಮಾಂ ಭುವನೇಶ್ವರಂ || ೧೨ ||

ರಾಮನು ನಿನ್ನನ್ನು ನೋಡುವುದಾದರೂಹೇಗೆ? ಅಥವನೋಡಿದರೂ ನಿನ್ನನ್ನು ಕರೆದುಕೊಂಡು ಹೋಗುವುದಾದರೂಹೇಗೆ?ಇದು ದುಸ್ಸಾಧ್ಯವು.ಆದ್ದರಿಂದ ತಾಪಸನಾಗಿರುವವನನ್ನುಬಿಟ್ಟು ಭುವನೇಶ್ವರನಾದ ನನ್ನನ್ನು ಭಜಿಸು

ಮಾಂ ಕೃತ್ವಾ ಕೃಪಯಾ ದಾಸಂ ಲಕ್ಷ್ಮೀರ್ಮೇನಾ ಮವಾಪ್ನುಹಿ ||
ದಾಸ್ಯಾಮಿ ರಾಜ್ಯಂ ರತ್ನಾನಿ ಜನಕಾಯಾಪಿ ಜಾನಕೀ || ೧೩ ||

ನನ್ನನ್ನು ದಾಸನನ್ನಾಗಿ ಮಾಡಿಕೊಂಡು ಈ ಸಮಸ್ತವಾದ ಐಶ್ವರ್ಯವನ್ನು ಹೊಂದು. ಎಲೈ ! ಜಾನಕಿಯೇ! ನಿಮ್ಮತಂದೆಯಾದ ಜನಕರಾಜನಿಗೂ,ರಾಜ್ಯವನ್ನೂ,ಐಶ್ವರ್ಯವನ್ನೂ, ಯಥೇಚ್ಛವಾಗಿಕೊಡುತ್ತೇನೆ.

ಏವಂ ವಿಲೋಭಯಂ ತಂ ತಂ ಕುಪಿತಾ ಸಾ ಪತಿವ್ರತಾ ||
ತೃಣಮಂತರತಃಕೃತ್ವಾ ಯುಕ್ತ ಮುಕ್ತವತೀಶನೈಃ || ೧೪||

ಈ ರೀತಿಯಾಗಿ ವಂಚನೆಯ ಮಾತುಗಳಿಂದ ವಂಚಿಸುತ್ತಿರುವ ರಾವಣನನ್ನು ನೋಡಿ, ಆ ಪತಿವ್ರತಾ ಶಿರೋಮಣಿಯಾದ ಸೀತಾದೇವಿಯು ಮಹಾ ಕೋಪಿಷ್ಠಳಾಗಿ ಹುಲ್ಲು ಕಡ್ಡಿಯನ್ನು ಮಧ್ಯದಲ್ಲಿ ಇಟ್ಟುಕೊಂಡು ಮೆಲ್ಲಗೆ ಮಾತನಾಡಿದಳು.

ಶೂದ್ರೇಣಬ್ರಹ್ಮವಿದ್ಯೇವ ಖದ್ಯೋತೇನೈವ ಭಾನುಭಾಃ ||
ತ್ವಯಾ ರಾವಣದುಷ್ಪ್ರಾಪ ರಾಮಸ್ಯಾಹಂ ಪ್ರಿಯಾಸತೀ || ೧೫ ||

ಹೇ ! ರಾವಣಾ ! ಕೇಳು. ಶೂದ್ರನಿಂದ ಬ್ರಹ್ಮ ವಿದ್ಯೆಯು ಹೇಗೆ ಸಾಧ್ಯವಲ್ಲವೋ ? ಮಿಣಕು ಬೂಚಿಯು ಸೂರ್ಯನ ಕಾಂತಿಯನ್ನು ಹೊಂದುವದು ಹೇಗೆ ಸಾಧ್ಯವಲ್ಲವೋ, ಹಾಗೆಯೇ ಶ್ರೀ ರಾಮಚಂದ್ರನ ಪ್ರಿಯ ಪತ್ನಿಯಾದ ನನ್ನನ್ನು ನೀನು ಹೊಂದುವದು ಅಸಾಧ್ಯವು.

ಪುಲಸ್ತ್ಯಸ್ಯ ಕುಲೇ ಜಾತೋ ನ ಧರ್ಮಂ ವೇದಕಿಂ ಭವಾನ್ ॥
ಪರ ದಾರ ಪ್ರಸಂಗೋಯಂ ಜಗನ್ಮಂಗಳ ಭಂಗದಃ ॥ ೧೬ ॥

ಹೇ ! ರಾವಣಾ ! ಕೇಳು. ಪುಲಸ್ತ್ಯ ಕುಲದಲ್ಲಿ ಹುಟ್ಟಿದ ನೀನು ಧರ್ಮವನ್ನು ತಿಳಿದವನಲ್ಲವೇನು? ಪರ ಸ್ತ್ರೀಯನ್ನು ಹೊಂದಬೇಕೆಂಬ ಈ ಪ್ರಸಂಗವು ಜಗತ್ತಿನ ಕಲ್ಯಾಣವನ್ನೇ ನಾಶನಾಡತಕ್ಕದ್ದಲ್ಲವೇ ?

ತುಭ್ಯಂಚ ನಾಭ ಸೂಯಾಮಿ ಹಿತಂ ಸತ್ಯಂ ವದಾಮಿತೇ ॥
ರಾಮಾಯ ಮಾಂ ಪ್ರದಾಯಾಶು ಕೃಪಾಳುಂ ತಂ ಕ್ಷಮಾಪಯ ॥ ೧೭ ॥

ಎಲೈ! ರಾವಣನೇ! ನಿನಗಾಗಿ ನಾನು ಕೋಪಿಸಿಕೊಳ್ಳುವುದಿಲ್ಲವು. ನಿನಗೆ ಸತ್ಯವಾಗಿಯೂ ಹಿತವನ್ನೇ ಹೇಳುತ್ತೇನೆ. ನೀನು ನನ್ನನ್ನು ಶ್ರೀ ರಾಮಚಂದ್ರನಿಗೊಪ್ಪಿಸಿ,ದಯಾಶಾಲಿಯಾದ ಆತನಲ್ಲಿ ಕ್ಷಮಾಪಣೆ ಬೇಡು.

ಯದೀ ದಾನೀಂ ನ ಮನ್ಯೇಥಾ ಮನ್ಯೇಥಾ ಸ್ತ್ವಮಥಾ ಚಿರಾತ್ ॥
ಶರೈ ರ್ವಿದೀರ್ಣ ಹೃದಯೋ ರಾಮ ಲಕ್ಷ್ಮಣ ಲಕ್ಷಣೈಃ ॥ ೧೮ ॥

ಈಗ ನೀನು ನಾನು ಹೇಳಿದಂತೆ ಮಾತನ್ನು ಕೇಳಿದಿದ್ದ ಪಕ್ಷದಲ್ಲಿ ಜಾಗ್ರತೆಯಾಗಿ ರಾಮ ಲಕ್ಷ್ಮಣರರೆಂಬ ಹೆಸರುಳ್ಳ ಬಾಣಗಳಿಂದ ಶೀಳಲ್ಪಟ್ಟ ಹೃದಯವುಳ್ಳವನಾಗಿ ಬಹಳ ಸಂಕಟಪಡುತ್ತೀಯೆ.

ಅಥಾಪಿ ಚೇದನಂಗಸ್ತೇ ನಿದ್ರಾಭಂಗಂ (ವಿಘ್ನಂ) ಕರಿಷ್ಯತಿ ॥
ರಾಮಸ್ತ್ವಾಮಪ್ರಮೇಯಾಂಗೋ ದೀರ್ಘನಿದ್ರಾಂ ಪ್ರಣೇಷ್ಯತಿ ॥ ೧೯ ॥

ಇಷ್ಟಾದರೂ ಕೂಡ, ನಿನ್ನಲ್ಲಿರುವ ಮನ್ಮಥನು ನಿದ್ರಾಭಂಗವನ್ನು ಮಾಡುತ್ತಿರುವ ಪಕ್ಷಕ್ಕೆ ಅಪ್ರಮೇಯನಾದ ರಾಮನು ನಿನ್ನನ್ನು ದೀರ್ಘನಿದ್ರೆಯನ್ನೇ ಹೊಂದಿಸುತ್ತಾನೆ.

ರಾಕ್ಷಸಾಧಮ ತೇ ವಾಚಾ ಜಾನಕೀ ನ ವಿಲೋಭ್ಯತೇ ॥
ಕಾಕಸ್ಯ ಕಾಕುಸ್ವಾನೇನ ರಾಜಹಂಸೀವ ಮಾನಸಿ ॥ ೨೦ ॥

ಕಾಗೆಯ ಕುತ್ಸಿತಸ್ವರದಿಂದ ಮಾನಸ ಸರೋವರದಲ್ಲಿರುವ ಹಂಸಪಕ್ಷಿಯು ಹೇಗೆ ಮೋಸಹೋಗುವುದಿಲ್ಲವೋ, ಹಾಗೆ ಎಲೈ ! ರಾಕ್ಷಸಾಧಮನಾದ ರಾವಣನೇ ಕೇಳು ! ನಿನ್ನ ಮಾತಿನಿಂದ ಜಾನಕಿಯು

ವಂಚಿತಳಾಗುವುದಿಲ್ಲವು.

ಗ್ರಾಮಸಿಂಹಂ ಯಥಾಸಿಂಹೋ ಗರುಡಃಪನ್ನಗಂ ಯಥಾ ॥
ಗಜೋಯಥಾಅಜಂ ಹಂತಾ ತ್ವಾ ಮಪ್ರಯತ್ನೇನ ರಾಘವಃ ॥ ೨೧ ॥

ಸಿಂಹವು ನಾಯಿಯನ್ನೂ , ಗರುಡನು ಹಾವನ್ನೂ , ಆನೆಯು ಮೇಕೆಯನ್ನೂ, ಹೇಗೆ ಜಯಿಸುವುವೋ, ಹಾಗೆಯೇ ಅಪ್ರಯತ್ನದಿಂದ ನಿನ್ನನ್ನು ಕೊಲ್ಲುತ್ತಾನೆ.

ನನಾಶಯಾಮಿ ಶಕ್ತಾಪಿ ತ್ವಾಂ ನೃಶಂಸಂ ದಶಾನನ ॥
ವಿನಾ ರಾಮಾಜ್ಞಯಾ ಕಿಂತು ತ್ವಾಂ ಹತ್ವಾ ಸಭಜೇದ್ಯಶಃ ॥ ೨೨ ॥

ನಾನು ಘಾತುಕನಾದ ನಿನ್ನನ್ನು ರಾಮಾಜ್ಞೆ ಇಲ್ಲದೇಯೆ ಕೊಲ್ಲಲು ಶಕ್ತಳಾದಾಗ್ಯೂ, ನಾನು ನಿನ್ನನ್ನು ಕೊಲ್ಲುವುದಿಲ್ಲವು ಏಕೆಂದರೆ:- ನಿನ್ನನ್ನು ಸಂಹಾರಮಾಡಿ ನಮ್ಮ ರಾಮಚಂದ್ರನೇ ಕೀರ್ತಿಯನ್ನು ಸಂಪಾದಿಸಲಿ.

ಇಮಾಂಚ ವಾಚ ಮತ್ಯುಷ್ಣಾ ಮಶ್ರುಧಾರಾಂ ಚ ಸಂತತಾಂ ॥
ವಿಸೃಜ್ಯ ಸಾ ಸರೋಜಾಕ್ಷೀಪರಿರೇಭೇ (ಪ್ರಭುಂ) ಪತಿಂಹೃದಾ ॥ ೨೩ ॥

ಈ ತೀಕ್ಷ್ಣವಾದ ಮಾತುಗಳನ್ನು ಆಡುತ್ತಲೂ. ಕಣ್ಣೀರನ್ನು ಧಾರಾಕಾರವಾಗಿ ಸುರಿಸುತ್ತಲೂ, ಇರುವ ಜಾನಕಿಯು ರಾವಣನನ್ನು ತಿರಸ್ಕರಿಸಿ ತನ್ನ ಸ್ವಾಮಿಯಾದ ರಾಮನನ್ನು ಮನಸಾ ಸ್ಮರಿಸುತ್ತಿದ್ದಳು.

ಇತ್ಯುಕ್ತಃಕ್ರೋಧರ್ವಾಕ್ರೂರಃ ಕ್ರೂರಮಾಚಷ್ಟ ರಾಕ್ಷಸಃ ॥
ಏವಂಚೇತ್ಪ್ರಾತರಾಶಂ ತ್ವಾಂ ಕುರ್ಯಾಂ ಸೂದಜನ್ಯೈರಿತಿ ॥ ೨೪ ॥

ಈ ಪ್ರಕಾರವಾಗಿ ಹೇಳಿಸಿಕೊಳ್ಳಲ್ಪಟ್ಟ ಕ್ರೋಧವುಳ್ಳ ರಾಕ್ಷಸನು ಮಹಾ ಕ್ರೂರನಾಗಿ ನೀನು ಹೀಗೆ ಹೇಳುವ ಪಕ್ಷಕ್ಕೆ ನಿನ್ನನ್ನು ಅಡಿಗೆಯವರಿಂದ ಪಕ್ವಮಾಡಿಸಿ ಬೆಳಗಿನ ಫಲಹಾರವನ್ನು ಮಾಡುತ್ತೇನೆಂದೇಳಿದನು.

ಸಾಂತ್ವಯಂತೀವ ತನ್ವೀ ತಾಮುಪಾಂಗೇನ ವರಾಂಗನಾ ॥
ಮಯಜಾಮ್ಯೈವ ಮಿತ್ಯೇನ ಮಾಶ್ಲಿಷತ್ಕುಪಿತಂ ಪತಿಂ ॥ ೨೫ ॥

ಮಯಪುತ್ರಿಯಾದ ಮಂಡೋದರಿಯು ಆತನನ್ನು ಸಮಾಧಾನಮಾಡುತ್ತಾಳೋ ಎನ್ನುವ ಹಾಗೆ ಅಪಾಂಗವೀಕ್ಷಣೆಯಿಂದಲೇ, ರಾವಣನನ್ನು ನಿಷೇಧಿಸಿ ಕೋಪಿತನಾದ ರಾವಣನನ್ನು ಆಲಂಗಿಸಿಕೊಂಡಳು.

ವಶೀಕರ್ತುಂ ಸಮಾದಿಶ್ಯ ರಾಕ್ಷಸೀರ್ವಿಕೃತಾ ಕೃತೀಃ ॥
ಸಾಮಾದಿಭಿರುಪಾಯೈಸ್ತಾಂ ವಿವೇಶಾಂತಃಪುರಂಖಲಃ ॥ ೨೬ ॥

ಇಷ್ಟು ಹೇಳಿದರೂ ಕೂಡ ಕೇಳದೆ, ನೀಚನಾದ ರಾವಣನು ಸೀತೆಯು ಸ್ವಾಧೀನಳಾಗುವ ಹಾಗೆ ಮಾಡಲು ವಿಕಾರವಾದ ರೂಪವುಳ್ಳ ರಾಕ್ಷಸೀಯರನ್ನು ಸಾಮಾದಿ ಉಪಾಯಗಳಿಂದ ಸೀತೆಯನ್ನು ಒಪ್ಪಿಸುವುದಕ್ಕಾಗಿ ನಿಯಮಿಸಿ ಅಂತಃಪುರವನ್ನು ಕುರಿತು ಪ್ರವೇಶಮಾಡಿದನು.

ನಿಶಾಚರ್ಯೋಪತಾ ಮೇಕಾಂ ಜಟಾಭೂರಿ ಜಟಾದಿಕಾಃ ॥
ಪೃಥಕ್ ಪೃಥಕ್ ಸಾಮಪೂರ್ವಂ ದಂಡಗರ್ಭಂವಚೋವರ್ದ ॥ ೨೭ ॥

ಅನಂತರದಲ್ಲಿ ಆ ನಿಶಾಚರಿಯರು ಒಂದೇ ಜಟಾಧಾರಿಗಳೂ, ಬಹಳ ಜಟಾವುಳ್ಳವರೂ, ಪ್ರತ್ಯೇಕ

ಪ್ರತ್ಯೇಕವಾಗಿ ಸಾಮಪೂರ್ವಕವಾಗಿ ದಂಡಗರ್ಭಿತವಾದ ಮಾತುಗಳಿಂದ ಸೀತಾದೇವಿಯನ್ನುಕುರಿತ ಹೇಳಿದರು

ಪುಲಸ್ತ್ಯಸ್ಯಕುಲೇಜಾತೋ ವೇದವೇದಾಂಗಪಾರಗಃ ॥
ಪ್ರಜಾಪತಿಸಮಃಸೀತೇ ವಿಶ್ವೈಶ್ವರ್ಯೇಣ ರಾವಣಃ ॥ ೨೮ ॥

ಎಲೌ ! ಸೀತೆಯೇ ! ಕೇಳು ! ರಾವಣನು ಸಾಮಾನ್ಯನಲ್ಲವು ? ಪುಲಸ್ತ್ಯಋಷಿಗಳ ವಂಶದಲ್ಲಿ ಹುಟ್ಟಿದವನು.ವೇದ,ವೇದಾಂಗಪಾರಂಗತನು ಜಗತ್ತಿನಲ್ಲಿರುವ ಎಲ್ಲಾ ಐಶ್ವರ್ಯದಿಂದಕೂಡಿ ಬ್ರಹ್ಮದೇವನಿಗೆಸಮಾನನು.

ಸಂತ್ಯಜ್ಯನಿರ್ಗುಣಂ ರಾಮಂ ಭಜಭದ್ರೇದಶಾನನಂ ॥
ಸ್ವಯಂ ಕಾಮಯಮಾನಂತಂ ನತ್ವಂ ಕಾಮಯಸೇಕಥಂ ॥ ೨೯ ॥

ನಿರ್ಗುಣನಾದ ರಾಮನನ್ನು ಪರಿತ್ಯಾಗ ಮಾಡಿ ದಶಾನನನನ್ನು ವರಿಸು. ಹೇ ! ಭದ್ರೇ ! ತಾನಾಗಿ ತಾನೇ ಬಂದು ಬೇಡುತ್ತಿರುವ ಈ ರಾವಣನನ್ನು ವರಿಸದೇ ಇರುವುದು ಸರಿಯೇ? ಎಂಬದಾಗಿ ಸೀತಾದೇವಿಯನ್ನು ಕುರಿತು ರಾಕ್ಷಸ ಸ್ತ್ರೀಯರು ಹೇಳಿದರು.

ಇತಿಶ್ರುತ್ವಾಬ್ರವೀದ್ಬಾಲಾ ನಿರ್ಗುಣಃ ಸಗುಣೋಪಿವಾ ॥
ರಾಮಏವಗತಿಃಸ್ಯಾನ್ಮೇ ಕಾಮಂ ಖಾದತಮಾಮಿತೀ ॥ ೩೦ ॥

ಈ ಪ್ರಕಾರವಾದ ಮಾತನ್ನು ಕೇಳಿ ಸೀತಾದೇವಿಯು ! ರಾಮನು ನಿರ್ಗುಣನಾಗಲಿ, ಸಗುಣನಾಗಲಿ, ಅವನೇ, ನನಗೆ ಇಹಪರಗಳಲ್ಲಿ ಗತಿಯು. ನೀವು ಬೇಕಾದರೆ ನನ್ನನ್ನು ತಿಂದುಬಿಡಿ ನಾನು ಬೇರ ವಶಳಾಗತಕ್ಕವಳಲ್ಲವು? ಎಂಬದಾಗಿ ಸೀತಾದೇವಿಯು ಅವರಿಗೆ ಹೇಳಿದಳು.

ವಿನತಾ ವಿಕಟಾ ಚಾಸ್ವ ಮುಖೀ ಚಂಡೋದರೀ ತಥಾ॥
ವಿಘಸಾಯೋ ಮುಖೀಶೂರ್ಪ ಣಖ್ಯಾದ್ಯಾ ರಾಕ್ಷಸಸ್ತ್ರಿಯಃ ॥ ೩೧ ॥

ವಿನತಾ, ವಿಕಟಾ, ಮತ್ತು ಅಶ್ವಮುಖಿ, ಚಂಡೋದರಿ, ಮತ್ತು ವಿಘಸಾ, ಅಯೋಮುಖಿ, ಶೂರ್ಪನಖಿ, ಯೇಪಿ, ಮೊದಲಾಗಿವುಳ್ಳ ರಾಕ್ಷಸಸ್ತ್ರೀಯರು.

ವಿವೃತ್ಯನೇತ್ರೇವಕ್ತ್ರಾಣಿ ಸಮುದ್ಯಮ್ಯಾಯುಧಾನಿಚ ॥

ತಾಂ ಶಿಂಶುಪಾ ಮುಪಾಯಂತೀಂ ಪರಿವೃತ್ಯಾಭ್ಯ ಭರ್ತ್ಸರ್ಯ ॥ ೩೨ ॥

ಕಣ್ಣನ್ನೂ, ಬಾಯಿಯನ್ನೂ, ವಿಶಾಲವಾಗಿ ತೆಗೆದು, ಆಯುಧಗಳನ್ನು ಮೇಲಕ್ಕೆತ್ತಿ ಶಿಂಶುಪಾವೃಕ್ಷದ ಸಮೀಪದಲ್ಲಿರುವ ಸೀತಾದೇವಿಯನ್ನು ಸುತ್ತುವರಿದು ಹೆದರಿಸಿದರು.

ನಚೇದ್ರಾವಣಭಾರ್ಯಾಸ್ಯಾ ವಿದಾರ್ಯಾಂಗಾನಿ ತೇ ಧುನಾ ॥

ಖಾದಂ ಖಾದಂ ಪ್ರನೃತ್ಯಾಮಃ ಪಾಯಂ ಪಾಯಂ ಸುರಾಮಿತಿ ॥ ೩೩ ॥

ಎಲೈ ! ಸೀತಾದೇವಿಯೇ ! ನೀನು ರಾವಣನ ಪತ್ನಿಯಾಗದೇ, ಹೋಗುವ ಪಕ್ಷಕ್ಕೆ ನಿನ್ನ ಅವಯವಗಳನ್ನು ಚೂರು ಚೂರಾಗಿ ಸೀಳಿ, ಸ್ವಲ್ಪಸ್ವಲ್ಪವಾಗಿ ತಿನ್ನುತ್ತಾ, ಈಗಲೇ ಮದ್ಯ ಪಾನ ಮಾಡುತ್ತಾ, ಕುಣಿಯುತ್ತೇವೆಂಬದಾಗಿ ರಾಕ್ಷಸಸ್ತ್ರೀಯರುಗಳು ಹೆದರಿಸಿದರು.

ಇತ್ಯಾದಿ ರಾಕ್ಷಸೀಭಿಸ್ಸಾ ಮಾಯಾಸೀತಾಪ್ರಭರ್ತ್ಸಿತಾ ॥

ರುರೋದ ಸುಸ್ವರಂ ನಾಥ ಹಾ ! ರಾಮ ! ಕ್ವಭವಾನಿತಿ ॥ ೩೪ ॥

ಈ ಪ್ರಕಾರವಾಗಿ ರಾಕ್ಷಸ ಸ್ತ್ರೀಯರುಗಳಿಂದ ಮಾಯಾಸೀತೆಯು ಝುಬರಿಸಲ್ಪಟ್ಟವಳಾಗಿ ಎಲ್ಲೈ ! ರಾಮನೇ ! ಎಲ್ಲೈ ಸ್ವಾಮಿಯೇ ! ನೀನು ಎಲ್ಲಿದ್ದಿ ? ಎಂಬದಾಗಿ ಘಟ್ಟಿಯಾಗಿ ರೋದನ ಮಾಡಿದಳು.

ವಿಲಾಪಂ ವಿದಧೇಚಿತ್ರಂ ಸೀತಾಪ್ರತಿಕೃತಿಸ್ತದಾ ॥
ಯತ್ರಸಾವಾಗ್ರ ಮಗಮತ್ರಿಲೋಕ್ಯಾಂ ಕರುಣಾರಸಃ ॥ ೩೫ ॥

ಸೀತಾಪ್ರತಿಕೃತಿಯು ಈ ಪ್ರಕಾರವಾಗಿ ದುಃಖಿಸುತ್ತಿರಲು ಮೂರುಲೋಕಗಳಲ್ಲಿಯೂ, ಇನತಕ್ಕ ಜನಗಳು ಬಹಳ ಕರುಣಾರಸದಿಂದ ಕೂಡಿದ್ದರು.

ಶೃತ್ವಾವಿಲಾಪಂ ತಸ್ಯಾಸ್ತ್ರಂ ರಾವಣಾಯ ನಿವೇದ್ಯಚ ॥
ರಾಕ್ಷಸ್ಯೋಭಕ್ಷಯಿಷ್ಯಾಮ ಸ್ತ್ವಾಮಿತ್ಯಭ್ಯ ಸತನ್ನಿಮಾಂ ॥ ೩೬ ॥

ಆ ಸೀತಾದೇವಿಯ ವಿಲಾಪವನ್ನು ಕೇಳಿ ಆ ರಾಕ್ಷಸ ಸ್ತ್ರೀಯರುಗಳು ಈ ದುಃಖವನ್ನು ರಾವಣನಿಗೆ ಹೇಳಿ ಸೀತಾದೇವಿಯನ್ನು ಕುರಿತು ಎಲ್ಲೈ ! ಸೀತೆಯೇ ! ನಿನ್ನನ್ನು ಈಗಲೇ ತಿಂದು ಬಿಡುತ್ತೇವೆ. ಎಂದು

ಹೇಳಿ ಮೇಲೆ ಬೀಳಲು ಉದ್ಯುಕ್ತರಾದರು.

ತತ್ರೈವ ತ್ರಿಜಟಾನಾಮ ಶುದ್ಧಭಾವಾನಿಶಾಚರೀ ॥
ಶಯಾನಾ ಶಯನೇವೃದ್ಧಾ ಗಾಮುದಾರಾ ಮುದಾಹರತ್ ॥ ೩೭ ॥

ಅಲ್ಲಿಯೇ ಇದ್ದ ತ್ರಿಜಟಾ ಎಂಬ ಒಬ್ಬ ರಾಕ್ಷಸ ಸ್ತ್ರೀಯು ಶುದ್ಧವಾದ ಮನಸ್ಸುಳ್ಳವಳಾಗಿ ಹಾಸಿಗೆಯಲ್ಲಿ ಮಲಗಿ,ಎದ್ದು,ವೃದ್ಧಳಾದತಾನು ಉದಾರವಾದ ಒಂದುಮಾತನ್ನು ಈ ರಾಕ್ಷಸಸ್ತ್ರೀಯರಿಗೆ ಹೇಳಿದಳು.

ಆತ್ಮಾನಂ ಖಾದತಾನಾರ್ಯಾ ನ ಸ್ತ್ರೀತಾಂ ಸಾಧುಸಂಮತಾಂ ॥
ನೇಯಂಶೋಚ್ಯಾಮಮಸ್ವಪ್ನ ದರ್ಶನಂ ತನ್ನಿದರ್ಶನಂ ॥ ೩೮ ॥

ಹೇ ! ಅನಾರ್ಯರಾದ ರಾಕ್ಷಸ ಸ್ತ್ರೀಯರೇ ! ನಿಮ್ಮನ್ನು ನೀವೇ ತಿನ್ನಿ ! ಸಾಧು ಸಮ್ಮತಳಾದ ಆ ಸ್ತ್ರೀಯ ತಂಟೆಗೆ ಹೋಗಬೇಡಿ ? ಇದಕ್ಕೆ ಸರಿಯಾಗಿ ನನಗೆ ಆದ ಸ್ವಪ್ನವೇನೇ ನಿದರ್ಶನವಾಗಿದೆ.

ಇತ್ಥಂವದಂತೀಂ ತ್ರಿಜಟಾಂ ರಾಕ್ಷಸ್ಯಃಪರ್ಯವಾರಯರ್ಯ ॥
ಸೀತಾಂ ಸಂತ್ಯಜ್ಯತಾಂ ತನ್ವೀಂ ಸ್ವಪ್ನಂಬ್ರೂಹೀತಿಚಾಬ್ರುವರ್ ॥ ೩೯ ॥

ಈ ಪ್ರಕಾರವಾಗಿ ಹೇಳುತ್ತಿರುವ ತ್ರಿಜಟೆಯನ್ನುನೋಡಿ ರಾಕ್ಷಸಸ್ತ್ರೀಯರುಗಳು ತ್ರಿಜಟೆಯನ್ನು ಸುತ್ತುವರಿದು ಸೀತಾದೇವಿಯನ್ನು ಬಿಟ್ಟು ಬಿಟ್ಟು ಸ್ವಪ್ನದ ವೃತ್ತಾಂತವನ್ನು ಹೇಳಬೇಕೆಂದು ಕೇಳಿದರು.

ರಾಮಾಯಾಂ ಜಲಿಮಾಬಧ್ಯ ತ್ರಿಜಟಾ ವಾಕ್ಯ ಮಬ್ರವೀತ್ ॥
ಆದರ್ಶಿ ರಾಘವ ಕ್ಷೋಣೀಂ ಸಂಗ್ರಸ್ಯ ರುಧಿರಂ ಪಿಬರ್ ॥ ೪೦ ॥

ರಾಮಚಂದ್ರ ದೇವರಿಗೆ ಅಂಜಲಿಬಂಧವನ್ನು ಮಾಡಿ, ತ್ರಿಜಟೆಯು ಸ್ವಪ್ನ ವೃತ್ತಾಂತವನ್ನು ಹೇಳಿದ್ದೇನೆಂದರೆ : – ರಾಘವನು ಭೂಮಂಡಲವನ್ನೆಲ್ಲಾ ಗ್ರಾಸಮಾಡಿ ರಕ್ತಕುಡಿಯುತ್ತಿದ್ದುದನ್ನು ನಾನು ಕಂಡೆನು.

ಅಧ್ಯಾಸ್ತೇ ಶಿಬಿಕಾಂ ದಾಂತೀಂ ಹಂತ ಹಂಸ ಸಹಸ್ರಣೀಂ ॥
ಸಾನುಜಃ ಸೀತಯಾ ದೇವ್ಯಾ ಮೋದತೇ ಪುಷ್ಪಕೇ ಪುನಃ ॥ ೪೧ ॥

ಆ ಶ್ರೀ ರಾಮನು ತಮ್ಮನಾದ ಲಕ್ಷ್ಮಣನಿಂದಲೂ, ಹೆಂಡತಿಯಾದ ಸೀತೆಯಿಂದಲೂ, ಒಡಗೂಡಿ, ಆಶ್ಚರ್ಯಕರವಾಗಿಯೂ, ಸಾವಿರಾರು ಹೆಣ್ಣು ಹಂಸಗಳಿಂದ ಶೋಭಿಸುತ್ತಲೂ, ದಂತದಿಂದ ನಿರ್ಮಿತವಾಗಿರುವ, ಪುಷ್ಪಕ ವಿಮಾನದಲ್ಲಿನ ಶಿಬಿಕೆಯನ್ನು (ಪೀಠವನ್ನು)ಹತ್ತಿದುದನ್ನು ಕಂಡೆನು.

ಶ್ವೇತ ಮಾಲಾಂ ಬರಧರಾ ಶ್ವೇತಾದ್ರೌ ಭಾತಿ ಜಾನಕೀ ॥
ಸಾಗರೇಣ ಪರಿಕ್ಷಿಪ್ತಾ ಚಂದ್ರಲೇಖೇವ ಸುಂದರೀ ॥ ೪೨ ॥

ಬಿಳೀ ಹುವ್ವಿನ ಹಾರವನ್ನು ಧರಿಸಿರುವ ಜಾನಕಿಯು, ಕೈಲಾಸ ಪರ್ವತದಲ್ಲಿ ಪ್ರಕಾಶಿಸುವಂತಿದ್ದು, ಸಮುದ್ರದಿಂದ ಉತ್ಪನ್ನವಾದ, ಚಂದ್ರಲೇಖೆಯೋ ಎಂಬಂತಿದ್ದಳು.

ಚತು ರ್ದಂತಿನಿ ದಂತೀದ್ರೇ ಚಂದ್ರ ವರ್ಣೇ ಮಯಾ ಪುನಃ ॥
ರಾಮ ಸ್ಸ ಲಕ್ಷ್ಮಣೋ ದೃಷ್ಟಃ ಶುಕ್ಲ ಮಾಲ್ಯಾಂ ಬರೋವರಃ ॥ ೪೩ ॥

ಮತ್ತು ನಾಲ್ಕು ದಂತಗಳುಳ್ಳ, ಬಿಳಿಯ ವರ್ಣದಿಂದ ಕೂಡಿದ, ಐರಾವತದ ಮೇಲೆ, ಲಕ್ಷ್ಮಣನಿಂದ

ಸಹಿತನಾದ ರಾಮನು, ಬಿಳಿಯ ಹುವ್ವಿನ ಮಾಲೆಯನ್ನು ಧರಿಸಿ, ಪ್ರಕಾಶಿಸುತ್ತಿರುವುದನ್ನು ನೋಡಿದೆನು.

ಪ್ರಕಾಶಮಾನ ಮಾಕಾಶೇ ಗಜೇಂದ್ರೇ ಗಜ ವಿಕ್ರಮಂ ॥
ರಾಮಂ ದೃಷ್ಟ್ವಾ ಸ್ವಗಾ ಚ್ಛೀತಾ ಹಂಸೀ ಹಂಸ ಮಿವಪ್ಲುತಾ ॥ ೪೪ ॥

ಪ್ರಕಾಶಮಾನವಾದ ಆಕಾಶದಲ್ಲಿ, ಐರಾವತದ ಮೇಲೆ ಕೂತಿರುವ, ಆನೆಯಂತೆ ಬಲವುಳ್ಳ, ರಾಮನನ್ನು ನೋಡಿ, ಸೀತೆಯು ಹಾರುತ್ತಿರುವ ಹಂಸಪಕ್ಷಿಯನ್ನು, ಹೆಣ್ಣುಹಂಸವು ಹೇಗೆಸೇರುವುದೋ, ಹಾಗೆಯೇ ರಾಮನನ್ನು ಅನುಸರಿಸಿ ಹೋಗಿ ಸೇರಿದಳು.

ಕಾಂ ತಸ್ಯಾಂಕಂ ತತ ಪ್ರಾಪ್ತಾ ಸೀತೇಯಂ ಪ್ರೇಕ್ಷಿತಾ ಮಯಾ ॥
ಸ್ಪೃಶಂತೀ ಪಾಣಿ ಪದ್ಮಾಭ್ಯಾಂ ದಿವಾಕರ ನಿಶಾಕರೌ ॥ ೪೫ ॥

ಈ ಸೀತೆಯು ತನ್ನ ಪತಿಯ ತೊಡೆಯನ್ನು ಸೇರಿ ಕೂತಿದ್ದುದನ್ನು ನಾನು ಕಂಡೆನು. ಪದ್ಮದೋಪಾದಿಯಲ್ಲಿರತಕ್ಕ ಕೈಗಳಿಂದ ಸೂರ್ಯ - ಚಂದ್ರರನ್ನು ಸ್ಪರ್ಶಮಾಡುವಂತೆ ಅಷ್ಟು ಮೇಲಿರುವುದನ್ನು ಕಂಡೆನು

ಉಪರ್ಯ್ಯುಪರಿನೋಲಂಕಾಂ ರಾಮಸ್ತಾಭ್ಯಾಂ ಸಹಸ್ಥಿತಃ ॥
ಯಾನೇಶ್ವೇತನೃಷ್ಯೈರ್ಯುಕ್ತೇ ಶ್ವೇತಾಕಲ್ಪೋ ವ್ಯದರ್ಶಿಸಃ ॥ ೪೬ ॥

ಬಿಳೀ ಎತ್ತುಗಳಿಂದ ಕಟ್ಟಲ್ಪಟ್ಟ ರಥದಲ್ಲಿ ಸೀತಾಲಕ್ಷ್ಮಣರೊಡಗೂಡಿ ರಾಮನು ಮೇಲಮೇಲಕ್ಕೆ ಹೋಗುತ್ತಿರುವುದನ್ನು ಕಂಡೆನು.

ರಾವಣಃಪತಿತೋನೃಷ್ಟಃಪುಷ್ಪಕಾ ದಧುನಾ ಮಯಾ॥
ಕೃಷ್ಯಮಾಣಃ ಸ್ತ್ರಿಯಾನೀಚ್ಯೈಃ ಮುಂಡಃ ಕೃಷ್ಣಾಂ ಬರೋ ಹರ್ಸ ॥ ೪೭ ॥

ರಾವಣನು ಪುಷ್ಪಕ ವಿಮಾನದಿಂದ ಜಾರಿಬಿದ್ದಿದ್ದನ್ನೂ, ನೀಚರಾದ ಸ್ತ್ರೀಯರಿಂದ ಎಳೆಯಲ್ಪಟ್ಟು ಬೋಡತಲೆಯಿಂದ ಕೂಡಿ, ಕರೀ ಬಟ್ಟೆಯನ್ನು ಉಟ್ಟುಕೊಂಡು ನಗುತ್ತಿದ್ದುದನ್ನು ಕಂಡೆನು.

ರಥೇ ನಖರ ಯುಕ್ತೇನ ರಕ್ತ ಮಾಲ್ಯಾ ನುಲೇಪನಃ ॥
ಯಾತಿ ಯಾಮ್ಯಾಂದಿಶಂ ತತ್ರ ಪ್ರವಿಷ್ಟಃ ಕರ್ದಮಂ ಹ್ರದಂ ॥ ೪೮ ॥

ರಾವಣನು ಕತ್ತೆಯನ್ನು ಕಟ್ಟಿದ ರಥದಲ್ಲಿ ಕೂತುಕೊಂಡು ಕೆಂಪುಹೂವಿನಹಾರ, ಕೆಂಪುಗಂಧ ಇವುಗಳನ್ನು ಧರಿಸಿ ದಕ್ಷಿಣದಿಕ್ಕನ್ನು ಕುರಿತು ಪ್ರಯಾಣಮಾಡಿ, ಕೆಸರಿನನಿಂದ ಮಡುವನ್ನು ಹೊಕ್ಕಿದ್ದನ್ನು ಕಂಡೆನು.

ರಾವಣೋಽಯಂ ವರಾಹೇಣ ಶಿಂಶುಮಾರೇಣ ಶಕ್ರಜಿತ್ ॥
ಉಷ್ಟ್ರೇಣ ಕುಂಭಕರ್ಣಶ್ಚ ಯಾತಾ ಯಾಮ್ಯಾ ಮಹೋದಿಶಂ ॥ ೪೯ ॥

ಈ ರಾವಣನು ಹಂದಿಯ ಮೇಲೆಯೂ, ಇಂದ್ರಜಿತ್ತುವು ಚೇಳಿನ ಮೇಲೆಯೂ, ಕುಂಭಕರ್ಣನು ಒಂಟೆಯ ಮೇಲೆಯೂ, ಕೂತುಕೊಂಡು ದಕ್ಷಿಣದಿಕ್ಕನ್ನು ಕುರಿತು ಹೊರಟು ಹೋದದ್ದನ್ನು ನಾನು ಕಂಡೆನು.

ಖರಯುಕ್ತ ರಥೇನಾಪಿ ಯಾಮ್ಯಾಂ ಯಾತಿ ದಶಾನನಃ ॥
ರಾಕ್ಷಸ್ಯೋ ರಾಕ್ಷಸಾಶ್ಚಾಪಿ ರಕ್ತವಸ್ತ್ರಾಹಸಂತ್ಯಹೊ ॥ ೫೦ ॥

ಆಹಾ ! ಆಹಾ ! ಇದು ಬಹಳ ಶೋಚನೀಯವು ? ಅಲ್ಲದೆ ಕತ್ತೆಯನ್ನು ಕಟ್ಟಿದರಥದಿಂದ ದಶಕಂಠನು ದಕ್ಷಿಣದಿಕ್ಕಿಗೆ ಹೋಗುವಾಗ ಈ ರಾಕ್ಷಸರೂ, ಮತ್ತು ರಾಕ್ಷಸ ಸ್ತ್ರೀಯರೂ,

ಸಹ ಕೆಂಪುಬಟ್ಟೆಗಳನ್ನು ಉಟ್ಟುಕೊಂಡು ನಕ್ಕದ್ದನ್ನು ನಾನು ಕಂಡೆನು.

ತೈಲಂ ಪೀತ್ವಾ ಪ್ರನೃತ್ಯಂತಿ ಗಾಯಂತ್ಯೋ ರಾಕ್ಷಸಾಂಗನಾಃ ॥
ಗೋಮಯಹ್ರದಗಾಃಸರ್ವೇ ಲಂಕೇಯಂ ಭಸ್ಮಸಾದಭೂತ್ ॥ ೫೧ ॥

ರಾಕ್ಷಸ ಸ್ತ್ರೀಯರುಗಳು ಎಣ್ಣೆಯನ್ನುಕುಡಿದು ಗಾನಮಾಡುತ್ತಾ, ಕುಣಿಯುತ್ತಾ, ಇದ್ದುದನ್ನು ನಾನು ಕಂಡೆನು. ಮತ್ತು ಈ ಲಂಕಾಪಟ್ಟಣವು ಗೋಮಯಹ್ರದದಲ್ಲಿ(ಗೋಮಯದ ಮಡುವಿನಲ್ಲಿ)ಮುಳುಗಿದ್ದನ್ನೂ, ಅನಂತರ ಲಂಕಾಪಟ್ಟಣವು ಸುಟ್ಟು ಬೂದಿಯಾದದ್ದನ್ನೂ ಸಹ ನಾನು ಕಂಡೆನು.

ಶ್ವೇತಾತಪತ್ರಃ ಶ್ವೇತಾದ್ರಾ ವೇಕಸ್ತ್ರಾ್ವಸ್ತೇ ವಿಭೀಷಣಃ ॥
ಚತುರ್ಭಿಃ ಸಚಿವೈಃ ಸಾರ್ಧಂ ಏವಂ ಸ್ವಪ್ನೋ ಮಮತ್ವಭೂತ್ ॥ ೫೨ ॥

ವಿಭೀಷಣನು ಶ್ವೇತಚ್ಛತ್ರಿಯನ್ನು ಹಿಡಿಸಿಕೊಂಡು ಪುಷ್ಪಕವಿಮಾನದಲ್ಲಿ ನಾಲ್ಕುಜನ ಮಂತ್ರಿಗಳಿಂದ ಕೂಡಿಕೊಂಡು ಇದ್ದಹಾಗೂ ನಾನು ಕಂಡೆನು. ಈ ಪ್ರಕಾರವಾದ ಸ್ವಪ್ನವು ನನಗಾಯಿತು.

ಸಂಪತ್ತಿರಸ್ತಿ ಸೀತಾಯಾ ವಿಪತ್ತಿರ್ನಿಶಿಚಾರಿಣಾಂ ॥
ವ್ಯಕ್ತಮೇವಂ ವಿಧೇಸ್ವಪ್ನೇ ಮಾ ಭರ್ತ್ಸಯತ ಮೈಥಿಲೀಂ ॥ ೫೩ ॥

ಸೀತಾದೇವಿಗೆ ಸಂಪತ್ತು ಬರತಕ್ಕದ್ದಿದೆ. ಅದೇ ರಾಕ್ಷಸೀಯರುಗಳಿಗೆ ವಿಪತ್ತು ಬರುವುದು ನಿಶ್ಚಯವು. ಈ ವಿಧವಾದ ಸ್ವಪ್ನವು ನನಗೆ ಆಗಿದೆ. ಆದ್ದರಿಂದ ಮಿಥಿಲಾಪಟ್ಟಣದ ಧೊರೆಯಾದ ಜನಕರಾಯನ ಮಗಳಾದ ಜಾನಕಿಯನ್ನು ಹೆದರಿಸಬೇಡರಿ?

ನಾಶೋಭನಾರ್ಹಾ ಭದ್ರೇಯಂ ಸೀತಾಸರ್ವಾಂಗಶೋಭನಾ ॥
ಪ್ರತ್ಯಾಗತಂ ಸೂಚಯತಿ ಕಾಕೋಯಂ ಜಾನಕೀ ಹಿತಂ ॥ ೫೪ ॥

ಅಮಂಗಳವಾದ ಮಾತನ್ನು ಸರ್ವಾಂಗ ಸುಂದರಿಯಾದ ಸೀತಾದೇವಿಗೆ ಆಡಬೇಡರಿ? ಹೀಗೆ ಕಾಗೆಯೂ ಕೂಡ ಮುಂದೆ ಬರುವ ವರ್ತಮಾನವನ್ನು ಸೂಚಿಸುತ್ತದೆ.

ವದಂತ್ಯಾಮಿತಿ ರಾಕ್ಷಸ್ಯಾಂ ವ್ಯಲಪಚ್ಛಲವೈಥಿಲೀ ॥

ಹಾ ! ರಾಮ ! ರಾಮ ! ನಾಥೇತೀ ಪಾಲಯೇತಿ ಪುನಃ ಪುನಃ ‖ ೫೫ ‖

ಈ ರೀತಿಯಾಗಿ ತ್ರಿಜಟೆಯು ಹೇಳುತ್ತಿರಲು ಸೀತೆಯು ಹಾ ! ರಾಮ ! ಹಾ ! ನಾಥಾ ! ನನ್ನನ್ನು ಸಂರಕ್ಷಿಸು? ಎಂಬದಾಗಿ ಪುನಃ ಪುನಃ ಘಟ್ಟಿಯಾಗಿ ರೋದನ ಮಾಡುತ್ತಿದ್ದಳು.

ವಾಮೈಃ ಪ್ರಿಯಂ ವದೈಸ್ತಸ್ಯಾಃ ಹಸ್ತೋರೂ ನಯನೈರಥ ‖
ಶಿರೀಷಮಾಲಾಕದಳೀ ನಳಿನಾಭೈರಕಂಪ್ಯತ ‖ ೫೬ ‖

ಪ್ರಿಯವಾರ್ತೆಯನ್ನು ಹೇಳುತ್ತಿರುವ ಆಕೆಯ ಎಡಭಾಗದ ಹಸ್ತವು, ತೊಡೆಯು, ಕಣ್ಣು, ಅದುರುತ್ತಾ ಮಂಗಳವನ್ನು ಸೂಚಿಸಿದುವು. ಹಸ್ತಗಳು ಶಿರೀಷಪುಷ್ಪದ ಮಾಲೆಯಂತೆಯೂ, ತೊಡೆಗಳು ಬಾಳೇ ಕಂಭದಂತೆಯೂ, ಕಣ್ಣುಗಳು ಕಮಲದಳದಂತೆಯೂ ಇದ್ದು ಸ್ಫುರಿಸಿದುವು-

ಇಮಾ ಮವಸ್ಥಾ ಮಖಿಳಾಂ ಪಶ್ಯ ಪವನ ನಂದನಃ ‖
ಚಿಂತಯಾಮಾಸ ಬಹುಧಾ ಕಾರ್ಯಗೌರವ ಯಂತ್ರಿತಃ‖ ೫೭ ‖

ವಾಯುಪುತ್ರನಾದ ಹನುಮಂತನು ಈ ಅವಸ್ಥೆಯಲ್ಲಿರುವ ಸೀತಾದೇವಿಯನ್ನು ನೋಡಿ, ಮುಂದೆ ಏನು ಮಾಡಬೇಕೆಂಬ ಆಲೋಚನೆಯಿಂದ ಬಹುಕಾಲ ಯೋಚಿಸಿದನು.

ರಾಕ್ಷಸೀಭಿರವಿಜ್ಞಾತಃ ಸೀತಾಂ ವಿಶ್ವಾಸಯನ್ನಹಂ ||
ಸಂವದಿಷ್ಯೇ ಇತಿಹ್ಯಾಸಾಂ ನಿದ್ರಾಂ ಪ್ರತ್ಯೈಕ್ಷತ ಪ್ರಭುಃ || ೫೮ ||

ರಾಕ್ಷಸೀಯರಿಗೆ ತಿಳಿಯದ ಹಾಗೆ ಸೀತಾದೇವಿಯಲ್ಲಿ ವಿಶ್ವಾಸಮಾಡುವಂಥ ನಾನು ಆಕೆಯೊಡನೆ ಮಾತನಾಡುತ್ತೇನೆ ಎಂದು ಕೊಳ್ಳುತ್ತಿರಲು ಆ ರಾಕ್ಷಸಸ್ತ್ರೀಯರೆಲ್ಲರೂ, ನಿದ್ರೆ ಹೋಗುತ್ತಿರುವುದನ್ನು ಕಂಡನು.

ಮಾನುಷೀಮಾಶು ಮಧುರಾಂ ಸಂಸ್ಕೃತಾಂ ಶ್ರೀತನುಪ್ರಿಯಾಂ ||
ನೀತಿರ್ಮಾ ಹನುರ್ಮಾ ವಾಚಾ ಮುವಾಚ ವಿಟಪಾಶ್ರಯಃ || ೫೯ ||

ನೀತಿಜ್ಞನಾದ ಹನುಮಂತನು ಶಿಂಶುಪಾವೃಕ್ಷದಲ್ಲಿ ಕುಳಿತುಕೊಂಡು ಮನುಷ್ಯರಂತೆ ಪ್ರಿಯಭಾಷಿಯಾಗಿಯೂ, ದೇವರಿಗೆ ಇಷ್ಟವಾದ ಸಂಸ್ಕೃತಭಾಷೆಯಿಂದ ಕೂಡಿಯೂ ಇರುವ ಮಾತನ್ನು ಆಡಿದನು.

ಈಶೋ ದಾಶರಥಿಃ ಶ್ರೀಮಾ್ ರಾಮೋ ರಾಜೀವ ಲೋಚನಃ ॥
ನಿಧಿ ಸ್ಸರ್ವ ಗುಣಾನಾಂ ಹಿ ವಾರಿಣಾಮಿವ ವಾರಿಧಿಃ ॥ ೬೦ ॥

ಸರ್ವಲೋಕಗಳಿಗೂ ಒಡೆಯನಾದ ಸಮಸ್ತಸದ್ಗುಣಗಳಿಗೂ ಆಶ್ರಯನಾದ ಅಂದರೆ:— ಸಮಸ್ತ ಉದಕಗಳಿಗೂ, ಆಶ್ರಯವಾದ, ಸಮುದ್ರದಂತಿರುವ, ಮತ್ತು ಕಮಲದಳದೋಪಾದಿಯಲ್ಲಿ ನೇತ್ರಗಳುಳ್ಳ, ಶ್ರೀ ರಾಮಚಂದ್ರನು ದಶರಥರಾಯನಲ್ಲಿ ಅವತಾರ ಮಾಡಿದ್ದಾನೆ.

ಕಾಂತೋಽಸ್ಯಾಃಪಿತೃಸಂದೇಶಾ ತ್ಕಾಂತಾರಂ ಸಸಮಾವಿಶತ್ ॥
ಕಾಂತಾಸಕ್ತಮನಃಪ್ರಾಯಾತ್ಕಾಂತಾ ತಸ್ಯಚ ಜಾನಕೀ ॥ ೬೧ ॥

ಆ ರಾಮಚಂದ್ರನು ತಂದೆಯಾದ ದಶರಥನಿಂದ ಕಳುಹಿಸಲ್ಪಟ್ಟವನಾಗಿ ಹದಿನಾಲ್ಕುವರ್ಷ ಕಾಡಿನಲ್ಲಿ ಸಂಚಾರಮಾಡಲು ಅರಣ್ಯವನ್ನು ಸೇರಿದನು. ಆ ಅರಣ್ಯದಲ್ಲಿ ರಾವಣನಿಂದ ಅಪಹೃತಳಾದ ಹೆಂಡತಿಯನ್ನು ಹುಡುಕಲು ಶ್ರೀ ರಾಮಚಂದ್ರನು ಹೊರಟನು. ಆತನ ಹೆಂಡತಿಯೋ ಸೀತಾದೇವಿಯು?

ವಿಚಿನ್ವಾನಸ್ಯ ರಾಮಸ್ಯ ರಾವಣೇನ ಹೃತಾಂ ಪ್ರಿಯಾಂ॥
ಸಲಕ್ಷ್ಮಣಸ್ಯ ದೂತೋಽಹಂ ದೃಷ್ಟವಾನಸ್ಮಿ ತಾಮಿಮಾಂ ॥ ೬೨ ॥

ರಾವಣನಿಂದ ಅಪಹೃತಳಾದ ಸೀತಾದೇವಿಯನ್ನು ಹುಡುಕುತ್ತಿರುವ ಮತ್ತು ಲಕ್ಷ್ಮಣನಿಂದ ಕೂಡಿಕೊಂಡಿರುವ ಶ್ರೀ ರಾಮಚಂದ್ರನ, ದೂತನಾದ ನಾನು, ಈಗ ಇಲ್ಲಿ ಈ ಸೀತಾದೇವಿಯನ್ನು ನೋಡುತ್ತಿದ್ದೇನೆ.

ದೇವಿತ್ವಾಂ ದೇವ ದೇವೋಽಸೌ ದೇವರಶ್ಚ ತವಾನಘೇ ॥
ಕುಶಲಂ ಪೃಚ್ಛತಃ ಪ್ರೀತೌ ಸತ್ಯಂ ದೂತ ಮುಖೇನ ಹಿ ॥ ೬೩ ॥

ಎಲೈ! ದೇವಿಯೇ ! ದೇವದೇವನಾದ ರಾಮಚಂದ್ರನೂ, ನಿನ್ನ ಮೈದುನನಾದ ಲಕ್ಷ್ಮಣನೂ, ದುಃಖಹೀನಳಾದ ನಿನ್ನ ಕ್ಷೇಮವನ್ನು ಪ್ರೀತಿಯಿಂದ ಸತ್ಯವಾಗಿಯೂ, ದೂತನಾದ ನನ್ನ ಮುಖದಿಂದ ಕೇಳುತ್ತಾರೆ. ಎಂದು ಹನುಮಂತನು ಹೇಳಿದನು.

ಏವಂ ವಕ್ತಾರಮೇನಂ ವಿಟಪಿ ವಿಟಪ ಸಂಸಂಗಿನಂ ಮಂಗಳಾಂಗಂ ।

ಪಿಂಗಂ ಸೌದಾಮಿನೀವದ್ವಲ ನಿವಸನಂ ಪದ್ಮರಾಗಾರುಣಾಸ್ಯಂ ॥
ಕೇಶಾನುತ್ಸಾರ್ಯ ದೋಷ್ಣಾ ಮುಖವಿಧುಮಶನೈಃ ಉನ್ನಮಯ್ಯಾಕುಲಾಕ್ಷೀ ।
ದೃಷ್ಟ್ವಾರಾಮಸ್ಯದೂತಂ ಸರಣರಣಿಕಯಾ ಸಾ ಮೃಗಾಕ್ಷೀದದರ್ಶ ॥ ೭೪ ॥
ಇತಿ ಶ್ರೀಮನ್ನಾರಾಯಣ ಪಂಡಿತಾಚಾರ್ಯ ಕೃತೌ ಶ್ರೀಮತ್ಸಂಗ್ರಹರಾಮಾಯಣೇ
ಸುಂದರಕಾಂಡೇ ರಾಮಾಂಕೇ ಚತುರ್ಥಸ್ಸರ್ಗಃ ॥ ಶ್ರೀ ರಾಮಚಂದ್ರ ಪ್ರೀಯತಾಂ ॥

— 0 —

ಈ ರೀತಿಯಾಗಿ ಹೇಳುತ್ತಿರುವ ಅಶೋಕವೃಕ್ಷದ ರೆಂಬೆಯಲ್ಲಿ ಕುಳಿತುಕೊಂಡಿರುವ,ಪಿಂಗಳ ವರ್ಣದಿಂದ ಕೂಡಿದ ಅವಯಗಗಳುಳ್ಳ,ಮಿಂಚಿನ ಬಳ್ಳಿಯಂತೆ ಪ್ರಕಾಶಮಾನವಾದ ಬಟ್ಟೆಯನ್ನುಟ್ಟಿರುವ,ಪದ್ಮರಾಗ ಮಾಣಿಕ್ಯದಂತೆ, ಕೆಂಪಾದ ಮುಖವುಳ್ಳ, ಶ್ರೀ ರಾಮಚಂದ್ರನ ದೂತನಾದ,ಹನುಮಂತನನ್ನು, ಸೀತಾದೇವಿಯು ಆಶ್ಚರ್ಯಯುಕ್ತಳಾಗಿ, ಮುಂಗೂದಲನ್ನು ಮೇಲಕ್ಕೆ ಎತ್ತಿ, ಚಂದ್ರಬಿಂಬದಂತೆ ಇರುವ ತನ್ನ ಮುಖದಿಂದ ಪ್ರಕಾಶಿತವಾದ ಕಣ್ಣುಗಳಿಂದ ನೋಡಿದಳು.

ಇತಿ ಶ್ರೀಮತ್ಸಂಗ್ರಹರಾಮಾಯಣದ ಸುಂದರಕಾಂಡದ ರಾಮಾಂಕದ ನಾಲ್ಕನೆಯಸರ್ಗದಲ್ಲಿ
ಮುಳಬಾಗಲು ಅವರೂರು ನಂದಗುಡಿ ಪೂರ್ಣಪ್ರಜ್ಞಾಚಾರ್ಯಸುತ
ಆನಂದತೀರ್ಥಾಚಾರ್ಯರವರಿಂದ ವಿರಚಿತವಾದ ಕರ್ಣಾಟಕಾಭಿಪ್ರಾಯದ ಚತುರ್ಥಸ್ಸರ್ಗವು.

— ೦ —

ಪಂಚಮಸ್ಸರ್ಗಃ ಪ್ರಾರಂಭಃ ॥ ಹರಿಃ ॥ ಓಂ ॥

ಶ್ಲೋ॥ ಏವಂ ಪ್ರಿಯಂ ವದಂ ದೃಷ್ಟ್ವಾ ದ್ರುಮಾಗ್ರೇವಿದ್ರುಮಾನನಂ ॥
ತರ್ಕಯಾಮಾಸ ಬಹುಧಾ ತರ್ಕಜ್ಞಾತನುಮಧ್ಯಮಾ ॥ ೧ ॥

ತಾ॥ ಈ ರೀತಿಯಾಗಿ ಪ್ರಿಯವಾದ ವಾಕ್ಯವನ್ನು ನುಡಿಯುತ್ತಿರುವ ಹವಳದಂತೆ ಕೆಂಪಾದಮುಖ

ವುಳ್ಳ ಮತ್ತು ಮರದ ಮೇಲೆ ಕೂತಿರುವ ಕಪಿಯನ್ನು ನೋಡಿ, ತೆಳುವಾದ ನಡುವುಳ್ಳ ಸೀತಾದೇವಿಯು ಬಹಳವಾಗಿ ಆಲೋಚನೆಯನ್ನು ಮಾಡಿದಳು.

ಹನುಮಾನವತೀರ್ಯಾಥ ವಿನೀತೋನೀತಿಮತ್ತಮಃ ॥
ಪ್ರಶ್ರಯಾವನತಃಪ್ರೋಚೇ ಪ್ರಾಂಜಲಿಃ ಕಂಜಲೋಚನಾಂ ॥ ೨ ॥

ನೀತಿಜ್ಞನಾದ ಹನುಮಂತನು ಮರದಿಂದ ಕೆಳಕ್ಕೆ ಇಳಿದು ವಿನಯದಿಂದ ತಲೆಯನ್ನು ಬಗ್ಗಿಸಿ ಕೈಯ್ಯನ್ನು ಜೋಡಿಸಿಕೊಂಡು ಕಮಲದಳದೋಪಾದಿಯಲ್ಲ ಕಣ್ಣುಗಳುಳ್ಳ ಸೀತಾದೇವಿಯನ್ನುಕುರಿತು ಮಾತ ನಾಡಿದನು.

ರಾಕ್ಷಸೀಮಾಧ್ಯಮಾಪನ್ನಾ ಕಾತ್ವಂ ತ್ರೈಲೋಕ್ಯಸುಂದರೀ ॥
ಕಚ್ಚಿದ್ರಾಮಸ್ಯ ಪತ್ನೀತ್ವಂ ಕಚ್ಚಿನ್ನಃ ಸಫಲಃ ಶ್ರಮಃ॥ ೩ ॥

ತ್ರೈಲೋಕ್ಯಸುಂರಿಯಾದ ರಾಕ್ಷಸೀಯರ ಮಧ್ಯದಲ್ಲಿರುವ ನೀನು ಯಾರಮ್ಮಾ ! ತಾಯಿಾ ! ನೀನು

ಶ್ರೀ ರಾಮಚಂದ್ರನ ಹೆಂಡತಿಯಾದ ಸೀತಾದೇವಿಯೇ ! " ನನ್ನ ಶ್ರಮವೆಲ್ಲವೂ ನಿನ್ನನ್ನು ನೋಡಿ ಸಫಲವಾದೀತೆ? ಎಂಬದಾಗಿ ಕೇಳಿದನು".

ಇತ್ಯುಕ್ತ್ವಾ ತರುಣೀಸೋಚೇ ವಿದ್ಧಿಮಾಂ ರಾಮ ವಲ್ಲಭಾಂ ||
ಸ್ನುಷಾಂ ದಶರಥಸ್ಯಾಂಗ ಜನಕಸ್ಯ ಸುತಾಮಿತಿ || ೪ ||

ಹೀಗೆ ಕೇಳಲ್ಪಟ್ಟ ಸೀತಾದೇವಿಯು ಹನುಮಂತನನ್ನು ಕುರಿತು:—— ಎಲೈ ! ಚಿರಂಜೀವಿಯೇ ! ನಾನು ಜನಕರಾಜನ ಮಗಳಾಗಿಯೂ, ದಶರಥನ ಸೊಸೆಯಾಗಿಯೂ, ಶ್ರೀ ರಾಮಚಂದ್ರನ ಹೆಂಡತಿಯಾಗಿಯೂ, ಇರುತ್ತೇನೆಂಬದಾಗಿ ಹೇಳಿದಳು:-

ಮಾತಲೋಕ ಪಿತಾ ರಾಮಃ ಕುಶಲಂ ತ್ವಾನುಪೃಚ್ಛತಿ ||
ಪ್ರಾಪ್ತೋ ರಾಮಸ್ಯ ದೂತೋಹ ಮಿತಿ ಮಾರುತಿ ರಬ್ರವೀತ್ || ೫ ||

ಎಲೈ ! ತಾಯಿಯೇ ! ಸಮಸ್ತ ಲೋಕಕ್ಕೂ ಸ್ವಾಮಿಯಾದ ಶ್ರೀ ರಾಮಚಂದ್ರನು ನಿನ್ನ ಕ್ಷೇಮ

ವಾರ್ತೆಯನ್ನು ಕೇಳುತ್ತಾನೆ. ಮತ್ತು ರಾಮದೂತನಾದ ನಾನು ಅದಕ್ಕೋಸ್ಕರವಾಗಿಯೇ ಇಲ್ಲಿಗೆ ಬಂದಿದ್ದೇನೆಂಬದಾಗಿ ಮರುತ್ಪುತ್ರನಾದ ಹನುಮಂತನು ಮಾತನಾಡಿದನು.

ಉಪಸೃತ್ಯತತಃ ಸ್ತ್ರಸ್ಯಾಃ ಹನೂಮಾನ್ ಭಕ್ತಿಮತ್ತಮಃ ||
ಚರಣಾವರುಣಾಬ್ಜಾಭೌ ಧನ್ಯೋಸ್ಮೀತ್ಯಭ್ಯವಂದತ || ೬ ||

ಅನಂತರದಲ್ಲಿ ಪರಮಭಕ್ತನಾದ ಹನುಮಂತನು ಆ ಸೀತಾದೇವಿಯ ಸಮೀಪಕ್ಕೆ ಹೋಗಿ, ಕೆಂಪಗೆ ಕಮಲದಳದೋಪಾದಿಯಲ್ಲಿ, ಪ್ರಕಾಶಿಸುವ ಆಕೆಯ ಪಾದಗಳಲ್ಲಿ, ನಾನು ಧನ್ಯನಾದೆನು ಎಂದು ನಮಸ್ಕಾರ ಮಾಡಿದನು.

ಕಿಂಚಿತ್ತತೋಪ ಸರ್ಪಂತೀ ಪ್ರೋಚೇಸಾ ಹರಿಣೇಕ್ಷಣಾ ||
ನೂನಂ ಸರಾವಣೋಸಿತ್ವಂ ಹಂತ ರೂಪಾಂತರಂಗತಃ || ೭ ||

ಜಿಂಕೆಯಕಣ್ಣುಗಳೋಪಾದಿಯಲ್ಲಿ ಕಣ್ಣುಗಳುಳ್ಳ ಸೀತಾದೇವಿಯು ಸ್ವಲ್ಪ ದೂರವಾಗಿ ಸರಿದು ಅಯ್ಯೋ

ರೂಪಾಂತರವನ್ನು ಹೊಂದಿರುವ ಆ ರಾವಣನಂತೆಯೋ! ಹೀಗೆ ಬಂದಿರುತ್ತೀಯೆ! ಎಂದು ನಾನು ತಿಳಿಯುತ್ತೇನೆ

ಯದಿ ರಾಮಸ್ಯದೂತೋಽಸಿ ವದರಾಮಸ್ಯಲಕ್ಷಣಂ ||
ವಾರ್ತಾಂ ಚಾರ್ತಿಚ್ಛಿದಂತಸ್ಯ ಪುಣ್ಯಕೀರ್ತೇಃ ಪ್ರಕೀರ್ತಯ || ೮ ||

ನೀನು ರಾಮನ ದೂತನೇ ಆಗಿದ್ದ ಪಕ್ಷದಲ್ಲಿ ಆ ರಾಮನ ಲಕ್ಷಣಗಳನ್ನು ಹೇಳು. ಮತ್ತು ಸಮಸ್ತರ ದುಃಖವನ್ನು ಪರಿಹಾರ ಮಾಡುವ, ಪುಣ್ಯಕೀರ್ತಿಯಾದಂಥ, ಶ್ರೀ ರಾಮಚಂದ್ರನಚರಿತ್ರೆಯನ್ನು ಚೆನ್ನಾಗಿ ಹೇಳು? ಎಂಬದಾಗಿ ಸೀತಾದೇವಿಯು ಹನುಮಂತನನ್ನು ಕೇಳಿದಳು.

ಆಕರ್ಣ್ಯ ಜಲ್ಪಿತಂ ತಸ್ಯಾ ವಾಕ್ಯಜ್ಞೋ ವಾಕ್ಯಮಬ್ರವೀತ್ ||
ಲಕ್ಷಣಂ ದೇವ ದೇವಸ್ಯ ಕೋ ವಕ್ತಾ ಥಾಪಿ ಚೋಚ್ಯತೇ || ೯ ||

ಈ ರೀತಿಯಾಗಿ ಹೇಳಿದ ಸೀತಾದೇವಿಯ ಮಾತನ್ನು ವಾಗ್ಮಿಯಾದ ಹನುಮಂತನು ಕೇಳಿ, ಹೇ ! ತಾಯೇ ! ದೇವದೇವನಾದ ಶ್ರೀ ರಾಮಚಂದ್ರನ ಲಕ್ಷಣವನ್ನು ಸಮಗ್ರವಾಗಿ ಹೇಳಲು ಯಾರಿಂದ ತಾನೇ

ಸಾಧ್ಯವು? ಆದರೂ ನನಗೆ ತಿಳಿದ ಮಟ್ಟಿಗೆ ಹೇಳುತ್ತೇನೆ.

ಕ್ಷಮಾ ಕ್ಷಮಾಂ ರವಿಸ್ತೇಜಃ ಕಾಮಃ ಕಾಂತಿಂ ವೃಷಾಯಶಃ ||
ಅನ್ಯೇಚಾನ್ಯಾರ್ ಗುಣಾರ್ ದೇವಾಃ ಶಿಕ್ಷಂತೇ ಪ್ರೇಕ್ಷ್ಯರಾಘವೇ || ೧೦ ||

ಶ್ರೀ ರಾಮಚಂದ್ರನನ್ನು ನೋಡಿ ಈ ಭೂಮಿಯು ಕ್ಷಮಾಗುಣವನ್ನೂ, ಸೂರ್ಯನು ತೇಜಸ್ಸನ್ನೂ, ಕಾಮನು ಕಾಂತಿಯನ್ನೂ, ಇಂದ್ರನು ಕೀರ್ತಿಯನ್ನೂ, ಇತರರಾದ ದೇವತೆಗಳು ಇತರ ಗುಣಗಳನ್ನೂ ಕಲಿತು ಕೊಂಡರು. ಅಂದರೆ ಶ್ರೀ ರಾಮಚಂದ್ರನಲ್ಲಿ ಸಮಸ್ತ ಸದ್ಗುಣಗಳು ತುಂಬಿರುತ್ತವೆ.

ರಾಮೋ ಹರಿನ್ಮಣಿ ಶ್ಯಾಮಃ ಪದ್ಮಾಕ್ಷಃ ಸಿಂಹವಿಕ್ರಮಃ ||
ಏವಂ ಲೋಕಪ್ರವಾದೋಽಂಬ ಸತ್ಯಂ ತೇಽನುಪಮಃ ಪತಿಃ || ೧೧ ||

ಶ್ರೀ ರಾಮಚಂದ್ರನು ಇಂದ್ರನೀಲ ಮಣಿಯಂತೆ ಕಪ್ಪಾದ ದೇಹವುಳ್ಳವನು. ಕಮಲ ಪುಷ್ಪದಂತೆ ವಿಶಾಲವಾದ ಕಣ್ಣುಗಳುಳ್ಳವನು. ಸಿಂಹದಂತೆ ಪರಾಕ್ರಮವುಳ್ಳವನು. ಎಂಬದಾಗಿ ಲೋಕದಲ್ಲಿ ಪ್ರಸಿದ್ಧಿಯು.

ಎಲೈ ! ತಾಯಿಯೇ ! ಸತ್ಯವಾಗಿಯೂ ನಿನ್ನ ಪತಿಯಾದ ಶ್ರೀ ರಾಮಚಂದ್ರನು ನಿನಗೆ ಅನುಪಮನು.

ಏಕರೂಪ್ರೋ ದ್ವಿಶುಕ್ಲೋಸೌ ತ್ರಿಸಮ ಸ್ತ್ರಿಷುಚೋನ್ನತಃ ||
ತ್ರಿಷು ತಾಮ್ರಸ್ತ್ರಿಷು ಸ್ನಿಗ್ಧ ಸ್ತ್ರಿವಳಿ ಸ್ತ್ರಿಜಗದ್ಗುರುಃ || ೧೨ ||

ಏಕರೂಪನೂ (ಅಂದರೆ ಸರ್ವತ್ರದಲ್ಲಿಯೂ ವ್ಯಾಪಿಸಿಕೊಂಡಿರತಕ್ಕವನೆಂದು ಅರ್ಥ) ಮಾತಾಪಿತೃಗಳಿಂದ ಶುದ್ಧನೂ ಅಥವಾ ಕುಸುಮಗಂಧ–ಮಧುಗಂಧದಿಂದ ಕೂಡಿದವನು. ದ್ವಿಶುಕ್ಲನೂ,ಕುಕ್ಷೀ,ನಾಭೀ ಹೃದಯ, ಇವುಗಳು ಉಬ್ಬಿಕೊಂಡು ಇರತಕ್ಕವನೂ, ತ್ರಿಸಮನು ಅಂದರೆ ಕೇಶಾಗ್ರ, ವೃಷಣ, ಜಾನು ಇವು ಮೂರು ಸಮವಾಗಿರತಕ್ಕವನು. ಕೇಶಾ, ಇವುಗಳಿಂದ ಸ್ನಿಗ್ಧನು. ಉದರರೇಖಾ,ಹಸ್ತತಳ,ಪಾದತಳ,ನಖಾಗ್ರ ಇವು ಮೂರು ಕೆಂಪಗೆ ಇರತಕ್ಕವನೂ, ಪಾದರೇಖಾ ಮಣಿಬಂಧತ್ರಯವುಳ್ಳವನು, ಸಮಸ್ತಲೋಕಕ್ಕೂ ಸ್ವಾಮಿಯಾದವನು.

ಚತುಷ್ಕಳ ಚತುಷ್ಕಿಷ್ಕುಃ ಚತುರ್ಲೇಖಃ ಚತುಸ್ಸಮಃ ||

ಚತುರ್ಗತಿಶ್ಚತುರ್ದಂಷ್ಟ್ರಃ ಚತುರ್ವೇದೋದಿತಃ ಪ್ರಭುಃ ॥ ೧೩ ॥

ಚತುಷ್ಕಳನು ಅಂದರೆ:— ನಾಲ್ಕು ವೇದಗಳನ್ನು ತಿಳಿದವನು. ಅಥವಾ ನಾಲ್ಕು ವಿಧವಾದ ಕಳೆಗಳುಳ್ಳವನೂ (೨೪) ಅಂಗುಲಕ್ಕೆ ಒಂದು ಕಿಷ್ಕು ಎಂದು ಹೆಸರು. ಅಂದರೆ (೯೬) ಅಂಗುಲ ಎತ್ತರ ಉಳ್ಳವನೆಂದು ಅರ್ಥ. ಲಲಾಟದಲ್ಲಿ ನಾಲ್ಕು ರೇಖೆಗಳುಳ್ಳವನು ಎಂದು ಅರ್ಥ. ಮಾನ, ಉನ್ಮಾನ,ಸಂಹತೀ,ವರ್ಣ, ಎಂಬ ಚತುಸ್ಸಮಗಳಿಂದ ಸಮನೂ, ಚತುರ್ಗತಿ ಅಂದರೆ:— ಸಿಂಹ, ವ್ಯಾಘ್ರ, ಗಜ, ವೃಷಭ, ಇವುಗಳಿಗೆ ಸಮಾನವಾದ ಗತಿಯುಳ್ಳವನು. ಚತುರ್ದಂಷ್ಟ್ರವುಳ್ಳವನು.

ಪಂಚಸ್ನಿಗ್ಧೋಷ್ಟಜರ್ಜುರಸೌ ಷಡ್ಗುಣಾಢ್ಯಃ ಷಡುನ್ನತಃ ॥
ಸಪ್ತೇಶೋಷ್ಟಾಕ್ಷರಾಖ್ಯಾನೋ ದೇವೋನವನತೋ ಧೃವಂ ॥ ೧೪ ॥

ಪಂಚಸ್ನಿಗ್ಧ ಅಂದರೆ:– 1 ತ್ವಕ್ 2 ಪಾಣಿ 3 ಪಾದ 4 ಪಾಯೂ 5 ಉಪಸ್ಥಾ ಇವುಗಳ ಲಕ್ಷಣಗಳು ಸರಿಯಾಗಿ ಉಳ್ಳವನೆಂದು ಅರ್ಥ. ಅಷ್ಟಜರ್ಜು ಅಂದರೆ:— 1 ಪೃಷ್ಠ 2 ವಂಶ 3 ಶರೀರ

4 ಹಸ್ತ 5 ಪಾದ 6 ನಾಶಿಕ 7 ಚಕ್ಷುಸ್ಸು 8 ಕರ್ಣ ಇವುಗಳು ಸಮವಾಗಿ ಉಳ್ಳವನು. ಷಡ್ಗುಣಾಢ್ಯಃ ಅಂದರೆ:- 1 ಸಮಗ್ರವಾದಐಶ್ವರ್ಯ 2 ವೀರ್ಯ 3 ಯಶಸ್ಸು 4 ಕಾಂತಿ 5 ಜ್ಞಾನ 6 ವಿಜ್ಞಾನ ಇವುಗಳುಳ್ಳವನು. ಷಡುನ್ನತನು ಅಂದರೆ:— 1 ಕಕ್ಷ 2 ಕುಕ್ಷಿ 3 ವಕ್ಷಸ್ಸು 4 ಘ್ರಾಣ 5 ಸ್ಕಂಧ 6 ಲಲಾಟ ಇವುಗಳಿಗೆ ಸರಿಯಾದ ಲಕ್ಷಣ ಉಳ್ಳವನು. ಸಪ್ತೇಶಃ ಅಂದರೆ:- ಸಪ್ತಪ್ರಕೃತಿಗಳಿಗೆ ಒಡೆಯನೂ, ಅಷ್ಟಾಕ್ಷರ ಮಂತ್ರದಿಂದ ಪ್ರತಿಪಾದ್ಯನು.(ಅಂದರೆ:- ಓಂನ್ನಮೋನಾರಾಯಣಾಯ ಎಂಬುವುದೆ ಅಷ್ಟಾಕ್ಷರಮಂತ್ರವು.) ನವನತನು ಅಂದರೆ:— 1 ಅಂಗುಳಿಪರ್ವ 2 ಕೇಶ 3 ರೋಮ 4 ನಖ 5 ತ್ವಕ್ 6 ನಾಲಿಗೆ 7 ಹಲ್ಲು 8 ಕಣ್ಣು 9 ಕಿವಿ ಇವುಗಳಿಂದ ಸಲಕ್ಷಣಗಳಿಂದ ಕೂಡಿದವನೂ, ಧೃವಂ ಅಂದರೆ:- ಶಾಶ್ವತವಾಗಿರುವವನು.

ಬಿಂಬೋಷ್ಟಃ ಕಂಬುಕಂಠೋಸೌ ಸುಂದರೋ ದುಂದುಭಿಸ್ಸ್ವನಃ ||
ಗಜರಾಜಗತಿಸ್ವಾಮಿೂ ಸೋಗಣ್ಯ ಗುಣವಾರಿಧಿಃ || ೧೫ ||

ತೊಂಡೇಹಣ್ಣಿನಂತೆ ಕೆಂಪಗಿರುವ ತುಟಿಯುಳ್ಳವನು- ಬಲಮುರೀಶಂಖದಂತೆ ಕಂಠಉಳ್ಳವನು·

ಈ ರಾಮನು ! ಅತ್ಯಂತ ಸುಂದರನು ! ದುಂದುಭಿಯ ಸ್ವರದಂತೆ ಗಂಭೀರವಾದ ಧ್ವನಿಯುಳ್ಳವನು, ಅಗಣಿತವಾದ ಗುಣಗಳಿಗೆ ಆಶ್ರಯನಾದ ಶ್ರೀ ರಾಮಚಂದ್ರನು ಮದ್ದಾನೆಯಂತೆ ನಡಿಗೆಯುಳ್ಳವನಾಗಿರುತ್ತಾನೆ.

ಅನುರೂಪೋನುಜಸ್ತಸ್ಯ ಲಕ್ಷ್ಮಣಃ ಶುಭಲಕ್ಷಣಃ ||
ತ್ವಾಂ ವನೇಷು ವಿಚಿನ್ವಾನೋ ದೇವರೋ ದೇವಿದೂಯತೇ || ೧೬ ||

ಅವನ ತಮ್ಮನಾದ ಲಕ್ಷ್ಮಣನೂ ಸಹ ಮೇಲೆ ಹೇಳಿದ ಶುಭಲಕ್ಷಣಗಳಿಂದ ಅನುರೂಪನಾಗಿದ್ದಾನೆ. ನಿನ್ನ ಮೈದುನನಾದ ಆ ಲಕ್ಷ್ಮಣನು ಎಲೈ ! ದೇವಿಯೇ ! ನಿನ್ನನ್ನು ಅರಣ್ಯದಲ್ಲಿ ಹುಡುಕುತ್ತಾ; ಹುಡುಕುತ್ತಾ ಸಂಕಟಪಡುತ್ತಿದ್ದನು.

ಋಶ್ಯಮೂಕೇ ಭವತ್ತಾಭ್ಯಾಂ ಸಂಗಮೋ ಮಂಗಳಾಯನಃ ||
ಮಯಾಸಖ್ಯಂ ಕೃತಂ ತತ್ರ ವಾನರೇಂದ್ರ ನರೇಂದ್ರಯೋಃ || ೧೭ ||

ಋಶ್ಯಮೂಕಪರ್ವತದಲ್ಲಿ ಅವರ (ರಾಮ ಲಕ್ಷ್ಮಣರ) ಮಂಗಳಕರವಾದ, ಸಮಾಗಮವು

ನನ್ನೊಡನೆ ಆಯಿತು. ಮತ್ತು ವಾನರ ರಾಜನಾದ ಸುಗ್ರೀವನಿಗೂ, ಶ್ರೀ ರಾಮಚಂದ್ರನಿಗೂ, ಸ್ನೇಹವು ಅಗ್ನಿ ಸಾಕ್ಷಿಕವಾಗಿ ನನ್ನಿಂದಲೇ ಮಾಡಲ್ಪಟ್ಟಿತು.

ಸುಗ್ರೀವಾಯ ದದೌ ರಾಜ್ಯಂ ರಾಮೋ ಹತ್ವಾಥ ವಾಲಿನಂ ॥
ವಿಚಿನ್ವಂತೀ ಚತುರ್ದಿಕ್ಷು ತ್ವಾಂ ಹರೀಂದ್ರಸ್ತದಾಜ್ಞಯಾ ॥ ೧೮ ॥

ಶ್ರೀ ರಾಮಚಂದ್ರನು ವಾಲಿಯನ್ನು ನಿಗ್ರಹಿಸಿ, ಸುಗ್ರೀವನಿಗೆ ರಾಜ್ಯವನ್ನು ಕೊಟ್ಟನು. ಮತ್ತು ರಾಮ ಸುಗ್ರೀವರ ಅಪ್ಪಣೆಯಿಂದ ಕಪಿಶ್ರೇಷ್ಠರುಗಳು ನಾಲ್ಕು ದಿಕ್ಕುಗಳಲ್ಲಿಯೂ ನಿನ್ನನ್ನು ಹುಡುಕುತ್ತಿದ್ದಾರೆ.

ಪ್ರಭಂ ಜನಾದಂ ಜನಾಯಾಂ ಜಾತೋಽಹಂ ಹನುಮಾನ್ ಕಪಿಃ ॥
ತೀರ್ಣಾರ್ಣವೋ ರಾಮದೂತಃ ಸತ್ಯಂ ಪ್ರಾಪ್ತೋಽಸ್ಮಿ ಶೋಭನೇ ॥ ೧೯ ॥

ವಾಯುದೇವರ ದೆಶೆಯಿಂದ ಅಂಜನಾದೇವಿಯಲ್ಲಿ ಹುಟ್ಟಿದಂಥ ಹನುಮಂತನೆಂಬ ಕಪಿಯೇ ನಾನು. ಎಲೈ ! ತಾಯಿಯೇ ! ರಾಮನಾಜ್ಞೆಯಿಂದ ರಾಮದೂತನಾದ ನಾನು ಸಮುದ್ರವನ್ನು ದಾಟಿ ಸತ್ಯವಾಗಿಯೂ

ಇಲ್ಲಿಗೆ ಬಂದಿದ್ದೇನೆ.

ಇತ್ಯುಕ್ತ್ವಾ ರಾಮನಾಮಾಂಕಂ ಸಪ್ರಾದಾ ದಂಗುಳೀಯಕಂ ॥
ಜಗ್ರಾಹ ಸಾನುರಾಗಾತ್ತಂ ತದ್ರಾಮಾ ರಾಮಮಾಗತಂ ॥ ೨೦ ॥

ಈ ರೀತಿಯಾಗಿ ಹೇಳಿದ ಹನುಮಂತನು ರಾಮನಾಮಾಂಕಿತವಾದ ಮುದ್ರೆ ಉಂಗುರವನ್ನು ಸೀತಾದೇವಿಗೆ ಕೊಟ್ಟನು. ಆಕೆಯು ಶ್ರೀ ರಾಮಚಂದ್ರನು ಎದುರಿಗೆ ಬಂದರೆ ಎಷ್ಟು ಸಂತೋಷವಾಗುವುದೋ, ಅಷ್ಟು ಪ್ರೀತಿಯಿಂದ ಆ ಉಂಗುರವನ್ನು ತೆಗೆದುಕೊಂಡಳು.

ಪ್ರತ್ಯಯಂ ಪ್ರಾಪ್ಯ ಸಾ ಸೀತಾ ಪ್ರತ್ಯಭಾಷತ ಮಾರುತಿಂ ॥
ವೀರೋಽಸಿ ರಾಮದೂತೋಽಸಿ ಪ್ರಾಜ್ಞೋಽಸಿತ್ವಂ ಹರೀಶ್ವರಾ ॥ ೨೧ ॥

ನಂತರ ಆ ಸೀತಾದೇವಿಯು ಈತನಲ್ಲಿ ನಂಬಿಕೆಯನ್ನು ಹೊಂದಿ ಮಾರುತಿಯನ್ನು ಕುರಿತು ಎಲೈ ! ಕಪಿಶ್ರೇಷ್ಠನೇ ! ನೀನು ವೀರನಾಗಿಯೂ, ರಾಮದೂತನಾಗಿಯೂ, ಮಹಾ ಪಂಡಿತನಾಗಿಯೂ ಇರು

ತ್ರೀಯೇ ಎಂಬದಾಗಿ ಮಾತನಾಡಿದಳು.

ಕಚ್ಚಿತ್ಪಾಲಯತೇ ಲೋಕಾನ್ ರಾಮಃ ಸೌಮಿತ್ರಿಣಾಸಹ ||
ಕಚ್ಚಿದೇಷ್ಯತಿ ಕಾಕುಸ್ಥಃ ಕಚ್ಚಿನ್ಮಾಂ ಪ್ರತಿನೇಷ್ಯತೀ || ೨೨ ||

ಸರ್ವದಾ ಸಮಸ್ತಲೋಕವನ್ನೂ ಕಾಪಾಡತಕ್ಕವನಾದ ಶ್ರೀ ರಾಮಚಂದ್ರನು ಸೌಮಿತ್ರಿಯಿಂದ ಕೂಡಿ, ಇಲ್ಲಿಗೆ ಯಾವಾಗ ಬರುತ್ತಾನೆ? ಮತ್ತು ನನ್ನನ್ನು ಇಲ್ಲಿಂದ ಯಾವಾಗ ಮುಂದಕ್ಕೆ ಕರೆದುಕೊಂಡು ಹೋಗುವನು? ಎಂಬದಾಗಿ ಕೇಳಿದಳು.

ದ್ವಾದಶೇ ಕಿಲಮಾಸೇಮಾಂ ಘ್ನಂತೇತೇ ದಶಮೋಹ್ಯಯಂ ||
ವಿಭೀಷಣಸ್ಯ ಕನ್ಯಾನಾಂ ನಳನಾಮೇವ ಮಬ್ರವೀತ್ || ೨೩ ||

ಎಲೈ ! ವಾನರನೇ ! ಹನ್ನೆರಡನೇತಿಂಗಳಲ್ಲಿ ರಾಕ್ಷಸರು ನನ್ನನ್ನು ಕೊಲ್ಲುತ್ತಾರೆ. ಈಗ ಹತ್ತನೆಯತಿಂಗಳು. ನನ್ನನ್ನು ಕೊಲ್ಲುವ ಈ ವರ್ತಮಾನವನ್ನು ವಿಭೀಷಣನ ಮಗಳಾದ ನಳಾ ಎಂಬು

ವಳು ಹೇಳಿದಳು.

ಏವಂಬ್ರುವಾಣಾಕರುಣಂ ವಿಲಪಂತೀ ಶುಕಾಲಪಾ ॥
ಸ್ವಾಮಿರ್ನ್ ರಾಮ ಪ್ರಸೀದೇತೀ ಪ್ರರುರೋದ ಪುನಃ ಪುನಃ ॥ ೨೪ ॥

ಈ ರೀತಿಯಾಗಿ ಕರುಣ ಹುಟ್ಟುವಂತೆ, ರೋದಿಸುತ್ತಿರುವ ಗಿಳಿಯ ಮಾತಿನಂತೆ ಮಾತನಾಡುವ ಸೀತಾದೇವಿಯು ಎಲೈ ! ಸ್ವಾಮಿಯಾದ ಶ್ರೀ ರಾಮಚಂದ್ರನೇ! ನನ್ನಲ್ಲಿ ಅನುಗ್ರಹಮಾಡು ಎಂದು ಪುನಃ ಪುನಃ ರೋದನಮಾಡುತ್ತಿದ್ದಳು.

ಹನೂಮಾರ್ನ್ ಪ್ರಾಂಜಲಿಪ್ರೋಚೇ ಪಾದಯೋರ್ದೇವಿ ತೇಶಪೇ ॥
ಕ್ಷಿಪ್ರಮೇಷ್ಯತಿ ಕಾಕುಸ್ಥಃ ಸಾನುಜಃ ಸಕಪಿ ಪ್ರಜಃ ॥ ೨೫ ॥

ಹನುಮಂತನು ಸೀತಾದೇವಿಯ ಪಾದಗಳಲ್ಲಿ ನಮಸ್ಕಾರಮಾಡಿ, ಕೈ ಜೋಡಿಸಿಕೊಂಡು ಸ್ವಾಮಿಯಾದ ರಾಮನು ಲಕ್ಷ್ಮಣನಿಂದಲೂ ಕಪಿ ಸಮೂಹದಿಂದಲೂ ಕೂಡಿಕೊಂಡು ತಮ್ಮ ಪಾದ ಸಾಕ್ಷಿಯಾಗಿಯೂ,

ಇಲ್ಲಿಗೆ ಜಾಗ್ರತೆಯಾಗಿ ಬರುತ್ತಾರೆ.

ದಶಾನನೋ ರಾಮಬಾಣೈಃ ದಶಾಂತಂ ದೃತಮೇಷ್ಯತಿ ॥
ನಿದ್ರಾರ್ವಾ ಕುಂಭಕರ್ಣೋಽಪಿ ದೀರ್ಘನಿದ್ರಾಂಪ್ರಣೇಷ್ಯತಿ ॥ ೨೬ ॥

ಶ್ರೀ ರಾಮಚಂದ್ರನ ಬಾಣದ ಏಟನಿಂದ ರಾವಣನು ದಶಾಂತವನ್ನು ಅಂದರೆ:- ಬಾಲ್ಯ,ಯೌವನ, ಕೌಮಾರ, ವಾರ್ಧಿಕ್ಯ,ಮರಣ, ಜನ್ಮ, ಅಸ್ತಿ, ವೃದ್ಧಿ, ಪರಿಣಾಮ, ವಿನಾಶ ಇವುಗಳಿಗೆ ಕೊನೆಯಾದ, ಅವಸ್ಥೆಯನ್ನು ಜಾಗ್ರತೆಯಾಗಿ ಹೊಂದುತ್ತಾನೆ. ಮತ್ತು ನಿದ್ರಿಸುತ್ತಿರುವ ಕುಂಭಕರ್ಣನೂ ಸಹ ದೀರ್ಘವಾದ ನಿದ್ರೆಯನ್ನು ಹೊಂದಿಸುತ್ತಾನೆ.

ಅಪನೇಷ್ಯತ್ಯ ಪ್ರಿಯಾಂಸ್ತೇ ರಾಮಸ್ತ್ವಾಂ ನೇಷ್ಯತಿಧೃವಂ ॥
ಅಥವಾಸ್ಮಿ ಮುಹೂರ್ತೇ ತ್ವಾಂ ನಯೇಯಂ ರಾಮಸನ್ನಿಧಿಂ ॥ ೨೭ ॥

ನಿನಗೆ ಅಪ್ರಿಯರಾದ ಜನರನ್ನು ಶ್ರೀ ರಾಮಚಂದ್ರನು ಕೊಂದು ನಿನ್ನನ್ನು ಖಂಡಿತವಾಗಿಯೂ,

ಹಿಂದಕ್ಕೆ ಕರದುಃಕ್ಕೊಂಡು ಹೋಗುತ್ತಾನೆ. ಆಪವ ಈ ಮುಹೂರ್ತಮಂತ್ರದಲ್ಲಿಯೇ ನಿನ್ನ ಅಪ್ಪಣೆಯಾದರೆ ನಿನ್ನನ್ನು ಶ್ರೀ ರಾಮಚಂದ್ರನ ಸನ್ನಿಧಿಗೆ ನಾನೇ ಕರೆದುಕೊಂಡು ಹೋಗುತ್ತೇನೆ.

ಇತ್ಯುಕ್ತೋವಾಚ ವಾಮೋರುಃ ಕಥಂ ಮಾಂ ನೇಷ್ಯಸೇ ಕಪೇ ॥
ಅಲ್ಪಸ್ತ್ವಂ ರಾಕ್ಷಸಕುಲ ದುಸ್ಸಹಾದಮರೈರಪಿ ॥ ೨೮ ॥

ಈ ರೀತಿಯಾಗಿ ಹೇಳಿದ ಹನುಮಂತನನ್ನು ಕುರಿತು ಎಲೈ ! ಕಪಿಯೇ ! ಅಲ್ಪನಾದ ನೀನು ದೇವತೆಗಳಿಂದಲೂ ಕೂಡ, ಅಸಾಧ್ಯರಾದ ಈ ರಾಕ್ಷಸ ಕುಲದಿಂದ ಬಿಡಲ್ಪಟ್ಟವನಾಗಿ, ನನ್ನನ್ನು ಹೇಗೆ ಕರೆದುಕ್ಕೊಂಡು ಹೋಗುವಿ? ಎಂದು ಕೇಳಲು ಆ ಹನುಮಂತನು ಮಾತನಾಡುತ್ತಾನೆ.

ಹರ್ಸ ಹನೂರ್ಮಾ ಸಂಗೃಹ್ಯ ರೂಪಂ ಹೇಮಾದ್ರಿ ಸನ್ನಿಭಂ ॥
ವಜ್ರದಂಷ್ಟ್ರ ನಖಸ್ತಾಂಚ ತಾಮ್ರವಕ್ತ್ರೋಭ್ಯ ಭಾಷತ ॥ ೨೯ ॥

ಹನುಮಂತನು ನಗುತ್ತಾ ಮೇರುಪರ್ವತದ ಸದೃಶವಾದ ರೂಪವನ್ನು ಹೊಂದಿ,ವಜ್ರದಂತೆ ಇರುವ

ಹಲ್ಲುಗಳಿಂದಲೂ, ಉಗುರುಗಳಿಂದಲೂ, ಕೂಡಿ ಕೆಂಪಾದ ಮುಖವುಳ್ಳವನಾಗಿ ಮಾತನಾಡುತ್ತಾನೆ.

ಉದ್ಧರೇಯಂ ಧರಾಮೇನಾಂ ಕ್ಷಣೇಸ್ಮಿ್ ಅಬ್ಧಿಮೇಖಲಾಂ ‖
ಕಿಮುತಾಲ್ಪೀಯಸೀಂಲಂಕಾ ರಾಮದಾಸಾಗ್ರಣೀರಹಂ ‖ ೩೦ ‖

ಶ್ರೀರಾಮನ ದೂತರಲ್ಲಿ ಶ್ರೇಷ್ಠನಾದ ನಾನು ಸಪ್ತಸಮುದ್ರಗಳಿಂದ ಸುತ್ತಲ್ಪಟ್ಟ ಈ ಭೂಮಂಡಲವನ್ನೇ ಕ್ಷಣಮಾತ್ರದಲ್ಲಿ ಮೇಲಕ್ಕೆ ಎತ್ತ ಬಲ್ಲೆನು. ಅಂದ ಮೇಲೆ ಈ ಅಲ್ಪವಾದ ಲಂಕಾಪಟ್ಟಣವು ನನಗೆಷ್ಟರದು? ಇದೇನು ಹೀಗೆ ಹೇಳುವೆ? ಎಂದರೆ ನಾನು ರಾಮದಾಸಾಗ್ರಣಿಯಾದ್ದರಿಂದ ಅವನ ಅನುಗ್ರಹದಿಂದ ಇದೆಷ್ಟರ ಮಾತ್ರವು? ಎಂಬದಾಗಿ ಧೈರ್ಯವನ್ನು ಹೇಳಿದನು.

ತಿಷ್ಠ ಮಾತ ಮುಹೂರ್ತಂ ಮೇ ಪೃಷ್ಠೇ ಮಂದರ ಸುಂದರೇ ‖
ಶತಯೋಜನ ವಿಸ್ತೀರ್ಣೇ ರಾಮಂ ಪ್ರೇಕ್ಷಿಷ್ಯಸೇಽಧುನಾ ‖ ೩೧ ‖

ಎಲೈ ! ತಾಯಿಯೇ ! ಮಂದರಪರ್ವತದಂತೆ ಸುಂದರವಾಗಿಯೂ, ಶತಯೋಜನ ವಿಸ್ತೀರ್ಣ

ವಾಗಿಯೂ, ಇರುವ ಈ ನನ್ನ ಬೆನ್ನಿನ ಮೇಲೆ ಒಂದು ಮಹೂರ್ತಕಾಲ ಕುಳಿತುಕ್ಕೊಂಡರೆ, ತಕ್ಷಣವೇ ಶ್ರೀ ರಾಮಚಂದ್ರನನ್ನು ನೋಡುವೆ? ಎಂದು ಹನುಮಂತನು ಹೇಳಿದನು.

ಇತ್ಯುಕ್ತೋವಾಚ ತನ್ವಂಗೀ ಜಾನೇ ಜ್ಞಾನಂ ಬಲಂಚ ತೇ ॥
ಲಂಕಾಂ ಸಪಾಲಾಂ ಸಂಚೂರ್ಣ್ಯ ತ್ವಂತು ಮಾಂ ನೇತುಮೀಶ್ವರಃ ॥ ೩೨ ॥

ಹೀಗೆ ಹೇಳಿದ ಹನುಮಂತನನ್ನು ಕುರಿತು ಕೃಶಾಂಗಿಯಾದ ಸೀತಾದೇವಿಯು ಎಲೈ ! ಕಪಿಶ್ರೇಷ್ಠನೆ! ನೀನು ಜ್ಞಾನದಲ್ಲಿಯೂ, ಬಲದಲ್ಲಿಯೂ, ಘಟ್ಟಿಗನಾಗಿರುತ್ತೀಯೆ ಎಂಬುದನ್ನು ಪಾಲಕರ ಸಮೇತವಾದ ಲಂಕಾಪಟ್ಟಣವನ್ನು ನೀನು ನಾಶಮಾಡಿ ನನ್ನನ್ನು ನನ್ನ ಸ್ವಾಮಿಯಾದ ಶ್ರೀ ರಾಮಚಂದ್ರನ ಸಮೀಪಕ್ಕೆ ಕರೆದು ಕ್ಕೊಂಡು ಹೋಗಲು ಶಕ್ತನಾಗಿರುತ್ತೀಯೆ ಎಂಬುದು ನಾನು ಬಲ್ಲೆನು.

ಕಿಂತು ಕಾಂತಸ್ಯಮೇಕೀರ್ತಿಃ ಸ್ಯಾದ್ದಶಾಸ್ಯನಿಷೂದನಾತ್ ॥
ಸ್ವಯಂ ಮಮಾಪ್ಯಾಹರಣಾ ತ್ತ್ಕಥಂ ವಾ ಮನ್ಯಸೇಭರ್ವಾ ॥ ೩೩ ॥

ನನ್ನನ್ನು ಕರೆದುಕೊಂಡು ಹೋಗಲು ನೀನು ಸಮರ್ಥನಾದಾಗ್ಯೂ ಕೂಡ, ನನ್ನ ಸ್ವಾಮಿಯಾದ ಶ್ರೀ ರಾಮಚಂದ್ರನು ರಾವಣನನ್ನು ಕೊಂದು ನನ್ನನ್ನು ಕರೆದುಕೊಂಡು ಹೋದನೆಂಬ ಕೀರ್ತಿಯು ಆತನಿಗೇ ಬರಲಿ; ನೀನು ನನ್ನನ್ನು ಕರೆದುಕೊಂಡು ಹೋಗುವುದರಿಂದ ಹೇಗೆ ತಾನೆ ಕೀರ್ತಿಭಾಜನನಾಗುವೆ?

ಏಕಾಂತೇ ಮಮಕಾಂತೇನ ವಾಯಸಸ್ಯಾ ಕ್ಷಿತಕ್ಷಣಂ ॥
ಮದ್ದರ್ಶನೇ ವದಾಭಿಜ್ಞಾಂ ಪ್ರಣಾಮಂಚ ನಿವೇದಯ ॥ ೩೪ ॥

ನಾನೂ ರಾಮನೂ ಏಕಾಂತದಲ್ಲಿರುವಾಗ ನನ್ನನ್ನು ಹಿಂಸೆ ಮಾಡಲು, ಬಂದ ಕಾಕಾಸುರನ ಕಣ್ಣನ್ನು ಶ್ರೀ ರಾಮನು ನಾಶವಾಡಿದ ಕಥೆಯನ್ನು ಮುಖ್ಯಗುರ್ತಾಗಿ ತಿಳಿಸೋಣ ಮತ್ತು ನನ್ನನ್ನು ಕಂಡ ಗುರ್ತಿಗಾಗಿ ನನ್ನ ನಮಸ್ಕಾರವನ್ನು ಆತನಿಗೆ ತಿಳಿಸು.

ವಿಶ್ವೇಶ್ವರೋ ನಚೇದೇನಂ ರಾವಣಂ ಮಾರಯಿಷ್ಯತಿ ॥
ಮಾಸಾತ್ಪೂರ್ವ.ಮಿಹಾಗತ್ಯ ಪ್ರಾಣಾ ತ್ಯಜ್ಯಾಮಿ ಮಾರುತೇ ॥ ೩೫ ॥

ಹೇ ! ಮಾರುತೀ ! ವಿಶ್ವೇಶ್ವರನಾದ ಶ್ರೀ ರಾಮಚಂದ್ರನು ಒಂದು ತಿಂಗಳವಳಗಾಗಿ, ಇಲ್ಲಿಗೆ ಬಂದು ಈ ರಾವಣನನ್ನು ಕೊಲ್ಲದೆ ಹೋಗುವ ಪಕ್ಷಕ್ಕೆ ನಾನು ಪ್ರಾಣಗಳನ್ನು ತ್ಯಾಗ ಮಾಡುತ್ತೇನೆಂಬದಾಗಿ ತಿಳಿಸು.

ಕುಶಲಂ ಕುಶಲೌ ಪೃಚ್ಛ ಭ್ರಾತರೌ ರಾಮಲಕ್ಷ್ಮಣೌ ॥
ಸುಗ್ರೀವ ಮಪಿ ಸಾಮಾತ್ಯಂ ಪಂಥಾನಃ ಸಂತುತೇಶಿವಾಃ ॥ ೩೬ ॥

ಶ್ರೀ ರಾಮ ಲಕ್ಷ್ಮಣರ ಕುಶಲವನ್ನು ನಾನು ಬಹಳವಾಗಿ ಕೇಳಿದೆನೆಂದು ತಿಳಿಸು. ಅಮಾತ್ಯಸಹಿತನಾದ (ಮಂತ್ರಿಯಿಂದ ಕೂಡಿದ) ಸುಗ್ರೀವನನ್ನು ನಾನು ಕೇಳಿದೆನೆಂಬದಾಗಿ ತಿಳಿಸು. ಮತ್ತು ನಿನಗೆ ಮಾರ್ಗವು ಸುಪಥವಾಗಲಿ.

ಇತ್ಯುಕ್ತ್ವಾ ದಿವ್ಯಮುದ್ದೀಪ್ತಂ ದದೌ ಚೂಡಾಮಣಿಂ ಸತೀ ॥
ಇಮಂ ದೇವಾಯ ದೇಹೀತಿ ಚಿನ್ಹಮೇಕಾಂತಿಕಂ ನಿಜಂ ॥ ೩೭ ॥

ಹೀಗೆ ಹೇಳಿ ದಿವ್ಯವಾದ ಉದ್ದೀಪ್ತವಾದ ಅಂದರೆ (ಅತ್ಯಂತ ಪ್ರಕಾಶಮಾನವಾದ) ಈ ಚೂಡಾಮಣಿಯನ್ನು ಶ್ರೀ ರಾಮಚಂದ್ರದೇವರಿಗೆ ಕೊಡಬೇಕೆಂತಲೂ, ಇದು ನಮ್ಮ ನಿಜವಾದ ಏಕಾಂತದ ಗುರುತು ! ಎಂಬದಾಗಿ ಹೇಳಿ, ಆ ಪತಿವ್ರತಾಶಿರೋಮಣಿಯಾದ ಸೀತಾದೇವಿಯು ಚೂಡಾಮಣಿಯನ್ನು ಕೊಟ್ಟಳು.

ಚೂಡಾಮಣಿಂ ತಂ ಸಂಗೃಹ್ಯ ಪ್ರಣಮ್ಯೋವಾಚ ಪಾವನಿಃ ॥
ರಾವಣಾರಿಂ ಪತಿಂ ದೇವಿ ತ್ವದ್ರಕ್ಷ್ಯಸ್ಯಚಿರಾದಿತಿ ॥ ೩೮ ॥

ಹನುಮಂತನು ಈ ಚೂಡಾಮಣಿಯನ್ನು ತೆಗೆದುಕೊಂಡು ಸೀತಾದೇವಿಗೆ ನಮಸ್ಕಾರಮಾಡಿ, ಹೇ ! ದೇವಿಯೇ ! ನಿನ್ನಪತಿಯಾದ ರಾವಣಾರಿಯಾದ ಶ್ರೀ ರಾಮಚಂದ್ರನನ್ನು ಕ್ಷಿಪ್ರದಲ್ಲಿಯೇ ಕಾಣುತ್ತೀಯೆ ಎಂದನು.

ಪಾವನಿಃ ಪರ್ವತಾಕಾರಃ ಪರಿಕ್ರಮ್ಯ ಪ್ರಣಮ್ಯತಾಂ ॥
ತತಃ ಸ್ಥಳಾಂತರಂ ಪ್ರಾಪ್ಯ ಕಾರ್ಯಶೇಷ ಮಚಿಂತಯತ್ ॥ ೩೯ ॥

ವಾಯುಪುತ್ರನಾದ ಹನುಮಂತನು ಪರ್ವತಾಕಾರನಾಗಿ ಬೆಳೆದು ಸೀತಾದೇವಿಗೆ ಪ್ರದಕ್ಷಿಣ

ನಮಸ್ಕಾರವನ್ನು ಮಾಡಿ, ಸ್ಥಳಾಂತರವನ್ನು ಹೊಂದಿ ಕಾರ್ಯಶೇಷವನ್ನು ಆಲೋಚಿಸಿದನು.

ಸ್ವದೂತಸ್ಯ ವಿಲೀನತ್ವಂ ನರಾಮುಸ್ಯ ಯಶಸ್ಕರಂ ‖
ತಸ್ಮಾದಾವಿರ್ಭವನ್ ಶತ್ರೂನ್ ಹತ್ವಾಸ್ಯಾಂ ರಾಘವಾರ್ಚಕಃ ‖ ೪೦ ‖

ಶ್ರೀ ರಾಮಚಂದ್ರದೇವರ ದೂತನು ಹೀಗೆ ವಿಲೀನವಾಗಿರುವುದು ಶ್ರೀ ರಾಮಚಂದ್ರದೇವರಿಗೆ ಯಶಸ್ಕರವಲ್ಲವು- ಆದ್ದರಿಂದ ಶತ್ರುವನ್ನು ಕೊಂದು ಶ್ರೀ ರಾಮಚಂದ್ರನ ಪೂಜೆಯನ್ನು ಮಾಡಬೇಕು. ಎಂಬದಾಗಿ ಆಲೋಚಿಸಿದನು.

ಇತಿ ಸಂಚಿಂತ್ಯ ಹನುಮಾನ್ ಕೋಪಯನ್ ರಾಕ್ಷಸೇಶ್ವರಂ ‖
ವನಂ ವಿನಾಶಯಾಮಾಸ ವಿನಾ ತಂ ಶಿಂಶುಪಾತರುಂ ‖ ೪೧ ‖

ಈ ಪ್ರಕಾರವಾಗಿ ಆಲೋಚಿಸಿ ಹನುಮಂತನು ರಾಕ್ಷಸೇಶ್ವರನಾದ ರಾವಣನಿಗೆ ಕೋಪ ಬರುವಂತೆ ಮಾಡಬೇಕೆಂಬದಾಗಿ ಆ ಶಿಂಶುಪಾವೃಕ್ಷವನ್ನು ಮಾತ್ರ ಬಿಟ್ಟು ಉಳಿದ ವನವನ್ನೆಲ್ಲಾ ನಾಶಮಾಡಿದನು.

ಖರ್ಜೂರಂ ತಿಂತ್ರಿಣೀಂಚಾಮ್ರಂ ತಿಲಕಂ ಬಿಲ್ವಮರ್ಜುನಂ ॥
ಅಶ್ವತ್ಥಂ ಚಂಪಕಂ ಚೂತಂ ಜಂಬು ನಿಂಬ ಕದಂಬಕಾ೯ ॥ ೪೨ ॥

ದಿವ್ಯವಾದ ಖರ್ಜೂರ, ತಿಂತ್ರಿಣೀ, ಮಾವಿನಗಿಡ, ತಿಲಕವೃಕ್ಷ, ಬಿಲ್ವ, ಅರ್ಜುನವೃಕ್ಷ, ಅಶ್ವತ್ಥ, ಚಂಪಕ, ಚೂತ, ಜಂಬು, ನಿಂಬ, ಕದಂಬ, ಮೊದಲಾದದ್ದನ್ನೂ:—

ಕಪಿತ್ಥ, ಕದಳೀ ಭೂರ್ಜ ತಮಾಲಾ೯ ಗುಗ್ಗುಲಾ೯ ವಟಾ೯ ॥
ಆಮಲಕಾ೯ ನಾರಿಕೇಳಾ ಭಲ್ಲ ಮಲ್ಲಿಕ ಚಂದನಾ೯ ॥ ೪೩ ॥

ಕಪಿತ್ಥ, ಕದಳೀ, ಭೂರ್ಜ, ತಮಾಲ, ಗುಗ್ಗುಳ, ವಟವೃಕ್ಷ, ಆಮಲಕ, ನಾರಿಕೇಳ ಭಲ್ಲ, ಮಲ್ಲಿಕ, ಚಂದನಾದಿಗಳನ್ನೂ:—

ಘನಸಾಗರುತಾಳಾಂಶ್ಚ ದೇವದಾರ್ವ್ಯಾದಿಕಾ೯ ದ್ರುಮಾ೯ ॥
ನಾನಾಪುಷ್ಪ ಸುವಲ್ಲೀಭಿಃ ಯುಕ್ತಾಂಶ್ಚಾನಾಶಯಾತ್ಕಪಿಃ ॥ ೪೪ ॥

ದಿವ್ಯವಾದ ಘನಸ, ಅಗುರು, ತಾಳಾದಿಗಳನ್ನೂ, ದೇವದಾರು ವೃಕ್ಷವೇ ಮೊದಲಾದ ವೃಕ್ಷಗಳನ್ನೂ, ನಾನಾವಿಧವಾದ ಹೂವಿನಗಿಡಗಳನ್ನೂ, ಲತಾಗಳೊಂದಿಗೆ ಕೂಡಿದ ದಿವ್ಯವಾದ ಹೂವಿನಗಿಡಗಳನ್ನೂ ನಾಶಮಾಡಿದನು.

ಸರಃಕಮಲ ಕಲ್ಹಾರಾ್ ಕರೀವ ಕಮಲೇಕ್ಷಣಃ ॥
ಪಾದಘಾತೇನಲಾಂಗೂಲ ಹಸ್ತಘಾತೇನಚೋರಸಾ ॥ ೪೫ ॥

ಮದಿಸಿದ ಆನೆಯು ಕಮಲ ಕಲ್ಹಾರಗಳಿಂದ ಕೂಡಿದ, ಸರೋವರವನ್ನು ಕದಡುವಂತೆ ಕಮಲದಂತೆ ಕಣ್ಣುಗಳುಳ್ಳ ಹನುಮಂತನು ಕಾಲಿನಿಂದಲೂ, ಬಾಲದಿಂದಲೂ, ಕೈಗಳಿಂದಲೂ, ಎದೆಯಿಂದಲೂ, ಸಹ ಆ ಅಶೋಕವನವನ್ನು ನಾಶಮಾಡಿದನು.

ಲಾಂಗೂಲೇನ ಪದಾಂಗುಳ್ಯಾ ಜಾನುನಾಚಹರೀಶ್ವರಃ ॥
ನಿಪಾತ್ಯೋತ್ಪತ್ಯ ಸಂಭಿದ್ಯ ವಿಭಿಂದ್ಯೋನ್ಮೂಲ್ಯಚ ದ್ರುಮಾ್–

ಮಾರುತಿರ್ಮಾರುತ ಇವ ರಾವಣೋದ್ಯಾನ ಮಾಕ್ಷಿಪತ್ ॥ ೪೬ ॥

ಬಾಲದಿಂದಲೂ. ಕಾಲಿನ ಬೆರಳಿನಿಂದಲೂ, ಮೊಣಕಾಲಿನಿಂದಲೂ, ಹನುಮಂತನು ಮರಗಳನ್ನು ಕೆಡವಿ, ಗಾಳಿಯು ಹೇಗೆ ಮರಗಳನ್ನು ಕೆಡವಿ ನಾಶಮಾಡುತ್ತವೋ ಹಾಗೆ ಈ ಹನುಮಂತನು ಮರಗಳನ್ನು ಮುರಿದು ಕತ್ತರಿಸಿ ಮೇಲಕ್ಕೆಸೆದು ಬುಡಸಹಿತವಾಗಿ ಕಿತ್ತು ರಾವಣನ ಉದ್ಯಾನವನವನ್ನು ನಾಶಮಾಡಿದನು.

ಅಘೌಘಂ ರಾಮನಾಮೇವ ಪದ್ಮಷಂಡಮಿವದ್ವಿಪಃ ॥
ತೂಲಮಗ್ನಿರಿವಾಽಽರಾಮಂ ರಾಮದೂತೋ ಕ್ಷಿಣಾಕ್ಷಣಾತ್ ॥ ೪೭ ॥

ರಾಮನಾಮ ಸ್ಮರಣೆಯಿಂದ ಪಾಪಗಳರಾಶಿಯು ಹೇಗೆ ನಾಶವಾಗುತ್ತದೋ, ಮದಿಸಿದ ಆನೆಯು ಪದ್ಮಗಳ ವನಗಳನ್ನು ಹೇಗೆ ನಾಶಮಾಡುತ್ತದೋ, ಬೆಂಕಿಯು ಹತ್ತಿಯರಾಶಿಯನ್ನು ಹೇಗೆ ನಾಶಮಾಡುವುದೋ ಹಾಗೆ ರಾಮದೂತನಾದ ಹನುಮಂತನು ಈ ರಾವಣನ ಉದ್ಯಾನವನವನ್ನು ಕ್ಷಣಮಾತ್ರದಲ್ಲಿನಾಶಮಾಡಿದನು.

ಸಿಂಹನಾದೇನ ಮಹತಾ ಲಂಕಾಮುತ್ಕಂಪಯನ್ ಕಪಿಃ ॥

ಯುದ್ಧಮದ್ಭುತ ಮನ್ವಿಚ್ಛ ಆರುರೋಹಾಥತೋರಣಂ ‖ ೪೮ ‖

ಹನುಮಂತನು ಅದ್ಭುತವಾದ ಯುದ್ಧವನ್ನು ಅಪೇಕ್ಷಿಸುವವನಾಗಿ ತನ್ನ ಸಿಂಹನಾದದಿಂದ ಲಂಕಾ ಪಟ್ಟಣವನ್ನು ಗಡಗಡನೆ ನಡುಗಿಸುತ್ತಾ ತೋರಣ ಸ್ಥಂಭವನ್ನು ಹತ್ತಿ ಕೂತುಕೊಂಡನು.

ಉದ್ಬುದ್ಧಾಸ್ತೇನ ನಾದೇನ ದೃಷ್ಟ್ವಾತಂ ಪರ್ವತೋಪಮಂ ‖
ರಾಕ್ಷಸ್ಯ ಶ್ಚಕಿತಾಃ ಸಾಮ್ನಾ ಮಾಯಾಸೀತಾಮಥಾಬ್ರುವನ್ ‖ ೪೯ ‖

ಈ ಸಿಂಹನಾದದಿಂದ ಎಬ್ಬರಿಸಲ್ಪಟ್ಟ ರಾಕ್ಷಸ ಸ್ತ್ರೀಯರುಗಳು ಪರ್ವತಸದೃಶವಾಗಿ ಶರೀರವುಳ್ಳ ಹನುಮಂತನನ್ನು ನೋಡಿ ಆಶ್ಚರ್ಯಪಟ್ಟವರಾಗಿ ಸಾಮೋಪಾಯದಿಂದ ಸೀತಾದೇವಿಯನ್ನು ಕುರಿತು ಮಾತನಾಡಿದರು.

ಕಾಂತೇ ಕೋಯಂ ಕಪಿಶ್ರೇಷ್ಠಃ ಯಸ್ತೇ ಸಂವಾದ ಗೋಚರಃ ‖
ಇತ್ಯುಕ್ತ್ವಾ ಸಾಬ್ರವೀದ್ಬಾಲಾ ಮಾಯೇಯಂ ರಕ್ಷಸಾಂ ಧ್ರುವಂ ‖ ೫೦ ‖

ಎಲೈ ! ಸೀತಾದೇವಿಯೇ ! ನಿನ್ನೊಡನೆ ಮಾನಾಡುತ್ತಿದ್ದ ಕಪಿಶ್ರೇಷ್ಠನು ಯಾರು ? ಎಂದು ರಾಕ್ಷಸ ಸ್ತ್ರೀಯರು ಕೇಳಲು ಆ ಸೀತಾದೇವಿಯು ಏನೂ ತಿಳಿಯದವಳಂತೆ ನಿಜವಾಗಿಯೂ, ಇದು ರಾಕ್ಷಸರ ಮಾಯೆಯೇ ಇರಬೇಕು? ಎಂದು ಉತ್ತರವನ್ನು ಕೊಟ್ಟಳು.

ಮಾಯಾವಿನಾಂ ಗತಿರ್ಲೋಕೇ ಜಾನಂತ್ಯೇವಹಿ ಮಾಯಿನಃ ॥
ಅಹಿರೇವ ಹ್ಯಹೇಃ ಪಾದಾ್ ವಿಜಾನಾತಿ ನಚಾಽಪರಃ ॥ ೫೧ ॥

ಎಲೈ ! ಸ್ತ್ರೀಯರೇ ! ಕೇಳಿ ! ಲೋಕದಲ್ಲಿ ವಂಚಕರ ಮಾರ್ಗವನ್ನು ವಂಚಕರೇ,ಬಲ್ಲವರಾಗಿದ್ದಾರೆ ಹೇಗೆಂದರೆ:— ಹಾವಿನ ಪಾದಗಳನ್ನು ಹಾವೇ ಬಲ್ಲುವೆ ವಿನಹ ಮತ್ತೊಬ್ಬರು ಅರಿಯರು.

ಇತ್ಯಸ್ಯಾವಚನಂ ಶ್ರುತ್ವಾ ರಾಕ್ಷಸ್ಯೋವಿದ್ರುತಾದ್ರುತಂ ॥
ನ್ಯವೇದಯನ್ನುದಂ ತಂ ತಂ ಲಂಕಾಪಾಲಾಯ ಶಂಕಿತಾಃ ॥ ೫೨ ॥

ಈ ರೀತಿಯಾಗಿ ಹೇಳಿದ ಸೀತಾದೇವಿಯ ಮಾತನ್ನು ಕೇಳಿ ರಾಕ್ಷಸ್ತ್ರೀಯರುಗಳು ಸಂಶಯದಿಂದ

ಓಡಿಹೋಗಿ, ಈ ಸಮಾಚಾರವನ್ನು ರಾವಣನಿಗೆ ಜಾಗ್ರತೆಯಾಗಿ ಹೇಳಿದರು.

ತದಾಕರ್ಣ್ಯ ಭೃಶಂ ಕ್ರುದ್ಧೋ ರಾವಣೋಥ ಸಮಾದಿಶತ್ ॥
ಅವಧ್ಯಾನ್ ಶಂಕರವರಾತ್ ಕಿಂಕರಾನ್ನಾಮ ರಾಕ್ಷಸಾನ್ ॥ ೫೩ ॥

ಆ ಮಾತನ್ನು ಕೇಳಿದ ರಾವಣನು ಬಹಳವಾಗಿ ಕೋಪಿಸಿಕೊಂಡು ರುದ್ರದೇವರ ವರದಿಂದ ಅವಧ್ಯರಾದ ಕಿಂಕರರೆಂಬ ರಾಕ್ಷಸರನ್ನು ಅಪ್ಪಣೆ ಮಾಡಿದನು.

ಸಾಽಶೀತಿ ಕೋಟಿಯೂಥೇಶಂ ಸಪುರೋಗಾಷ್ಟಕಾಯುತಂ ॥
ಆವಾರ ಹರಿಂ ವೀರಂ ತದ್ಬಲಂ ಲೋಕಭೀಷಣಂ ॥ ೫೪ ॥

(88 ಕೋಟಿ) ಸೈನ್ಯವನ್ನು ರಾವಣನು ಕಳುಹಿಸಲು ಲೋಕಭಯಂಕರವಾದ ಆ ಸೈನ್ಯವು ವೀರನಾದ ಹನುಮಂತನನ್ನು ಮುತ್ತಿತು.

ರಕ್ಷೋ ಜೀಮೂತ ಸಂಘಾನಾಂ ಊರ್ಜಿತಾನಾಂ ಪ್ರಗರ್ಜತಾಂ ॥

ನಾನಾಹೇತಿಮಯೈರ್ವರ್ಷೈಃ ನಾಚಲದ್ವಾನರಾಚಲಃ ॥ ೫೫ ॥

ಮೇಲೆ ಬಿದ್ದು ಬರುತ್ತಿರುವ ರಾಕ್ಷಸರೆಂಬ ಮೇಘಸಮೂಹದಿಂದ ಗರ್ಜಿಸಲ್ಪಟ್ಟವನಾಗಿ, ನಾನಾ ವಿಧವಾದ ಅಸ್ತ್ರ ಶಸ್ತ್ರಗಳೆಂಬ ಮಳೆಯಿಂದ ತೋಯಿಸಲ್ಪಟ್ಟವನಾಗಿದ್ದ, ಹನುಮಂತನು ಪರ್ವತದಂತೆ ಚಲಿಸದೇ ನಿಂತು ಬಿಟ್ಟನು.

ಆವಿಧ್ಯ ಭುವಿಲಾಂಗೂಲಂ ತಿರ್ಯಕ್ ಸಂಪ್ರೇಕ್ಷ್ಯ ರಾಕ್ಷಸಾನ್ ॥
ಸ್ಫುಟಮಾಸ್ಫೋಟ್ಯ ಹನುಮಾನ್ ಉಚ್ಚೈರೇವ ಮುದಾಹರತ್ ॥ ೫೬ ॥

ಭೂಮಿಯಲ್ಲಿ ಬಾಲವನ್ನು ಸಿಲ್ಲಿಸಿ ರಾಕ್ಷಸರನ್ನು ತಿರ್ಯಗ್ಜಂತುಗಳೋಪಾದಿಯಲ್ಲಿ, ನೋಡಿ ಅವರನ್ನು ಮೇಲಕ್ಕೆ ಎತ್ತಿ, ನೆಲಕ್ಕೆ ಹೊಡೆದು ಮುಂದೆ ಹೇಳುವಂತೆ ಘಟ್ಟಿಯಾಗಿ ಹನುಮಂತನು ಕೂಗಿದನು.

ಸ್ವಾಮೀ ರಾಮೋ ಜಯತಿ ಜಗತಿ ಶ್ರೀಧರೋಽನಂತವೀರ್ಯ ।
ಸ್ತಂ ಸೌಮಿತ್ರಿಃ ಪ್ಲವಗ ವೃಷಭ ಶ್ಚಾನು ವೃತ್ತೌ ವಿವೃತ್ತೌ ॥

ಸೀತಾಂ ನತ್ವಾ ರಣ ಮುಖಮಿತೋ ನನ್ವಹಂ ರಾಮದೂತೋ ।
ನಾಲಂ ನಾಲಂ ಮುಹುರಹಹ ಮೇ ರಾವಣಾನಾಂ ಸಹಸ್ರಂ ॥ ೫೭ ॥

ಇತಿ ಶ್ರೀಮನ್ನಾರಾಯಣ ಪಂಡಿತಾಚಾರ್ಯ ಕೃತೌ ಶ್ರೀಮತ್ಸಂಗ್ರಹರಾಮಾಯಣೇ
ಸುಂದರಕಾಂಡೇ ರಾಮಾಂಕೇ ಪಂಚಮಸ್ಸರ್ಗಃ ॥ ಶ್ರೀ ರಾಮಚಂದ್ರ ಪ್ರೀಯತಾಂ ॥

— 0 —

"ನಮ್ಮ ಸ್ವಾಮಿಯಾದ ಶ್ರೀಧರನಾದ ಅತ್ಯಂತ ಬಲಿಷ್ಠನಾದ ಸೌಮಿತ್ರಿ ಮತ್ತು ಸುಗ್ರೀವಸಹಿತನಾದ ಶ್ರೀ ರಾಮಚಂದ್ರನು ಹದಿನಾಲ್ಕು ಲೋಕಗಳಲ್ಲಿಯೂ, ಜಯಶಾಲಿಯಾಗಲಿ ಎಂದು ಹೇಳಿ ಹನುಮಂತನು ಸೀತಾದೇವಿಗೆ ಸಾಷ್ಟಾಂಗ ನಮಸ್ಕಾರ ಮಾಡಿ, ರಣಾಭಿಮುಖವಾಗಿ ತಿರುಗಿ ರಾಮದೂತನಾದ ನನಗೆ ಇಂಥಾ ರಾವಣರು ಸಹಸ್ರ ಜನ ಇದ್ದರೂ ಸಹ ನನಗೆ ಲಕ್ಷ್ಯವಿಲ್ಲವು" ಎಂದು ಪುನಃ ಪುನಃ ಹೇಳುತ್ತಾ ಮುಂದೆ ನುಗ್ಗಿದನು.

ಇತಿ ಶ್ರೀಮತ್ಸಂಗ್ರಹರಾಮಾಯಣದ ಸುಂದರಕಾಂಡದ ೨ಃಮಾಂಕದ ಐದನೆಯಸರ್ಗದಲ್ಲಿ
ಮುಳಬಾಗಲು ಅವರೂರು ನಂದಗುಡಿ ಪೂರ್ಣಪ್ರಜ್ಞಾಚಾರ್ಯಸುತ
ಆನಂದತೀರ್ಥಾಚಾರ್ಯರವರಿಂದ ವಿರಚಿತವಾದ ಕರ್ಣಾಟಕಾಭಿಪ್ರಾಯ ಸಮಾಪ್ತವು.

— ೦ —

ಷಷ್ಠಸ್ಸರ್ಗಃ ಪ್ರಾರಂಭಃ ॥ ಹರಿಃ ॥ ಓಂ ॥

ಶ್ಲೋ ॥ ವಾಣೀತಿವಾಣೀ ಪತಿನಂದನಸ್ಯ ವ್ಯಕ್ತಂಚಚಾರಾನುಸಭಂ ಸುರಾಣಾಂ ॥
ಪಿಯದ್ಭಜೇಯುಃ ಕಥಮನ್ಯಥಾತೇ ವೈಮಾನಿಕಾ ಯುದ್ಧದಿದೃಕ್ಷಚಾತ್ರ ॥ ೧ ॥

ತಾ ॥ ವಾಯುಪುತ್ರನಾದ ಹನುಮಂತದೇವರ ಪರಾಕ್ರಮಯುಕ್ತವಾದ ವಾಣಿಯು ದೇವತೆಗಳು ಸಂಚಾರ ಮಾಡತಕ್ಕ ಅಂತರಿಕ್ಷ ಪ್ರದೇಶವನ್ನು ಕುರಿತು ವ್ಯಾಪಿಸಿತ್ತು. ಹೀಗೆ ವ್ಯಾಪಿಸಿದುದನ್ನು ಕೇಳಿ ದೇವತೆ

ಗಳೆಲ್ಲರೂ, ಯುದ್ಧವನ್ನು ನೋಡಬೇಕೆಂಬ ಅಪೇಕ್ಷೆಯಿಂದ ವಿಮಾನಗಳಲ್ಲಿ ಕುಳಿತು ಅಂತರಿಕ್ಷದಲ್ಲಿ ನಿಂತರು

ತಳಪ್ರಹಾರೇಣ ಬರ್ಹೂನಿಹತ್ಯ ಸತೋರಣಸ್ಥಂ ಪರಿಘಂ ದಧದ್ರಾಕ್ ॥
ಶಿಷ್ಟಾನಶಿಷ್ಟಾಂಶ್ಚ ನಿಹತ್ಯತೇನ ಪ್ರಾಸಾದಮಾಸಾದ್ಯ ಮುಹುರ್ಜಗರ್ಜ ॥ ೨ ॥

ಹನುಮಂತನು ತನ್ನ ಅಂಗೈಯಿಂದ ಬಹು ಜನರನ್ನು ಕೊಂದು ಅಶೋಕವನದ ತೋರಣ ಕಂಭದ ಲಾಲವುಂಡಿಗೆಯನ್ನು ಜಾಗ್ರತೆಯಾಗಿ ತೆಗೆದುಕ್ಕೊಂಡು ತನ್ನ ಎದುರಿಗೆ ಬಂದ ಸಮಸ್ತ ರಾಕ್ಷಸರನೂ ಕೊಂದು ಒಂದಾನೊಂದು ಉಪ್ಪರಿಗೆ ಮನೆಯ ಮೇಲೆ ಕೂತುಕ್ಕೊಂಡು ಘಟ್ಟಿಯಾಗಿ ಘರ್ಜಿಸಿದನು.

ಸ್ತಂಭಂಚ ತತ್ರೋದಹರ್ದ ಹನೂರ್ಮಾ ಸಚೈತ್ಯಪಾಲಾಂಶ್ಚ ಜಘಾನತೇನ ॥
ಪ್ರಾಸಾದ ಮಪ್ಯಂಬರಗೋ ದದಾಹ ಸ್ತಂಭಾನಲೇನಾಯ ಮುವಾಚ ಚೋಚ್ಚೈಃ ॥ ೩ ॥

ಅಲ್ಲಿನ ಕಂಭವನ್ನು ಜಾಗ್ರತೆಯಾಗಿ ಕಿತ್ತು ತೆಗೆದು ಅದರಿಂದ ಆ ಪ್ರಾಸಾದವನ್ನು ಕಾದುಕೊಂಡಿರುವ ದೂತರನ್ನು ಕೊಂದು ಅಂತರಿಕ್ಷಪ್ರದೇಶದಲ್ಲಿ ವ್ಯಾಪಿಸಿಕೊಂಡಿರುವ ಆ ಪ್ರಾಸಾದವನ್ನೂ, ಆ ಸ್ತಂಭದ

ಮೇಲಿರುವ ಬೆಂಕಿಯಿಂದಲೇ ಆ ಪ್ರಾಸಾದವನ್ನು ಸುಟ್ಟು ಘಟ್ಟಿಯಾಗಿ ನಾತನಾಡಿದನು.

ಯಂಮಾದೃಶಾನಾಂ ಭಜತೇ ಸಹಸ್ರಂ ರಾಮಃ ಸ ಸುಗ್ರೀವ ಗುರುಃ ಪತಿ ರ್ಮೇ ॥
ಕಂಡೂತಿಚಂಡೋ ಮಮ ಬಾಹುದಂಡೋ ವಿಜೃಂಭತೇ ವೈರಿಣಮಾಹ್ವಯಾಮಿ ॥ ೪ ॥

"ನನ್ನಂಥಾ ಪರಾಕ್ರಮಿಗಳ ಎಷ್ಟೋ ಸಹಸ್ರವು ಯಾವ ರಾಮಚಂದ್ರನನ್ನು ಭಜಿಸುತ್ತಾ ಇವೆಯೋ ಮತ್ತು ಸುಗ್ರೀವ ಸಹಿತನಾದ ರಾಮನು ನನಗೆ ಗುರುವೂ, ಸ್ವಾಮಿಯೂ,ಸಹ ಆಗಿದ್ದಾನೆ. ನನ್ನ ಬಾಹುದಂಡವು ಯುದ್ಧಾಸಕ್ತಿಯಿಂದ ತಿನಸು ಹತ್ತಿ, ವಿಜೃಂಭಿಸುತ್ತಿದೆ ! ಯಾರಾದರೂ ಶತೃಗಳಿದ್ದರೆ ಯುದ್ಧಕ್ಕೇ ಬನ್ನೀ !! " ಎಂದು ಹನುಮಂತನು ಕೂಗಿದನು.

ಪ್ರಗರ್ಜತೀತ್ಥಂ ಹನುಮತ್ಯುದಾರೇ ಪ್ರಹಸ್ತ ಪುತ್ರ ಪ್ರಮುಖಾ ಪ್ರಚಂಡಾ ॥
ಸಮಾದಿಶತ್ಸಪ್ತ ಶಿಖೋಪಮಾನಾ ನ್ಸಂಮಂ ತ್ರಿಪುತ್ರಾ ಕುಪಿತೋ ದಶಾಸ್ಯಃ ॥ ೫ ॥

ಈ ಪ್ರಕಾರವಾಗಿ ಹನುಮಂತನು ಗರ್ಜಿಸುತ್ತಿರಲು ಕೋಪಿತನಾದ ರಾವಣನು ಪ್ರಚಂಡರಾದ ಏಳು

ಅಗ್ನಿಗಳಂತೆ ಪ್ರಕಾಶಿಸುತ್ತಿರುವ, ಪ್ರಹಸ್ತನ ಮಕ್ಕಳಾದ ಮುಖ್ಯರಾದ ರಾಕ್ಷಸರನ್ನು ಈ ಹನುಮಂತನ ಮೇಲೆ ಯುದ್ಧಕ್ಕಾಗಿ ಕಳುಹಿಸಿದರು-

ಪ್ರಹಸ್ತ ಪುತ್ರ ಸ್ತ್ವಥ ಜಂಬುಮಾಲೀ ಪ್ರಾಭಂಜನಿಂ ಪ್ರಾಪ್ಯ ಸುವರ್ಣ ಮಾಲೀ॥
ವವರ್ಷ ಬಾಣಾ ಖರಯುಕ್ತಯಾನಃ ಶಿಲಾಂ ವಿಶಾಲಾಂ ಹನುಮಾ ಮುಮೋಚ ॥೬॥

ಅನಂತರದಲ್ಲಿ ಪ್ರಹಸ್ತನ ಮಗನಾಗಿಯೂ, ಸುವರ್ಣ ಮಾಲೆಯಿಂದಲಂಕೃತನಾಗಿಯೂ ಇರುವ' ಜಂಬುಮಾಲಿಯೆಂಬ ರಾಕ್ಷಸನು, ಕತ್ತೆಗಳನ್ನು ಕಟ್ಟಿರುವ ರಥದಲ್ಲಿ ಕೂತು, ಹನುಮಂತನ ಸಮೀಪಕ್ಕೆ ಬಂದು' ಬಾಣಗಳ ಮಳೆಗಳನ್ನು ಸುರಿಸಿದನು. ಹನುಮಂತನು ವಿಶಾಲವಾದಬಂಡೆಗಳನ್ನು ಜಂಬುಮಾಲಿಯಮೇಲೆಸೆದನು

ಶರೈಃ ಶಿಲಾಯಾಂ ಶಕಲೀ ಕೃತಾಯಾಂ ಸಃಲೇಚ ಮುಕ್ತೇ ರಿಪುಣಾನಿ ಕೃತ್ತೇ ॥
ತೇನೈವ ವೀರಃ ಪರಿಘೇಣ ಪಾಪಂ ಸಂಚೂರ್ಣಯಾಮಾಸ ಸಯಾನಮೇನಂ ॥ ೭ ॥

ಹನುಮಂತನು ಪ್ರಯೋಗಿಸಿದ ಬಂಡೆಯು, ಜಂಬುಮಾಲಿಯ ಭಾಣದಿಂದೊಡೆಯಲ್ಪಟ್ಟು, ಚೂರು

ಚೂರಾಗಲು, ಪುನಃ ಹನುಮಂತನು ಸಾಲ ವೃಕ್ಷವನ್ನು ಕಿತ್ತು, ಅವನ ಮೇಲೆ ಪ್ರಯೋಗಿಸಿದನು. ಆ ಮರವೂ ಶತೃವಿನಿಂದ ಕತ್ತರಿಸಲ್ಪಡಲು, ಶತೃವಿನ ಕೈಲಿದ್ದ ಪರಿಘಾಯುಧವನ್ನೇ ಕಿತ್ತುಕೊಂಡು, ಅವನನ್ನು ರಥ ಸಮೇತ ವಾಗ ಪುಡಿ ಪುಡಿ ಮಾಡಿದನು.

ರಣೋತ್ಕಟಾರ್ ಮಂತ್ರಿ ಸುತಾನವಾಪ್ತಾ ನಸ್ತ್ಯಾನ್ಸ ಸೈನ್ಯಾ ನ್ಯಹನ ದ್ಧನೂರ್ಷಾ ॥.
ತಲೇನ ಕಾಂಶ್ಚಿ ಶ್ಚರಣೇನ ಕಾಂಶ್ಚಿ ದನ್ಯಾ ನ್ನಖೈಃ ಕಾಂಶ್ಚನ ನಾದ ಮಾತ್ರಾತ್ ॥ ೮ ॥

ಯುದ್ಧಾಪೇಕ್ಷಿಗಳಾಗಿ ·ಮೇಲೆ ಬಿದ್ದು ಬರುತ್ತಿರುವ, ಮಂತ್ರಿ ಪುತ್ರರನ್ನೂ, ಸೈನ್ಯ ಸಮೇತರಾದ ಇತರರನ್ನೂ ಸಹ ಹನುಮಂತನು, ಅಂಗೈಯಿಂದ ಕೆಲವರನ್ನೂ, ಕಾಲಿನಿಂದ ಕೆಲವರನ್ನೂ, ಉಗುರಿನಿಂದ ಕೆಲವರನ್ನೂ, ಸಿಂಹನಾದ ಮಾತ್ರದಿಂದಲೇ ಕೆಲವರನ್ನೂ ಸಹ ಕೊಂದು ಹಾಕಿದನು.

ಸಂಚಿಂತ್ಯ ಕಿಂಚಿತ್ಸನಿಶಾಚರೇಶೋ ದುರ್ಧರ್ಷ ಯೂಪಾಕ್ಷ ವಿರೂಪ ಪೂರ್ವಾ ॥
ಸಭಾಸ ಕರ್ಣ ಪ್ರಘಸಾನುವಾಚ ಸೇನಾಗ್ರ ನೇತೄನಿತಿ ಪಂಚವೀರಾ ॥ ೯ ॥

ಆ ರಾಕ್ಷಸೇಂದ್ರನಾದ ರಾವಣನು ಸ್ವಲ್ಪ ಆಲೋಚನೆ ಮಾಡಿ, ರಣೋತ್ಕಟರಾದ ದುರ್ಧರ್ಷ, ಯೂಪಾಕ್ಷ, ವಿರೂಪಾಕ್ಷ, ಭಾಸಕರ್ಣ, ಪ್ರಘಸ, ಇವರೇ ಮೊದಲಾದ ಸೇನಾಧಿಪತಿಗಳೈವರನ್ನು ಕುರಿತು ಮಾತನಾಡಿದನು.

ಸ್ಯುರ್ವಾಲಿಸುಗ್ರೀವ ಮುಖಾಃ ಕಪೀಂದ್ರಾಃ ಲೋಕಾಧಿಕಾನೇ ದೃಶವಿಕ್ರಮಾಸ್ತೇ ||
ಇದಂ ಮಹದ್ಭೂತ ಮಹೋಕ್ಷಯಾಯ ಪ್ರಾಪ್ತಂ ಹಿ ನಃ ಸಂಪ್ರತಿಗೃಹ್ಯತಾಂತತ್ ||೯೦||

“ ವಾಲಿ ಸುಗ್ರೀವ ಮೊದಲಾದ ಕಪಿಶ್ರೇಷ್ಠರುಗಳು ಲೋಕದಲ್ಲಿ ಅತ್ಯಂತ ಬಲಿಷ್ಠರಾಗಿದ್ದರು. ಆದರೂ ಅವರಲ್ಲಿ ಹನುಮಂತನಷ್ಟು ಬಲವಿರಲಿಲ್ಲ. ಈ ಮಹದ್ಭೂತವು ನಮ್ಮ ನಾಶಕ್ಕೋಸ್ಕರವಾಗಿಯೇ ಬಂದಿದೆಯೋ ಏನೋ? ಈ ಸಾಧ್ಯವಾದ ಭೂತವನ್ನು ಜಾಗ್ರತೆಯಾಗಿ ಹಿಡಿದುಕೊಂಡು ಬನ್ನಿರಿ ” ಎಂದು ಅಪ್ಪಣೆ ಮಾಡಿದನು.

ಇತೀರಿತಾಸ್ತೇ ಚತುರಂಗಿಣೀಂ ಸ್ವಾಂ ಚಮೂ ಮುಪಾನೀಯ ರಣಾಭಿಯಾತಾಃ ||

ಪರೀತ್ಯ ದೀಪ್ತೇ ಪವಮಾನ ಸೂನೌ ಶರಾ ನ್ನಿಶಾತಾ ನಕಿರ ಕರಾಳಾ॥ ೧೮ ॥

ಈ ರೀತಿಯಾಗಿ ಅಪ್ಪಣೆ ಹೊಂದಿದಂಥ ಆ ಸೇನಾಪತಿಗಳೈವರೂ, ತಮ್ಮ ತಮ್ಮ ಚತುರಂಗ ಸೈನ್ಯವನ್ನು ಒಟ್ಟುಗೂಡಿಸಿ, ರಣಾಭಿಮುಖವಾಗಿ ಹೊರಟು ಪ್ರಕಾಶದಿಂದ ಕೂಡಿದ ಹನುಮಂತನಲ್ಲಿ ತೀಕ್ಷ್ಣ ಗಳಾದ ಭಯಂಕರಗಳಾದ ಬಾಣಗಳನ್ನು ಪ್ರಯೋಗಿಸಿದರು.

ನಿರ್ಘಾತ ವದ್ಘೋರ ತರಾತಿ ಘೋಷಃ ಪರ್ತ ಹನೂಮಾ ಗಗನಾಚ್ಚ ಕಾಶೇ ॥
ದುರ್ಧರ್ಷ ದೇಹೋಥ ಮಹಾ ನಗಾಭಃ ಸಂಪಿಷ್ಟ ಫೇನೋಪಮತಾಂ ಜಗಾಮ ॥ ೧೨॥

ಸಿಡಿಲಿನಂತೆ ಘೋರತರವಾದ ಸಿಂಹನಾದ ಮಾಡುತ್ತಾ ಹನುಮಂತನು ಹಾರಿಬಂದು ಅಂತರಿಕ್ಷ ಪ್ರದೇಶದಲ್ಲಿ ನಿಂತು ಪ್ರಕಾಶಿಸಿದನು, ಮಹಾಭಯಂಕರವಾಗಿಯೂ, ದೊಡ್ಡಪರ್ವತದೋಪಾದಿಯಲ್ಲಿ ಶರೀರ ವುಳ್ಳ, ದುರ್ಧರ್ಷನು ಮುದ್ದೆ ಮಾಡಿದ ನೊರೆಯುಗುಳ್ಳಿಯಂತೆ ಜಾಗ್ರತೆಯಾಗಿ ನಾಶಹೊಂದಿದನು.

ಕ್ರುದ್ಧೋ ವಿರೂಪಾಕ್ಷ ಇಮಂ ಯುಯೋಧ ಯೂಪಾಕ್ಷನಾಮಾ ಪೃಥ ಮುದ್ಗರೇಣ ॥

ಸಾಲೇನ ಸಂಚೂರ್ಣಿತ ವರ್ಾ ಹನೂಮಾ ಸ್ತೌಪಾಂಸು ಪಿಂಡಾವಿವ ಪಾಂಡುಕೀರ್ತಿ॥೧೩॥

ಕೋಪಿಷ್ಠನಾದ ವಿರೂಪಾಕ್ಷನು ಹನುಮಂತನೊಡನೆ ಯುದ್ಧಕ್ಕೆ ನಿಂತನು. ಅದೇ ಕಾಲದಲ್ಲಿಯೇ ವಿರೂಪಾಕ್ಷನು ಮುದ್ಗರವೆಂಬ ಆಯುಧವನ್ನು ಹಿಡಿದು ಯುದ್ಧಕ್ಕೆ ನಿಂತನು. ಪರಿಶುದ್ಧವಾದ ಕೀರ್ತಿಯುಳ್ಳ ಹನುಮಂತನು ಇವರಿಬ್ಬರನ್ನೂ ಮರಳಿನ ಉಂಡೆಗಳೋಪಾದಿಯಲ್ಲಿ ಬಹು ಸುಲಭವಾಗಿ ನಾಶಮಾಡಿದನು.

ತಂ ಭಾಸ ಕರ್ಣಃ ಶಿತ ಶೂಲ ಶಾಲೀ ಸಪಟ್ಟಿಶಶ್ಚ ಪ್ರಘಸೋಭಿ ಯಾತೌ ॥
ತೌ ದ್ವಾವಚ ಪಂಚತ್ವ ಮಹೋ ನಿನಾಯ ಮಹಾದ್ರಿ ಶೃಂಗೇಣ ಮಹಾ ಬಲೋಸೌ ॥೧೪॥

ತೀಕ್ಷ್ಣವಾದ ಶೂಲವನ್ನು ಧರಿಸಿರುವ ಭಾಸಕರ್ಣನು, ಪಟ್ಟಿಸವೆಂಬ ಆಯುಧವನ್ನು ಧರಿಸಿರುವ ಪ್ರಘಸನೊಡನೆ ಕೂಡಿಕೊಂಡು, ಈ ಹನುಮಂತನ ಮೇಲೆ ಯುದ್ಧಕ್ಕೆ ಬಂದರು. ಈ ಹನುಮಂತನು ಮಹಾ ಬಲಿಷ್ಠನಾಗಿ ಎಲ್ಲರೂ ಪರಮಾಶ್ಚರ್ಯಪಡುವಂತೆ, ಒಂದಾನೊಂದು ಪರ್ವತದ ಕೋಡುಗಲ್ಲಿನಿಂದ ಅವರಿಬ್ಬರನ್ನೂ

ಹೊಡೆದು ಕೊಂದನು.

ಗಜೈ ರ್ಗಜೇದ್ರಾಂ ಸ್ತುರಗೈ ಸ್ತುರಂಗಾ ರಥೈ ರಥಾನೇಷ ಭಟೈ ರ್ಭಟಾಂಶ್ಚ ॥
ಅಪಾತಯ ತ್ಕರ್ಮ ಸುಲಾಘವಜ್ಞೋ ವಿನಾ ಶಿಲಾ ಸಾಲ ವಿಮಾರ್ಗಣೇನ ॥ ೧೫ ॥

ಕೆಲಸವನ್ನು ಸುಲಭವಾಗಿ ಸಾಧಿಸತಕ್ಕ ಹನುಮಂತನು, ಪರ್ವತಗಳನ್ನೂ, ಸಾಲ ವೃಕ್ಷಗಳನ್ನೂ, ಹುಡುಕುವಂಥ ಶ್ರಮೆಯಿಲ್ಲದೆ ಆ ರಾಕ್ಷಸರ ಸೈನ್ಯದಲ್ಲಿರುವ ಆನೆಗಳಿಂದ ಆನೆಗಳನ್ನೂ, ಕುದುರೆಗಳಿಂದ ಕುದುರೆಗಳನ್ನೂ, ರಥಗಳಿಂದ ರಥಗಳನ್ನೂ, ಕಾಲಾಳುಗಳಿಂದ ಕಾಲಾಳುಗಳನ್ನೂ ಹೊಡೆದು ಕೆಡವಿದನು.

ತೃತೀಯಮಂಶಂ ಸ್ವಪತಾಕಿಸೀನಾಂ ವಿಜ್ಞಾಯ ಭಗ್ನಂ ಕಪಿ ಪುಂಗವೇನ ॥
ಸವಿಂಶ ದಕ್ಷಃ ಸಕಲಾಕ್ಷಿಭಿಶ್ಚ ಕುಮಾರಮಕ್ಷಂ ಸ್ಥಿತ ಮೈಕ್ಷತಾಥ ॥ ೧೬ ॥

ತನ್ನ ಸೈನ್ಯದಲ್ಲಿ ಮೂರನೆಯ ಒಂದು ಭಾಗ ಸೈನ್ಯವು ಕಪಿ ಶ್ರೇಷ್ಠನಾದ ಹನುಮಂತನಿಂದ ನಾಶವಾದುದನ್ನು ಕೇಳಿದ ರಾವಣನು, ತನ್ನ ೨೦ ಕಣ್ಣುಗಳಿಂದಲೂ ಎದುರಿಗಿದ್ದ ಅಕ್ಷಕುಮಾರನನ್ನು ನೋಡಿದನು

ಪಿತುರ್ನಿಯೋಗಂ ಚತುರಸ್ಸವಿದ್ವಾನ್ ಬಾಲಾರ್ಕಭಾಸಂ ರಥಮಾರುರೋಹ ॥
ಧನುರ್ಧರಂ ವೀರವರಂ ಪ್ರಯಾಂತಂ ತಮನ್ವಗಚ್ಛನ್ ಪೃತನಾ ಅಸಂಖ್ಯಾಃ ॥ ೧೭ ॥

ಕುಶಲನೂ, ವಿದ್ವಾಂಸನೂ ಆದ ಅಕ್ಷಯಕುಮಾರನು ತಂದೆಯ ಅಪ್ಪಣೆಯನ್ನು ಪಡೆದು ಬಾಲಸೂರ್ಯನೋಪಾದಿಯಲ್ಲಿ ಪ್ರಕಾಶಿಸುತ್ತಿರುವ ರಥವನ್ನು ಹತ್ತಿದನು. ಈ ವೀರಶ್ರೇಷ್ಠನು ಧನುಸ್ಸನ್ನು ಹಿಡಿದು ಯುದ್ಧಕ್ಕೆ ಹೊರಡುವುದನ್ನು ಕಂಡು ಅಸಂಖ್ಯವಾದ ಸೈನ್ಯವು ಯುದ್ಧ ಸನ್ನದ್ಧವಾಗಿ ಅವನನ್ನು ಹಿಂಬಾಲಿಸಿತು.

ಕ್ರೋಧಾರುಣಾಕ್ಷಃ ಕಪಿವೈಕ್ಷತಾಕ್ಷೋ ವಿಸ್ಫಾರಯನ್ ಕಾರ್ಮುಕಮುಗ್ರಕರ್ಮಾ ॥
ಸತೋರಣಸ್ಥ ಸ್ತರುಣಾರ್ಕ ವಕ್ತ್ರ ಸ್ತೂರ್ಣಂ ನದನ್ನಂಬರ ಮಾಲಲಂಬೇ ॥ ೧೮॥

ಆ ಕ್ರೂರಕರ್ಮಿಯಾದ ಅಕ್ಷಯಕುಮಾರನು ಧನುಷ್ಟಂಕಾರ ಮಾಡುತ್ತಾ, ಕಣ್ಣನ್ನು ಕೆಂಪಗೆ ಮಾಡಿಕೊಂಡು ಕಪಿಯನ್ನು ನೋಡಿದನು. ಬಾಲಸೂರ್ಯನಂತೆ ಕೆಂಪಾದ ಮುಖವುಳ್ಳ ಹನುಮಂತನು ತೋ

ಣದ ಕಂಭದಮೇಲೆ ಕುಳಿತುಕೊಂಡು ಧ್ವನಿಮಾಡುತ್ತಾ ಆಕಾಶಮಾರ್ಗಕ್ಕೆ ಹಾರಿದನು.

ಆಕಾಶಮಾರ್ಗ ನವಕಾಶಹೀನಾಂ ಶ್ಚಕ್ರೇಶರ್ಯ ರಾವಣಿ ರದ್ಭುತಂತತ್ ॥
ತತೋದ್ಭುತಂ ತತ್ರಚರನ್ನಸಂಗಃ ಸವಾಯು ವದ್ವಾಯು ಸುತೋಕ್ಷತೋಪತತ್ ॥ ೧೯ ॥

ಅಕ್ಷಯಕುಮಾರನು ತನ್ನ ಬಾಣಗಳ ಪರಂಪರೆಯಿಂದ ಅಂತರಿಕ್ಷಪ್ರದೇಶವನ್ನೆಲ್ಲಾ, ಮುಚ್ಚುತ್ತಿರಲು ಇದೇ ಆಶ್ಚರ್ಯವಾಗಿದ್ದಿತು. ಇದಕ್ಕಿಂತಲೂ ಆ ಅಂತರಿಕ್ಷಪ್ರದೇಶದಲ್ಲಿ ವಾಯುವು ಹೇಗೆ ಅಸಂಗನಾಗಿ ಚಲಿಸುವನೋ ಹಾಗೆ ವಾಯುಪುತ್ರನಾದ ಹನುಮಂತನು ಚಲಿಸುವುದು ಅತ್ಯಂತ ಆಶ್ಚರ್ಯಕರವಾಗಿದ್ದಿತು.

ನರಾವಣೇ ರಾವಣತೋಯಮೂನೋ ಹನ್ಯಾವಿಃಮಂ ಮನ್ಯುಬಲ ಪ್ರಚಂಡಂ ॥
ಅಲಂಹಿ ಲೀಲಾಭಿ ರಮೂಭಿ ರಿತ್ಥಂ ವಿಚಿಂತ್ಯವೀರೋಭ್ಯಪತ ದ್ವಿಪಕ್ಷಂ ॥ ೨೦ ॥

ಈ ಅಕ್ಷಯಕುಮಾರನು ರಾವಣನಿಗಿಂತಲೂ ಯಾವಭಾಗದಲ್ಲಿಯೂ ಕಡಮೆಯಾಗಿಲ್ಲವಾದುದರಿಂದ ಅಹಂಕಾರದಿಂದಲೂ, ಬಲದಿಂದಲೂ, ಪ್ರಚಂಡನಾದ ಇವನನ್ನು ಮೊದಲು ಕೊಲ್ಲುತ್ತೇನೆ. ಈ ರೀತಿಯಿಂದ

ಆಟವಾಡಿದ್ದು ಇದುವರಿಗೆ ಸಾಕು ಎಂದು ಆಲೋಚಿಸಿ ಹನುಮಂತನು ಶತ್ರುವಿನ ಮೇಲೆ ಬಿದ್ದನು.

ರಥಂ ರಿಪೋಶ್ಚಕ್ರಮಿವ ಭ್ರಮಂತಂ ನಭಶ್ಚರಂ ಪ್ರಾಪ್ಯ ನಭಶ್ಚರೋಸೌ ॥
ಸುರಾಽಸುರಾಭೇದ್ಯ ಮಥೋ ಬಿಭೇದ ತಲೇನ ತುಂಗಾಂಶ್ಚ ತುರಂಗಮಾಂ ಸ್ತಾನ್ ॥೨೧॥

ಅಂತರಿಕ್ಷಪ್ರದೇಶದಲ್ಲಿ ಚಕ್ರದೋಪಾದಿಯಲ್ಲಿ ತಿರುಗುತ್ತಿರುವ ಅಕ್ಷಯಕುಮಾರನ ರಥವನ್ನು ಹನುಮಂತನು ಹಿಡಿದು ಸುರಾಽಸುರರಿಂದಲೂ ಅಭೇದ್ಯವಾದ ರಥವನ್ನು ಅಂಗೈಯಿಂದ ಪುಡಿ ಪುಡಿ ಮಾಡಿ ಅವನ ರಥದ ಕುದುರೆಗಳನ್ನು ನಾಶಮಾಡಿದನು.

ವಿಹಾಯ ಯಾನಂಚ ವಿಹಾಯ ಶೀಮಂ ಕೃಪಾಣ ಪಾಣಿಂ ಕೃತಿನಂ ಚರಂತಂ ॥
ನಿಶಾಚರೇಂದ್ರಂ ಜಗೃಹೇ ಕಪೀಂದ್ರೋ ವಿಹಂಗ ಭರ್ತೇವ ಭುಜಂಗಮೇಂದ್ರಂ ॥ ೨೨ ॥

ಆ ಕಪಿ ಶ್ರೇಷ್ಠನಾದ ಹನುಮಂತನು ರಥವನ್ನು ಬಿಟ್ಟು, ಕೈಯಲ್ಲಿ ಕತ್ತಿಯನ್ನು ಹಿಡಿದುಕೊಂಡು ಯುದ್ಧಕ್ಕೆ ಬರುತ್ತಿರುವ ಆ ಅಕ್ಷಯಕುಮಾರನನ್ನು, ಸರ್ಪವನ್ನು ಗರುಡನು ಹಿಡಿಯುವಂತೆ ಹಿಡಿದುಕೊಂಡನು

ಪಾದಾಗ್ರಯೋಸ್ತಂ ಪರಿಗೃಹ್ಯ ತೂರ್ಣಂ ಸಹಸ್ರ ಕೃತ್ವಃ ಪರಿವರ್ತ್ಯ ಚಂಡಃ ॥
ಮುಮೋಚ ಭೂಮೌ ಸಹಸಾ ಕುಮಾರಂ ಮುಮೋಚ ದೇಹಂ ಸಹಸಾಕುಮಾರಃ ॥೨೩॥

ಹನುಮಂತನು ಆ ಅಕ್ಷಯ ಕುಮಾರನನ್ನು ಜಾಗ್ರತೆಯಾಗಿ ಹಿಡಿದು ಕಾಲಿನಿಂದ ವರಿಸಲು ಬಲಿಷ್ಠನಾದ ಅಕ್ಷಯ ಕುಮಾರನು ಕೆಳಕ್ಕೆ ಬಿದ್ದನು. ಹನುಮಂತನು ಅವನನ್ನು ನಗುತ್ತಾ ಭೂಮಿಯಲ್ಲಿ ಬಿಡಲು ಆ ಅಕ್ಷಯ ಕುಮಾರನು ಜಾಗ್ರತೆಯಾಗಿ ಪ್ರಾಣವನ್ನು ಬಿಟ್ಟನು-

ಅಪೂರ್ವ ಮೋದೋ ಜನಿ ದೇವ ಸಂಘೇ ತತ್ಪುಷ್ಪ ವರ್ಷೋ ಹನುಮತ್ಯ ಪೂರ್ವಃ ॥
ಅಪೂರ್ವಶೋಕೋ ದಶಕಂಧರೇಲಂ ಲಂಕಾಽಲಯೇ ಪೂರ್ವತರೋ ವಿಲಾಪಃ ॥ ೨೪ ॥

ಈ ಅಕ್ಷಯ ಕುಮಾರನು ಸಾಯುತ್ತಿರಲು ದೇವತೆಗಳೆಲ್ಲರೂ ಬಹಳಸಂತೋಷಪಟ್ಟು ಹನುಮಂತನ ಮೇಲೆ ಅಪೂರ್ವವಾದ ಪುಷ್ಪವೃಷ್ಟಿಯನ್ನು ಕರೆದರು. ರಾವಣನನ್ನು ಅಪೂರ್ವವಾದ ದುಃಖವು ಆವರಿಸಿತು. ಲಂಕಾಪಟ್ಟಣದಲ್ಲೆಲ್ಲಾ ಅಪೂರ್ವವಾದ ದುಃಖವು ತುಂಬಿಕೊಂಡಿತು.

ಸ ಶೋಕ ಕೋಪಃ ಪಿಶಿತಾಶನೇಶಃ ಸಮಾದಿದೇಶೇಂದ್ರ ಜಿತಂ ರಣಾಯ ॥
ಮಹೇಂದ್ರಶತ್ರೋ ಸಮಹಾ ಪ್ಲವಂಗೊ ನಿಗೃಹ್ಯತಾ ಮಾಶು ಸುತತ್ವಯೇತಿ ॥ ೨೫ ॥

ಕೋಪದಿಂದಲೂ ದುಃಖದಿಂದಲೂ ಕೂಡಿದಂಥ ರಾಕ್ಷಸಾಧಿಪನಾದ.ರಾವಣನು ಮಗನಾದ ಇಂದ್ರ ಜಿತುವನ್ನು ಕುರಿತು ಎಲೈ ! ಇಂದ್ರಶತ್ರುವೇ !! ನೀನು ಯುದ್ಧಕ್ಕೆ ಹೋಗಿ ಜಾಗ್ರತೆಯಾಗಿ ಆ ಮಹಾ ಭಯಂಕರವಾದ ಕಪಿಯನ್ನು ಹಿಡಿದುಕೊಂಡು ಬರತಕ್ಕದ್ದು ಎಂದು ಅಪ್ಪಣೆಮಾಡಿದನು-

ಸವ್ಯಾಳಯುಕ್ತೇನ ರಥೋತ್ತಮೇನ ದಿವ್ಯೇನ·ದಿವ್ಯಾಸ್ತ್ರವಿದಾಂ ಪ್ರಭರ್ಹಃ ॥
ಸಬಾಣ ಬಾಣಾಸನ ಪಾಣಿರುಗ್ರಃ ತೂರ್ಣಂ ಮಹಾಂತಂ ಹನುಮಂತಮಾಪ ॥ ೨೬ ॥

ದಿವ್ಯಾಸ್ತ್ರಜ್ಞರಲ್ಲಿ ಕೋವಿದನಾದ ಇಂದ್ರಜಿತ್ತುವು ದಿವ್ಯವಾದ ಮತ್ತು ಸರ್ಪಧ್ವಜವುಳ್ಳ ರಥದಲ್ಲಿ ಕುಳಿತು ಬಾಣಗಳನ್ನೂ, ಬತ್ತಳಿಕೆಯನ್ನೂ (ಬಾಣಾಸನವನ್ನು) ಧರಿಸಿಕೊಂಡು ಕ್ರೂರಾಕಾರನಾಗಿ ಜಾಗ್ರತೆಯಾಗಿ ಶ್ರೇಷ್ಠನಾದ ಹನುಮಂತನನ್ನು ಸೇರಿದನು.

ತಂ ಮೇಘನಾದಂ ಸ ಸಮುದ್ರನಾದೋ ವಿಲೋಕ್ಯಭೂಯೋ ವ್ಯವೃಧೇಹನೂಮಾನ್ ॥
ಶರಾಽನಸಂಖ್ಯಾನ್ನವವರ್ಷ ಯಾವ ತಾವದ್ಧರಿಸ್ತೋರಣತಃ ಖಮಾಪ ॥ ೨೭ ॥

ಮೇಘಗಂಭೀರವಾದ ಧ್ವನಿಯುಳ್ಳ ಇಂದ್ರಜಿತ್ತುವು ಬಂದುದನ್ನು ಸಮುದ್ರದಂತೆ ಗಂಭೀರವಾದ ಧ್ವನಿಯುಳ್ಳ ಹನುಮಂತನು ನೋಡಿ, ಬಹಳ ದೊಡ್ಡರೂಪವನ್ನು ತಾಳಿ ಬೆಳೆದನು. ಇಂದ್ರಜಿತುವು ಬಾಣ ಪ್ರಯೋಗವನ್ನು ಮಾಡುತ್ತಿರಲಾಗಿ ಅಷ್ಟರಲ್ಲಿಯೇ ಹನುಮಂತನು ಅಂತರಿಕ್ಷಕ್ಕೆ ಹಾರಿದನು.

ನಪಕ್ಷ್ಮಿ ಪಕ್ಷ್ಮಸ್ವಪಿ ಯಸ್ಯಬಾಣಾ ಲಕ್ಷ್ಯಚ್ಯುತಾ ಜಾತ್ವಪಿ ಶಕ್ರಶತ್ರೋಃ ॥
ತಸ್ಯೇಷವಃ ಖಂ ಪರಿಪೂರಯಂತಃ ಸರ್ವೇಹನೂಮತ್ಯಭವನ್ ವಿಲಕ್ಷ್ಯಾಃ ॥ ೨೮ ॥

ಇಂದ್ರಜಿತುವಿನ ಧನುಸ್ಸಿನಿಂದ ಪ್ರಯೋಗಿಸಲ್ಪಟ್ಟ ಯಾವ ಬಾಣವೂ ಕೂಡ, ಪಕ್ಷಿಯ ಕಣ್ಣಿನ ರೆಪ್ಪೆಗಳಲ್ಲಿಯೂ ಕೂಡ, ವ್ಯರ್ಥವಾಗುತ್ತಿರಲಿಲ್ಲ. ಅಂಥ ಶಕ್ತಿವುಳ್ಳ ಇಂದ್ರಜಿತುವು ಪ್ರಯೋಗಿಸಿದ ಬಾಣವು

ಕೂಡ ಅಂತರಿಕ್ಷಪ್ರದೇಶವನ್ನು ವ್ಯಾಪಿಸಿಕೊಂಡಿರುವ ಹನುಮಂತನನ್ನು ತಗಲದೆ ಗುರಿತಪ್ಪಿ ಬಿದ್ದುಹೋದವು. ಅವನು ಪ್ರಯೋಗಿಸಿದ ಬಾಣಗಳೆಲ್ಲಾ ಲಕ್ಷ್ಯತಪ್ಪಿ (ಗುರಿತಪ್ಪಿ) ವ್ಯರ್ಥವಾದುವು.

ತಂ ವಂಚಯಂತಂ ಸಕಲಾಂಶ್ಚಬಾಣಾ ನಭ್ಯುತ್ಪತಂ ತಂ ಚ ಭುಜೌ ಪ್ರಸಾರ್ಯ ॥
ಪ್ರಕ್ರೀಡಿತಂ ವೀಕ್ಷ್ಯ ಕಪಿಪ್ರವೀರಂ ಚಿಂತಾಮನಂತಾಂ ಪ್ರಯಯೌಸುರಾರಿಃ ॥ ೨೯ ॥

ಹನುಮಂತನು ಭುಜಗಳನ್ನು ಹರಡಿಕ್ಕೊಂಡು ಇಂದ್ರಜಿತುವಿನ ಎಲ್ಲಾ ಬಾಣಗಳನ್ನು ತಪ್ಪಿಸಿಕ್ಕೊಂಡು ಮೇಲಕ್ಕೆ ಹಾರುತ್ತಾ ಅವನನ್ನು ವಂಚಿಸುತ್ತಿರುವುದನ್ನು ಕಂಡು ಇಂದ್ರಜಿತುವು ಅನಂತವಾದ ಚಿಂತೆಯಲ್ಲಿ ಮುಳುಗಿದನು.

ಅವೇಕ್ಷ್ಯಮೇನಂ ಭುವನೇಷ್ವವಧ್ಯಂ ಪಿತಾಮಹಾಸ್ತ್ರೇಣ ವಶೀಕರಿಷ್ಯೇ ॥
ಇತ್ಥಂಸನಿರ್ಧಾರ್ಯ ಮಹಾಮನಸ್ವೀ ಬ್ರಹ್ಮಾಸ್ತ್ರಮಸ್ಮೈ ಸಹಸಾಮುಮೋಚ ॥ ೩೦ ॥

ಹದಿನಾಲ್ಕು ಲೋಕಗಳಲ್ಲಿಯೂ ಸಹ, ಅವಧ್ಯನಾದ ಈ ಕಪಿಯನ್ನು ಇಂದ್ರಜಿತ್ತುವು ನೋಡಿ,

ಬ್ರಹ್ಮಾಸ್ತ್ರದಿಂದ ಈತನನ್ನು ವಶಪಡಿಸಿ ಕೊಳ್ಳುತ್ತೇನೆಂಬದಾಗಿ ನಿಶ್ಚಯಿಸಿ, ಮಹಾ ಮನಸ್ವಿಯಾದ ಇಂದ್ರಜಿತ್ತುವು ಜಾಗ್ರತೆಯಾಗಿ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿದನು.

ವಿಷ್ಣೋಃ ಪ್ರಸಾದಾತ್ಸಕಲಾಸ್ತ್ರತೇಜೋ ನಮಾಂ ಸ್ಪೃಶೇ ದೇವ ಮಹೇಹ ಬದ್ಧಃ ॥
ಪ್ರೇಕ್ಷ್ಯಾಮಿ ವಕ್ಷ್ಯಾಮಿಚ ರಾವಣಂ ತ ಮಿತಿಸ್ಮರ್ರ ಅಸ್ತ್ರವಶೋಭವತ್ಸಃ ॥ ೩೧ ॥

ಆ ಸಮಯದಲ್ಲಿ ಹನುಮಂತನು ಯೋಚಿಸಿದ್ದೇನೆಂದರೆ; ಪರಮಾತ್ಮನಾದ ಶ್ರೀ ರಾಮಚಂದ್ರನ ದಯೆಯಿಂದ ನನಗೆ ಯಾವ ಅಸ್ತ್ರದ ತೇಜಸ್ಸೂ ಕೂಡ, ಸ್ಪರ್ಶ ಮಾಡಲಾರದು. ಆದರೂ ನಾನು ರಾವಣನನ್ನು ನೋಡಿ ಮಾತನಾಡಬೇಕಾಗಿರುವುದರಿಂದ ಈ ಬ್ರಹ್ಮಾಸ್ತ್ರಕ್ಕೆ ವಶನಾಗುತ್ತೇನೆ. ಎಂದು ಹನುಮಂತನು ಆ ಅಸ್ತ್ರದಿಂದ (ಅಸ್ತ್ರಕ್ಕೆ) ಸಿಕ್ಕಿಬಿದ್ದನು.

ಸರಾಕ್ಷಸೈಸ್ತೈಃ ಶಣಚೀರಬದ್ಧಃ ಸಭಾಂಪ್ರಣೀತಃ ಪ್ರತಿಭರ್ತ್ಸಿತಶ್ಚ ॥
ರಾಜ್ಞಃ ಪುರಸ್ತಾನ್ನಿಹತೋಽಖಿಳಂಚ ಶಕ್ತೋಽಪಿ ಸೇಹೇ ನಿಜಕಾರ್ಯಸಿಧ್ಯೈ ॥ ೩೨ ॥

ಅನಂತರದಲ್ಲಿ ಹನುಮಂತನು ರಾಕ್ಷಸರುಗಳಿಂದ ಶಣಬಿನಹಗ್ಗಗಳಿಂದಲೂ, ನಾರಿನಹಗ್ಗಗಳಿಂದಲೂ ವಸ್ತ್ರಖಂಡಗಳಿಂದಲೂ, ಬಂಧಿತನಾಗಿ ರಾವಣನ ಸಭೆಗೆ ಒಯ್ಯಲ್ಪಟ್ಟನು. ಮತ್ತು ಗದರಿಸಲ್ಪಟ್ಟನು. ಆ ರಾಜನಾದ ರಾವಣನ ಎದುರಿಗೆ ಅಲ್ಲಿದ್ದ ಸಮಸ್ತ ರಾಕ್ಷಸರನ್ನೂ ಕೊಲ್ಲಲು ಶಕ್ತನಾಗಿದ್ದರೂ ಸಹ, ಈ ಹನುಮಂತನು ತನ್ನ ಕಾರ್ಯಸಿದ್ಧಿಗೋಸ್ಕರವಾಗಿ ರಾಕ್ಷಸರು ಮಾಡಿದ ಅಪಚಾರಗಳನ್ನೆಲ್ಲಾ ಸಹಿಸಿಕೊಂಡಿದ್ದನು.

ಕಸ್ತ್ವಂ ಕಪೇತ್ವಂ ಕುತ ಆಗತೋಽಸೀ ಕಸ್ಯಾಸಿದೂತೋಽ ಪಕೃತಃ ಕಿಮರ್ಥಂ ॥
ಇತ್ಥಂ ದಶಾಸ್ಯೇನ ಪಪೃಚ್ಛಮಾನಃ ಪ್ರಣಮ್ಯರಾಮಂ ಹನುಮಾನುವಾಚ ॥ ೩೩ ॥

“ಎಲೈ ! ಕಪಿಯೇ ! ನೀನು ಯಾರು !! ಎಲ್ಲಿಂದ ಬಂದೆ? ನೀನು ಯಾರದೂತನು? ಏತಕ್ಕೋಸ್ಕರವಾಗಿ ನಮ್ಮ ವನವನ್ನು ಹಾಳುಮಾಡಿದೆ?” ಎಂದು ರಾವಣನು ಕೇಳಲು ಹನುಮಂತನು ಶ್ರೀ ರಾಮಚಂದ್ರನಿಗೆ ನಮಸ್ಕಾರ ಮಾಡಿ ಮಾತನಾಡಿದನು.

ಜಾತಿ ಸ್ವಭಾವೋ ವನ ಲೋಪನಂ ತತ್ ಕ್ಷಮಸ್ವ ರಾಜನ್ ಫಲ ಜೀವಿನಾಂ ನಃ ॥

ಜಿಘಾಂಸಯಾಭ್ಯಾ ಪತತಃ ಕ ಏವ ಜಿಜೀವಿಷು ರ್ನಕ್ಷಪಯೇ ತ್ರ್ರಭುಶ್ಚೇತ್ ॥ ೩೪ ॥

ವನವನ್ನು ನಾಶಮಾಡಿದ್ದೇ ದೊಡ್ಡ ಅಪರಾಧವಾಗುವ ಪಕ್ಷಕ್ಕೆ, ಫಲಜೀವಿಗಳಾದ ನಮ್ಮ ವಾನರರ ಜಾತಿ ಸ್ವಭಾವವೇ ಅದಾಗಿರುತ್ತದೆ. ಆದ್ದರಿಂದ ಕ್ಷಮಿಸು. ಇಷ್ಟು ಜನ ರಾಕ್ಷಸರನ್ನು ಕೊಂದಿದ್ದು ಅಪರಾಧ ವಾಗುವ ಪಕ್ಷಕ್ಕೆ, ಬದುಕಲು ಇಚ್ಛೈಸುವ ಯಾವನು ತಾನೇ, ಮೇಲೆಬಿದ್ದು ಕೊಲ್ಲಲುಬಂದವನನ್ನು ಸುಮ್ಮನೆ ಬಿಟ್ಟಾನು? ಅದರಲ್ಲಿಯೂ ಸಮರ್ಥನಾದವನು ಎಂದಿಗೂ ಬಿಡಲಾರನು.

ನ ಬ್ರಾಹ್ಮ ಮಸ್ತ್ರಂ ಮಮ ಬಂಧ ಕಂಸ್ಯಾ ನ್ಮಾಕೌತು ಕಂತೇ ಸುತ ವಿಕ್ರಮೇಸ್ಯಾತ್ ॥
ಮಾಂ ರಾಮದೂತಂ ಮರುತಸ್ತನೂಜಂ ವಿದ್ಧಿಸ್ವಯಂ ದ್ರಷ್ಟು ಮುಪಾಗತಂತ್ವಾಂ ॥೩೫॥

ನನ್ನನ್ನು ಬ್ರಹ್ಮಾಸ್ತ್ರವು ಎಂದಿಗೂ ಬಂಧಿಸಲಾರದು. ಮತ್ತು ನಿನ್ನಮಗನ ಪರಾಕ್ರಮದಿಂದ ನಾನು ಬಂಧಿತನಾದೆನೆಂದು ನೀನು ಆಶ್ಚರ್ಯಪಡಬೇಡ. ನಾನು ಮರುತ್ಪುತ್ರನೆಂದೂ ರಾಮದೂತನೆಂದೂ ತಿಳಿ. ಮತ್ತು ನಾನಾಗಿಯೇ ನಿನ್ನನ್ನು ನೋಡಲು ಬಂದಿದ್ದೇನೆ. ಅಂದರೆ, ಬ್ರಹ್ಮಾಸ್ತ್ರದಿಂದಲಾಗಲೀ, ಅಥವ ನಿನ್ನ ಮಗನ

ಪರಾಕ್ರಮದಿಂದಲಾಗಲೀ, ಬಂಧಿತನಾಗಿ ಇಲ್ಲಿಗೆ ಬರಲಿಲ್ಲವೆಂದು ತಿಳಿ.

ಕೃಪಾಕರಃ ಕ್ಷಾಮ್ಯತಿ ಚೌರ್ಯ ಮಾರ್ಯಃ ಪ್ರಣಮ್ಯ ದೇವೀ ಪ್ರತಿದೀಯತೇ ಚೇತ್ ॥
ನೋಚೇದ್ರುತಂ ದ್ರಕ್ಷ್ಯಸಿ ರಾಘವೌ ತ್ವಂ ತಂ ಚಾಥವೀರಂ ಕಪಿ ಯೂಥ ನಾಥಂ ॥೩೬॥

ಎಲೈ ! ರಾವಣನೇ ! ನೀನು ಸಾಷ್ಟಾಂಗ ನಮಸ್ಕಾರ ಮಾಡಿ ಸೀತಾದೇವಿಯನ್ನು ಶ್ರೀ ರಾಮಚಂದ್ರನಿಗೊಪ್ಪಿಸಿದ್ದೇ ಆದರೆ, ಕೃಪಾಳುವೂ, ಪೂಜ್ಯನೂ ಆದ ಆ ಶ್ರೀ ರಾಮನು ನಿನ್ನ ಅಪರಾಧವಾದ ಚೌರ್ಯವನ್ನು ಕ್ಷಮಿಸುವನು. ಇಲ್ಲವಾದರೆ, ವೀರನಾಗಿಯೂ, ಕಪಿ ಸೈನ್ಯದಿಂದ ಕೂಡಿದವನಾಗಿಯೂ, ಸುಗ್ರೀವನಿಂದ ಸಹಿತರಾದ ರಾಮ ಲಕ್ಷ್ಮಣರನ್ನು ಜಾಗ್ರತೆಯಾಗಿ ನೋಡುವಿ. ಮತ್ತು ಅವರೊಡನೆ ನಿನಗೆ ಯುದ್ಧ ಸಂಭವವುಂಟು

ರಾಮೇಷು ರೇಕೋ ಸಸುರಾ ಸುರಾದೀನ್ ಸಂಹರ್ತುಮಿಷ್ಟೇ ಸಕಲಾಂಶ್ಚ ಲೋಕಾನ್ ॥
ತ್ವಾ ಮಲ್ಪ ಸಾರಂ ಕಿಮುತಾಲ್ಪ ಬುದ್ಧೇ ಮಾ ವಿಗ್ರಹೋ ಭೂ ಚ್ಛರಣಂ ವ್ರಜೈನಂ ॥೩೭॥

ರಾಮದೇವರ ಒಂದೇವೆಂದು ಬಾಣವು, ದೇವದಾನವರಿಂದ ಯುಕ್ತವಾದ ಸಮಸ್ತಲೋಕಗಳನ್ನೂ

ಸಂಹಾರ ಮಾಡಲು ಸಮರ್ಥನಾಗಿರುವಾಗ, ಎಲೈ! ಅಲ್ಪ ಬುದ್ಧಿಯೂ, ಅಲ್ಪ ಶಕ್ತಿಯೂ ಉಳ್ಳ ರಾವಣನೇ! ನೀನು ಎಷ್ಟರವನು? ಆದ್ದರಿಂದ ಶ್ರೀರಾಮನೊಡನೆ ಯುದ್ಧವನ್ನು ಅಪೇಕ್ಷಿಸಬೇಡ. ಆತನನ್ನೇ ಶರಣುಹೊಂದು ಎಂಬದಾಗಿ ಹನುಮಂತನು ಹೇಳಿದನು.

ಶಕ್ತೋಽಪ್ಯಹಂ ತ್ವಾಂ ಸಬಲಂ ನಹನ್ಯಾಂ ಭೂಮ್ನಃ ಸ್ವಯಂ ಶತ್ರು ವಧೇ ಯಶಃ ಸ್ಯಾತ್ ||
ಏವಂ ಬ್ರುವಾಣೇ ಪವಮಾನ ಸೂನೌ ಆಜ್ಞಾಪಯ ತ್ತಸ್ಯ ವಧಂ ದಶಾಸ್ಯಃ || ೩೮ ||

ರಾಮದೂತನಾದ ನಾನೇ, ಸೈನ್ಯಸಹಿತನಾದ ನಿನ್ನನ್ನು ಈಗಲೇ ಕೊಲ್ಲಲು ಶಕ್ತನಾಗಿದ್ದೇನೆ. ಆದರೂ ನಿನ್ನನ್ನು ಕೊಂದಂಥ ಕೀರ್ತಿಯು ಆ ಶ್ರೀ ರಾಮಚಂದ್ರನಿಗೇ ಬರಬೇಕಾಗಿರುವುದರಿಂದ, ನಿನ್ನನ್ನು ಈಗ ನಾನು ಕೊಲ್ಲುವುದಿಲ್ಲವೆಂದು ಹನುಮಂತನು ಹೇಳಲು, ರಾವಣನು ' ಈ ಕಪಿಯನ್ನು ಸಂಹರಿಸಿ' ಎಂದಾಜ್ಞಾಪಿಸಿದನು.

ರಾಜ್ಞೋ ನ ದೂತಸ್ಯ ವಧಃ ಪ್ರಶಸ್ತಃ ಪುಚ್ಛಂ ಕಪೇರಸ್ಯ ದಹಾಮ ಶೀಘ್ರಂ ||
ವಿಭೀಷಣೇನೇತ್ಯಭಿ ಭಾಷಿತೋಽಸೌ ತತ್ಪುಚ್ಛ ಮಚ್ಛಂ ಕಿಲ ದಗ್ಧು ಮೈಚ್ಛತ್|| ೩೯ ||

ಆಗ ವಿಭೀಷಣನು ಅಣ್ಣಾ ಕೇಳು ! ರಾಜನಿಗೆ ದೂತನ ವಧವು ಎಂದಿಗೂ ಯುಕ್ತವಾದುದಲ್ಲವು. ಆದ್ದರಿಂದ ಈತನ ಸ್ವಚ್ಛವಾದ ಪುಚ್ಛವನ್ನು ಸುಟ್ಟುಬಿಡೋಣ? ಎನ್ನಲು ರಾಜನಾದ ರಾವಣನು ಆ ಕಪಿಯ ಪುಚ್ಛವನ್ನು ಸುಡಲು ಅಪ್ಪಣೆಮಾಡಿದನು.

ರಾಜಾಜ್ಞಯಾ ಪುಚ್ಛಮಮುಷ್ಯವಸ್ತ್ರೈಃ ಸಂವೇಷ್ಟಿತುಂ ಸಂ ವವೃಧೇತಿಮಾತ್ರಂ ‖
ಯತ್ನೇನ ಸಂವೇಷ್ಟ್ಯ ನಿಶಾಚರೇಂದ್ರಾಃ ತತ್ರಾಗ್ನಿ ಮುಚ್ಚೈ ರುದದೀಪಯಂಸ್ತೇ ‖ ೪೦ ‖

ರಾಜನಾದ ರಾವಣನ ಆಜ್ಞೆಯಿಂದ ಈ ಹನುಮಂತನ ಬಾಲವನ್ನು ಬಟ್ಟೆಗಳಿಂದ ಸುತ್ತಿದರು. ರಾಕ್ಷಸರು ಹೀಗೆ ಸುತ್ತುತ್ತಿರಲು ಆತನ ಬಾಲವು ಹೆಚ್ಚಾಗಿ ಬೆಳೆಯುತ್ತಾ ಹೋಯಿತು. ರಾಕ್ಷಸರುಗಳು ಬಹು ಪ್ರಯತ್ನಮಾಡಿ ಬಾಲವನ್ನು ಬಟ್ಟೆಗಳಿಂದ ಸುತ್ತಿ ನಾನಾವಿಧವಾದ ಎಣ್ಣೆಯನ್ನು ಸುರಿದು ಬೆಂಕಿಯನ್ನು ಹತ್ತಿಸಿದರು.

ಪುನಃ ಪುನಸ್ತೈಃ ಪರಿಣೀಯ ಮಾನಃ ಸಂಪ್ರೀಯತೇಸ್ಮೈಷ ಪುರೀಂ ದಿಧಕ್ಷುಃ ‖

ಜ್ವಲಂಶ್ಚನೈಸಂ ಜ್ವಲನೋ ದದಾಹ ಮರುತ್ಸ್ವರೂಪಂ ಹಿ ಮರುತ್ಸಖತ್ವಾತ್ ॥ ೪೧ ॥

ಬೆಂಕಿಯು ಜಾಜ್ವಲ್ಯಮಾನವಾಗಿ ಉರಿಯಲು ಆರಂಭವಾದ ಕೂಡಲೇ ಆ ರಾಕ್ಷಸರಿಂದ ಹನುಮಂತನು ಪುನಃ ಪುನಃ ಎಳೆಯಲ್ಪಡುತ್ತಿದ್ದರೂ, ಸಿಲ್ಲದೆ ಲಂಕಾಪಟ್ಟಣವನ್ನು ಚೆನ್ನಾಗಿ ನೋಡಬೇಕೆಂಬ ಅಪೇಕ್ಷೆಯಿಂದ ಅಲ್ಲಲ್ಲಿ ಓಡಾಡುತ್ತಿದ್ದನು. ಬೆಂಕಿಯು ಅವನ ಬಾಲದಲ್ಲಿ ಬಹಳವಾಗಿ ಉರಿಯುತ್ತಿದ್ದರೂ, ಮರುತ್ಸ್ವರೂಪನಾದ ಈತನನ್ನು ಅಗ್ನಿಯು ಸ್ವಲ್ಪವೂ ಸುಡಲಿಲ್ಲವು. ಏಕೆಂದರೆ ವಾಯುವು ಅಗ್ನಿಗೆ ಪರಮ ಸಖನಾಗಿ ಉರಿಯುವುದಕ್ಕೆ ಸಹಕಾರಿಯಾಗಿರುತ್ತದೆ.

ಸಶೈಲ ಸಂಕಾಶ ಶರೀರ ಆಸೀತ್ಕ್ಷಣಾ ದ್ವಿಡಾಲಃ ಪ್ರತನುಶ್ಚ ಆಸೀತ್ ॥
ಬಂಧಾ ದ್ವಿಮುಕ್ತೋಽಥಚ ಪರ್ವತಾಭೋ ಯೋಗೀಶ್ವರಃ ತಚ್ಚ ಪುರಂ ದದಾಹ ॥ ೪೨ ॥

ಹನುಮಂತನು ಮೊದಲು ದೊಡ್ಡದಾದ ಪರ್ವತದಂತೆ ಶರೀರವುಳ್ಳವನಾಗಿದ್ದು ತಕ್ಷಣದಲ್ಲಿಯೇ, ಬೆಕ್ಕಿನ ಮರಿಯಷ್ಟು ಸಣ್ಣ ರೂಪವನ್ನು ಧರಿಸಿದನು. ಆಗ ಆತನಿಗೆ ಕಟ್ಟಿದ್ದ ಬಂಧವೆಲ್ಲವೂ ಬಿಚ್ಚಿಹೋಯಿತು.

ಯೋಗೀಶ್ವರನಾದ ಹನುಮಂತನು ಕೂಡಲೇ ಪರ್ವತಾಕಾರನಾಗಿ ಆ ಲಂಕಾಪಟ್ಟಣವೆಲ್ಲವನ್ನೂ ಸುಟ್ಟುಬಿಟ್ಟನು

ಸತೋರಣಸ್ಥಂ ಪರಿಘಂ ಗೃಹೀತ್ವಾ ತದ್ರಕ್ಷಿಣಸ್ತೇನ ನಿಹತ್ಯ ಸರ್ವಾ್ ॥
ಲಂಕಾ ಸಭಾ ಗೋಪುರ ಸೌಧ ಸದ್ಮ ರಾಜಾವರೋಧಾದಿ ಮತಿಂ ದದಾಹ ॥ ೪೩ ॥

ಆ ಮಹಾ ದ್ವಾರಕ್ಕೆ ಹಾಕಿರುವ ಲಾಳಮುಂಡಿಗೆಯನ್ನು ತೆಗೆದುಕೊಂಡು ಹನುಮಂತನು ಆ ಪುರವನ್ನು ರಕ್ಷಣ ಮಾಡುತ್ತಿದ್ದ ಸಮಸ್ತ ರಾಕ್ಷಸರನ್ನೂ ಹೊಡೆದು, ಕೊಂದು, ಸಭಾಸ್ಥಳ ಗೋಪುರಗಳು ಮನೆಗಳು ಉಪ್ಪರಿಗೆಯ ಮನೆಗಳು,ರಾಜನಂತಃಪುರ ಮೊದಲಾದವುಗಳಿಂದ ಕೂಡಿದ ಲಂಕಾಪಟ್ಟಣವನ್ನು ಸುಟ್ಟುಬಿಟ್ಟನು

ಜಜ್ವಾಲ ತತ್ರ ಜ್ವಲನೋತಿ ಮಾತ್ರಂ ಜಜ್ವಾಲ ತಸ್ಮಾ ದ್ವಿಗುಣೋ ಹನೂಮಾ್ ॥
ಸರ್ವತ್ರ ಚೈಕಕ್ಷಣ ಏವ ದೃಷ್ಟಃ ಸವಿಶ್ವ ರೂಪತ್ವ ಮವಾಪ ನೂನಂ ॥ ೪೪ ॥

ಬೆಂಕಿಯು ಬಹಳವಾಗಿ ಪ್ರಕಾಶಿಸುತ್ತಾ ಉರಿಯುತ್ತಿರಲು, ಈ ಹನುಮಂತನು ಆ ಬೆಂಕಿಗಿಂತಲೂ ಎರಡರಷ್ಟು ಕಾಂತಿಯಿಂದ ಶೋಭಿಸುತ್ತಿದ್ದನು. ಮತ್ತು ಕ್ಷಣಮಾತ್ರದಲ್ಲಿಯೇ, ಎಲ್ಲಾ ಕಡೆಯಲ್ಲಿಯೂ ಕಾಣಿ

ಸುತ್ತಾ, ಜಾಗ್ರತೆಯಾಗಿ ಸರ್ವ ಕಡೆಯಾ ವ್ಯಾಪಿಸಿಕೊಂಡಿದ್ದನು.

ಆಕ್ರಂದವಸ್ಯೈ ಸ್ವಂದಹಸ್ಯೈ ರ್ನಿಪಾತೈ ರ್ವಿಲೋಡನಾದ್ಯೈ ರ್ಭಯ ದುಃಖ ಪೂರ್ಣೈಃ ॥
ಹನೂಮತಾ ದಂಡ ಧರೇಣ ದಗ್ಧಾ ಲಂಕಾನರೇಜೇ ನರ ಕೋಪಮಾನಾ ॥ ೪೫ ॥

ದಂಡಧಾರಿಯಾದ ಹನುಮಂತನಿಂದ ಸುಡಲ್ಪಟ್ಟ ಲಂಕಾಪಟ್ಟಣವು, ನರಕಕ್ಕೆ ಸಮಾನವಾಗಿದ್ದಿತು. ಹೇಗೆಂದರೆ ಸುಟ್ಟುಹೋಗುತ್ತಿರುವವರು ಅಯ್ಯೋ! ಕುಯ್ಯೋ! ಮರ್ರೋ! ಎಂದು ಕಿರಿಚಿಕೊಳ್ಳುವುದರಿಂದಲೂ, ಸುಡುತ್ತಾ ಬೀಳುತ್ತಿರುವವರ ರೋದನ ಧ್ವನಿಯಿಂದಲೂ, ಬೆಂಕಿಯಲ್ಲಿ ಬಿದ್ದು ಹೊರಳಾಡುತ್ತಿರುವವರ ಆರ್ತಧ್ವನಿಯಿಂದಲೂ, ಭಯದ ಧ್ವನಿಗಳಿಂದ ನರಕವು ತುಂಬಿರುವಂತೆ ಲಂಕಾಪಟ್ಟಣವು ದುಃಖದಿಂದಲೂ, ಓಡುತ್ತಿರುವವರ ಕೂಗುಗಳಿಂದಲೂ, ಕೂಡಿ ಯಮದಂಡವನ್ನು ಧರಿಸಿರುವ ಯಮಧರ್ಮರಾಯನು ನರಕದಲ್ಲಿ ಪಾಪಿಗಳನ್ನು ಹೇಗೆ ಶಿಕ್ಷಿಸುತ್ತಿದ್ದನೋ ಹಾಗೆ ಆ ಪಾಪಿಗಳ ಭಯದುಃಖಪೂರ್ಣವಾದ ರೋದನವು ರಾಕ್ಷಸರ ರೋದನಗಳಿಂದ ಕೂಡಿ ನರಕಕ್ಕೆ ಸಮಾನವಾಗಿತ್ತು.

ಪಿತ್ರಾನಕರ್ಮೇತ್ಥವಿಡಂ ವಿಧಾಯ ನದಾಧಿ ರಾಜೇವ ಭೃತಂಚ ಕೃತ್ವಾ ॥
ಸಮರ್ಪಯಾ ಮಾಸ ಸಮರ್ಪಣೀಯಂ ರಾಮಾಯ ತಸ್ಮಾರುತಿ ಯಾಯಜೂಕಃ ॥ ೪೬ ॥

ಈ ರೀತಿಯಾಗಿ ಹನುಮಂತನು ಲಂಕಾದಹನವೆಂಬ ಯಜ್ಞವನ್ನುಮಾಡಿ, ನದಿಗಳಿಗೆ ರಾಜನಾದ ಸಮುದ್ರದಲ್ಲಿ ಅವಭೃತಸ್ನಾನ ಮಾಡಿ, ಮಾರುತಿಯೆಂಬ ಯಜಮಾನನಾದ ತಾನು ರಾಮದೇವರೆಂಬ ಯಜ್ಞ ಭೋಕ್ತೃವಿನಲ್ಲಿ ಸಮರ್ಪಿಸಬೇಕಾದ ಯಜ್ಞಕರ್ಮವನ್ನು ಸಮರ್ಪಿಸಿದನು.

ದಗ್ಧಾ ಪುರೀ ಮಾರುತಿನಾ ಸಮಸ್ತಾ ಸೀತಾನ್ವಿತಾ ನೈವಚ ಶಿಂಶುಪಾ ಸಾ ॥
ಸ್ಯಾದ್ವಿಕ್ರಮೋ ನೀತಿಯುತಃ ಪ್ರಭೂಣಾಂ ಕೃತ್ವೇ ತ್ಯುಷೀಣಾಂ ಸವಚೋಭ್ಯನಂದತ್ ॥ ೪೭ ॥

ಹನುಮಂತನಿಂದ ಸಕಲೈಶ್ವರ್ಯ ಸಮೇತವಾದ ಲಂಕಾಪಟ್ಟಣವು ಸೀತಾದೇವಿಯು ಕುಳಿತಿದ್ದ ಶಿಂಶುಪಾವೃಕ್ಷದ ವಿನಹ (ಹೊರ್ತಾಗಿ) ಸುಡಲ್ಪಟ್ಟಿತು. ಅಂದರೆ ಸೀತಾದೇವಿಯ ಸುತ್ತಲೂ ಅಗ್ನಿಯು ಸುಡಲೇ ಇಲ್ಲವು. ನಿಜವಾದ ಪರಾಕ್ರಮಿಗಳ ಪರಾಕ್ರಮವು ಯಾವಾಗಲೂ ನೀತಿಯುಕ್ತವಾಗಿಯೇ ಇರುತ್ತೆ. ಎಂತ

ಹೇಳುತ್ತಿರುವ ಋಷಿಗಳ ಮಾತನ್ನು ಕೇಳಿ ಹನುಮಂತನು ಅವರನ್ನು ಅಭಿನಂದಿಸಿದನು.

ಶಾಂತೋಭವಾಗ್ನೇ ಮರುತಸ್ಸುತೇತ್ವಂ ಪ್ರಾಗೇವಹೀತ್ಯಾಶಿಷ ಮುಕ್ತವತ್ಯೈ ॥
ಸಂ ಸಾಂತ್ವಿತಾಯೈ ಸರಮಾ ವಚೋಭಿಃ ನನಾಮ ತಸ್ಯೈರ್ಹನುಮಾನಿಯಾಮಃ ॥ ೪೮ ॥

ಸೀತಾದೇವಿಯು ಅಗ್ನಿಯನ್ನು ಕುರಿತು ಎಲೈ ! ಅಗ್ನಿಯೇ ! ನೀನು ಮರುತ್ಪುತ್ರನಾದ ಹನುಮಂತನಲ್ಲಿ ನೀನು ಶಾಂತನಾಗು ಎಂದು ಮೊದಲೇ ಆಶೀರ್ವಾದ ಮಾಡಿದ್ದಳು. ಅದನ್ನು ತಿಳಿದ ಹನುಮಂತನು ಸಾಂತ್ವವಚನಗಳಿಂದ ಸೀತಾದೇವಿಯನ್ನು ಮಾತನಾಡಿಸಿ ಆಕೆಗೆ ನಮಸ್ಕಾರ ಮಾಡಿ ಹೊರಡಲುದ್ಯುಕ್ತನಾದನು

ಕ್ಷಿಪ್ರಂಸಮಾಗಚ್ಛತು ದೇವ ಇತ್ಥಂ ತಯೋ ದಿತೋ ಬಾಢಮಿತಿಪ್ರಣಮ್ಯ ॥
ಗಿರೀಂದ್ರಮಾರುಹ್ಯ ಗಿರಿಪ್ರಕಾಶಃ ತಿತೀರ್ಷುರಬ್ಧಿಂ ವವೃಧೇಪುರೈವ ॥ ೪೯ ॥

ದೇವ ದೇವನಾದ ಶ್ರೀ ರಾಮಚಂದ್ರನು ಇಲ್ಲಿಗೆ ಜಾಗ್ರತೆಯಾಗಿ ಬರುವಂತೆ ಮಾಡು ಎಂದು ಸೀತಾದೇವಿಯು ಹೇಳುತ್ತಿರಲು ಹಾಗೆಯೇ ಆಗಲಿ. ತಾಯೇ? ಎಂದು ಹೇಳಿ ಹನುಮಂತನು ನಮಸ್ಕಾರ ಮಾಡಿ,

ತ್ರಿಕೂಟಪರ್ವತವನ್ನು ಹತ್ತಿ ಸಮುದ್ರವನ್ನು ದಾಟಲು ಸಿದ್ಧನಾಗಿ ಮೇರುಪರ್ವತದ ಸದೃಶವಾದ ದೇಹದ ಕಾಂತಿಯಿಂದ ಕೂಡಿ, ಪೂರ್ವದಂತೆ ತನ್ನ ಶರೀರವನ್ನು ಬೆಳೆಯಿಸಿದನು.

ಧರಾ ಧರಂತಂ ಧರಯಾ ಸಮಾನಂ ಕುರ್ವ್ವಪದಾಭ್ಯಾ ಮತಿಪೀಡನೇನ ॥
ಉತ್ಪತ್ಯನಿತ್ಯೋದ್ಯುತಿರ್ಮಾ ಹನೂರ್ಮಾ ನಮೇಯಧಾಮಾ ಜಲಧಿಂ ತತಾರ ॥ ೫೦ ॥

ಆ ಪರ್ವತವನ್ನು ಕಾಲಿನಿಂದ ತುಳಿದು ನೆಲ ಸಮುವನ್ನು ಮಾಡಿ ತನ್ನ ಅಸಮಾನವಾನ ತೇಜಸ್ಸಿನಿಂದ ಮೇಲಕ್ಕೆ ಹಾರಿ ಹನುಮಂತನು ಸಮುದ್ರವನ್ನು ದಾಟಿದನು.

ಆಶಾ ವಿಶಾಲಾ ಹರತೀವ ದೋರ್ಭ್ಯಾಂ ಊರ್ಧ್ವಾಂಡಮುತ್ಖಂಡ ಯತೀವ ಮೂರ್ಧ್ನಾ॥
ಪುರಾನ್ಯ ತೇಜಃ ಪಿಬತೀವ ಭಾಸಾ ಶ್ರೀರ್ಮಾ ಹನೂಮಾನಧಿಕಂ ರರಾಜ ॥ ೫೧ ॥

ಹಾರುತ್ತಿರುವ ಹನುಮಂತನು ತನ್ನ ಎರಡುಬಾಹುಗಳಿಂದಲೂ, ವಿಶಾಲವಾದ ದಿಕ್ಕುಗಳನ್ನು ಹಿಡಿಯುತ್ತಾನೋ ಎಂಬುವಹಾಗೆ, ತನ್ನ ತಲೆಯಿಂದ ಬ್ರಹ್ಮಾಂಡದ ಮೇಲಿನ ಏಳುಲೋಕಗಳನ್ನು ಒಡೆದು ಹಾಕು

ತ್ತಾನೋ ಎಂಬುವಂತೆಯೂ, ತನ್ನ ಕಾಂತಿಯಿಂದ ಇತರರ ತೇಜಸ್ಸೆಲ್ಲವನ್ನೂ ಪಾನಮಾಡುತ್ತಾನೋ ಎಂಬುವಂತೆಯೂ, ಅಂತರಿಕ್ಷದಲ್ಲಿ ಅಧಿಕವಾಗಿ ಪ್ರಕಾಶಿಸುತ್ತಿದ್ದನು.

ಕಪೀಂದ್ರ ಚಂದ್ರೇ ಗಗನಂ ಗತೇಽಸ್ಮಿನ್ ವಿಚೀವ ವಾಣೀ ಮಮ ವರ್ಧತೇಽಲಂ ॥
ತಾಂ ಗ್ರಂಥ ಬಾಹುಳ್ಯ ಭಯಾಸ್ಮನೀಷಾ ಸ್ಥೈರ್ಯೇಣ ವೇಲೇವ ನಿಯಚ್ಛತೀಯಂ ॥ ೫೨ ॥

ಕಪೀಂದ್ರನೆಂಬ ಚಂದ್ರನು ಅಂತರಿಕ್ಷದಲ್ಲಿ ಪ್ರಕಾಶಿಸುತ್ತಿರಲಾಗಿ, ನನ್ನ ಮಾತೆಂಬ ಸಮುದ್ರವು ತೆರೆಗಳಿಂದ ಕೂಡಿ ಮೇಲಕ್ಕುಬ್ಬುತ್ತದೆ. ಅಂದರೆ ಕಪಿಶ್ರೇಷ್ಠನಾದ ಹನುಮಂತನನ್ನು ವರ್ಣಿಸಲು ಪ್ರಾರಂಭಿಸಿದರೆ, ಆತನ ಮಹಾತ್ಮೆಯು ಅಪಾರವಾಗಿರುತ್ತದೆ. ಆದ್ದರಿಂದ ಗ್ರಂಥವು ದೊಡ್ಡದಾಗುತ್ತದೆಂಬ ಭಯದಿಂದ ಇಲ್ಲಿಗೇ ವರ್ಣನೆಯನ್ನು ನಿಲ್ಲಿಸಿದೆ. ಅಂದರೆ ಸಮುದ್ರದ ಅಲೆಗಳನ್ನು ತಡೆಯಲು ಎತ್ತರವಾದ ದಡವು ಸ್ಥೈರ್ಯವಾಗಿ ಹೇಗೆ ನಿಂತಿರುವುದೋ, ಹಾಗೆ ಗ್ರಂಥ ಬಾಹುಳ ಭೀತಿಯು ಈ ವರ್ಣನೆಯನ್ನು ತಡೆಯುತ್ತದೆ.

ಪರಸ್ಥಳೇ ಸನ್ನಿಹಿತೇ ನನಾದ ಸ್ವ ಜ್ಞಾತಿ ವರ್ಗಾನ್ ಪ್ರತಿಹರ್ಷಯನ್ಸಃ ॥

ದೀನಾನಿಮಾಶಾಃ ಪತಿತಾಃ ಕಪೀಂದ್ರಾಸ್ತೇತೇನ ನಾದೇನ ನನಂದುರುಚ್ಚೈಃ ॥ ೫೩ ॥

ಆಚೆಯದಡವು ಸಮೀಪವಾಗುತ್ತಿರಲು ಹನುಮಂತನು ತನ್ನ ಧ್ವನಿಯಿಂದ ಆ ದಡದಲ್ಲಿರುವ ತನ್ನ ಬಂಧುಬಳಗಗಳನ್ನು ಸಂತೋಷಪಡಿಸುವಂಥವನಾಗಿ, ಸಿಂಹನಾದವನ್ನು ಮಾಡಿದನು. ದೀನರಾಗಿಯೂ, ನಿರಾಶರಾಗಿಯೂ, ಬಿದ್ದಿದ್ದ ಕಪಿಶ್ರೇಷ್ಠರುಗಳೆಲ್ಲಾ ಈತನ ಸಿಂಹನಾದವನ್ನು ಕೇಳಿ, ಘಟ್ಟಿಯಾಗಿ ಸಂತೋಷ ಧ್ವನಿಯನ್ನು ಮಾಡಿದರು.

ವ್ಯಕ್ತಂ ಹನೂಮಾನ್ ಸದದರ್ಶ ಸೀತಾಂ ಮಾನೀ ನಗರ್ಜೇದಕೃತಾರ್ಥ ಇತ್ಥಂ ॥
ಬ್ರಹ್ಮಾತ್ಮಜೋಕ್ತಾಃ ಕಪಯಃ ಪ್ರಹೃಷ್ಟಾಃ ನಗೇಷು ಪೇತುರ್ನನೃತುರ್ಜಗುಶ್ಚ ॥ ೫೪ ॥

ಆ ಕಪಿಶ್ರೇಷ್ಠರೆಲ್ಲರೂ ಕೂಡಿ ಹನುಮಂತನು ಸೀತಾದೇವಿಯನ್ನು ನೋಡಿ ಬಂದಿರುತ್ತಾನೆಂಬುವುದು ಅವನ ಸಿಂಹನಾದದಿಂದಲೇ ವ್ಯಕ್ತವಾಗುತ್ತದೆ. ಹಾಗೆ ನೋಡದೆ ಬಂದಿದ್ದರೆ ಮಾನಿಯಾದ ಹನುಮಂತನು ಹೀಗೆ ಸಂತೋಷದಿಂದ ಸಿಂಹನಾದವನ್ನು ಮಾಡುತ್ತಿರಲಿಲ್ಲವು. ಎಂದು ಜಾಂಬವಂತನಿಂದ ಹೇಳಿಸಿ ಕೊಳ್ಳ

ಲ್ಪಟ್ಟವರಾಗಿ ಬಹಳ ಸಂತೋಷದಿಂದ ಪರ್ವತಗಳಲ್ಲಿ ಕುಣಿದಾಡುತ್ತಲೂ, ಹಾರಾಡುತ್ತಲೂ, ಧುಮುಕುತ್ತಲೂ, ಇದ್ದರು.

ಅಥಾವತೀರ್ಣಂ ಪರಿಪೂರ್ಣ ಮೇನಂ ಅವೇಕ್ಷ್ಯ ಮಾಹೇಂದ್ರ ಮಹೀಧರೇಂದ್ರೇ ॥
ಉಪಾಯನೈ ರ್ಮೂಲಫಲೈ ಸ್ಸಪುಷ್ಪೈಃ ರಭ್ಯರ್ಚ್ಯ ಸರ್ವೇಽಪಿ ವವಂದಿರೇತೇ ॥ ೫೫ ॥

ಆ ಮಹೇಂದ್ರಪರ್ವತದಲ್ಲಿ ಅಂತರಿಕ್ಷದಿಂದ ಇಳಿದುಬಂದ ಸರ್ವಜ್ಞನಾದ ಹನುಮಂತನನ್ನು ಕಂದಮೂಲಫಲಗಳ ಉಪಾಯನದಿಂದಲೂ, ಪುಷ್ಪಗಳ ಹಾರದಿಂದಲೂ, ಕಪಿಶ್ರೇಷ್ಠರೆಲ್ಲರೂ ಪೂಜೆಮಾಡಿ, ಸಾಷ್ಟಾಂಗ ನಮಸ್ಕಾರವನ್ನು ಮಾಡಿದರು.

ದೃಷ್ಟಾ ಮಯಾ ರಾಘವ ವಲ್ಲಭೇತಿ ನಿಶಮ್ಯ ವಾಯೋಸ್ತನಯಸ್ಯ ವಾಣೀಂ ॥
ಹೃಷ್ಟಂ ಕಪೀನಾಂ ಕುಲಮುಜ್ಜಗರ್ಜ ಪ್ರತ್ಯುತ್ಪ ಪಾತಾಳಮುದಗ್ರಪುಚ್ಛಂ ॥ ೫೬ ॥

ಶ್ರೀ ರಾಮಚಂದ್ರನ ವಲ್ಲಭೆಯಾದ ಸೀತಾದೇವಿಯು ನನ್ನಿಂದ ನೋಡಲ್ಪಟ್ಟಳು ಎಂದು ಹೇಳಿದ

ವಾಯುಪುತ್ರನಾದ ಹನುಮಂತನ ಮಾತನ್ನು ಕೇಳಿದ ಆ ಕಪಿಶ್ರೇಷ್ಠರೆಲ್ಲರೂ ಬಹಳವಾಗಿ ಸಂತೋಷಪಟ್ಟರು. ಮತ್ತು ತಮ್ಮ ಬಾಲಗಳನ್ನು ಮೇಲಕ್ಕೆತ್ತಿಕೊಂಡು ನೆಗೆದಾಡುತ್ತಾ ಘಟ್ಟಿಯಾಗಿ ಸಿಂಹನಾದನವನ್ನು ಮಾಡಿದರು.

ಪಿಂಗೇಕ್ಷಣೈರಂಗದ ಜಾಂಬವನ್ಮುಖ್ಯೈಃ ಪೃಷ್ಟಃ ಪುನಶ್ಚಾಧಿಕ ವಿಸ್ತರೇಣ ॥
ಉದಂತ ಮಾದ್ಯಂತ ಮುತಂ ಪ್ರಣಮ್ಯ ಪ್ರಶಸ್ಯತೇಸ್ಮ ಶ್ವಸನಸ್ಯಸೂನುಃ ॥ ೫೭ ॥

ಅಂಗದ ಜಾಂಬುವಂತನೇ ಮೊದಲಾದ ಕಪಿಶ್ರೇಷ್ಠರಿಂದ ಪುನಃ ಸೀತಾವೃತ್ತಾಂತವು ಹೆಚ್ಚು ವಿಸ್ತಾರದಿಂದ ಕೇಳಲ್ಪಡಲು ವಾಯುಪುತ್ರನಾದ ಹನುಮಂತನು ಆಮೂಲಾಗ್ರವಾಗಿ ಅವರಿಗೆ ಲಂಕಾಪಟ್ಟಣದಲ್ಲಿ ನಡೆದ ವೃತ್ತಾಂತವನ್ನು ಹೇಳಿ ಪ್ರಶಂಸೆ ಮಾಡಿಸಿಕೊಳ್ಳಲ್ಪಟ್ಟನು.

ಆಲೋಚ್ಯತೇ ಕಾರ್ಯಮಥಾರ್ಯವರ್ಯಾ ನಿಶ್ಚಿತ್ಯಸರ್ವಂ ಹನುಮನ್ಮತೇನ ॥
ಆಶಾಮುದೀಚೀಂ ಪ್ರಯಯು ಸ್ತರಂತೋ ನಾನಾನಗಾಲೀ ರ್ನಗರೀರ್ನದೀಶ್ಚ ॥ ೫೮ ॥

ಆ ಕಪಿಶ್ರೇಷ್ಠರೆಲ್ಲರೂ ಮುಂದೆ ಮಾಡಬೇಕಾದ ಕಾರ್ಯವೇನೆಂಬುದನ್ನು ಹನುಮಂತನ ಇಷ್ಟಪ್ರಕಾರವಾಗಿ ನಿಶ್ಚಯಿಸಿ, ಅನೇಕ ಪರ್ವತಸ್ತೋಮಗಳನ್ನೂ, ಪಟ್ಟಣಗಳನ್ನೂ, ನದಿಗಳನ್ನೂ, ಸಹ ಅತಿಕ್ರಮಿಸುವವರಾಗಿ ಉತ್ತರದಿಕ್ಕನ್ನು ಕುರಿತು ಪ್ರಯಾಣಮಾಡಿದರು.

ಸಂಪ್ರಾಪ್ಯರಾಜ್ಞೋ ಮಧುಮದ್ವನಂತೇ ಯಯಾಚಿರೇತತ್ರ ಮಧೂನಿಲೋಲಾಃ ॥
ಶ್ಲಾಘ್ಯಂ ಹನೂಮಂತ ಮಥಾಂಗದಂಚ ತಯೋರ್ನಿಯೋಗೇನ ಪಪುರ್ನಿಕಾಮಂ ॥ ೫೯ ॥

ಈ ಕಪಿಶ್ರೇಷ್ಠರೆಲ್ಲರೂ ತಮ್ಮ ರಾಜನಾದ ಸುಗ್ರೀವನ ಮಧುವನವನ್ನು ಸೇರಿ ಅಲ್ಲಿ ಮಧುವನ್ನು ಕುಡಿಯಬೇಕೆಂಬ ಅಪೇಕ್ಷೆಯಿಂದ ಹನುಮಂತನನ್ನೂ, ಅಂಗದನನ್ನೂ ಯಾಚಿಸಿದರು. ಮತ್ತು ಅವರ ಅಪ್ಪಣೆಯಿಂದ ಯಥೇಚ್ಛವಾಗಿ ಮಧುಪಾನವನ್ನು ಮಾಡಿದರು.

ಕೃದ್ಧೋತಿಮಾತ್ರಂ ವನಪಾಲ ನಾಥೋ ಯೋಮಾತುಳ ಸ್ಸೂರ್ಯಸುತಸ್ಯರಾಜ್ಞಃ ॥
ಅಭ್ಯದ್ರವತ್ತಾರ್ ಮಧುಪಾನ ಮತ್ತಾರ್ ಸಾಲಂ ದಧಾನ ಸ್ಸಹಿತ ಸ್ಸದಾಸ್ಯೈಃ ॥ ೬೦ ॥

ಸೂರ್ಯ ಪುತ್ರನಾದ ಸುಗ್ರೀವನಿಗೆ ಸೋದರಮಾವನಾಗಿಯೂ, ಆ ಮಧುವನಕ್ಕೆ ಯಜಮಾನನಾಗಿಯೂ ಇದ್ದಂಥ ದಧಿಮುಖನು ಅತ್ಯಂತ ಕೋಪಿಷ್ಠನಾಗಿ ತನ್ನ ಸೇವಕರಿಂದೊಡಗೂಡಿ, ಒಂದು ಸಾಲ ವೃಕ್ಷವನ್ನು ಕಿತ್ತು ಕೈಯ್ಯಲ್ಲಿಟ್ಟುಕೊಂಡು, ಮಧುಪಾನದಿಂದ ಮತ್ತರಾದ ಕಪಿಗಳನ್ನು ಓಡಿಸಿದನು.

ಅಪ್ಯಾರ್ಯಕಂ ತಂ ಮಧುಮತ್ತ ಚಿತ್ತ ಸ್ತತ್ರಾಂಗದೋ ಭೂಮಿತಳೇ ಪಿಪೇಷ ॥
ಪರೇ ಪರ್ರಾ ಜಾನುಭಿ ರಾಕ್ಷಿಪರ್ದ್ರಾಕ್ ತೇ ದೇವ ಮಾರ್ಗಂ ಪ್ರತಿದರ್ಶಯಂತಃ ॥೬೧॥

ಅನಂತರದಲ್ಲಿ ಮಧುಪಾನದಿಂದ ವ್ಯತ್ಯಸ್ಥ ಚಿತ್ತನಾದ ಅಂಗದನು ಹಿರಿಯನಾದ ದಧಿಮುಖನನ್ನು ಲಕ್ಷ್ಯಮಾಡದೆ ಅವನನ್ನು ಭೂತಳದಲ್ಲಿಕೆಡವಿ ಚೆನ್ನಾಗಿ ಮರ್ದಿಸಿಬಿಟ್ಟನು. ಇತರರಾದ ಕಪಿಗಳು ತಮ್ಮತಮ್ಮ ಮೊಣಕಾಲುಗಳಿಂದ ದಧಿಮುಖನ ಸೇವಕರನ್ನು ಜಾಗ್ರತೆಯಾಗಿ ಭೂಮಿಯಲ್ಲಿ ಕೆಡವಿ ದೇವಮಾರ್ಗವನ್ನು ತೋರಿಸಿದರು.

ಮುಹೂರ್ತ ಮಾತ್ರಃ ಪ್ರತಿ ಲಭ್ಯ ಸಂಜ್ಞೋ ಸಹಸ್ರ ಭೃತ್ಯೈರುಪಗಮ್ಯ ತೂರ್ಣಂ ॥

ಸುಗ್ರೀವ ಮಾವೇದಯತಿಸ್ಮ ವೃತ್ತಂ ತಸ್ಮಾತ್ತುಳೋ ರಾಘವ ಸನ್ನಿಧಾನೇ ॥ ೬೨ ॥

ಆ ದಧಿಮುಖನು ಒಂದು ಮುಹೂರ್ತದಮೇಲೆ ಎಚ್ಚರಿಕೆಯನ್ನು ಹೊಂದಿ, ಸಾವಿರಾರುಜನ ಭೃತ್ಯರಿಂದ ಕೂಡಿ, ಜಾಗ್ರತೆಯಾಗಿ ಕಿಷ್ಕಿಂಧಾ ಪಟ್ಟಣವನ್ನು ಸೇರಿ, ಶ್ರೀ ರಾಮಚಂದ್ರನ ಸನ್ನಿಧಾನದಲ್ಲಿ ಕುಳಿತಿರುವ ಸುಗ್ರೀವನಿಗೆ ಈ ಕಪಿಶ್ರೇಷ್ಠರುಗಳು ಮಾಡಿದ ಕೆಲಸಗಳನ್ನೂ, ತನ್ನನ್ನು ಹೊಡೆದೋಡಿಸಿದ ಸಮಾಚಾರವನ್ನೂ, ಹೇಳುತ್ತಿದ್ದನು.

ರಾಜಾ ತದಾ ಮಧುವನಸ್ಯ ವಿಲೋಪನಂ ತತ್ ಶೃತ್ವಾ ಮುದಾ ದಧಿಮುಖಾದ್ರಘುನಾಥಮೂಂಚೆ ॥
ಸೀತಾಧ್ರುವಂ ಹನುಮತಾ ದದೃಶೇಮಧೂನಿ ತಸ್ಮಾತ್ಪಿಬಂತಿ ಕೃತಕೃತ್ಯಧಿಯಸ್ತುಯೇವ ॥ ೬೩ ॥

ರಾಜನಾದ ಸುಗ್ರೀವನು ಮಧುವನದ ನಾಶವನ್ನು ದಧಿಮುಖನಿಂದ ಕೇಳಿ ರಘುನಾಥನಾದ ಶ್ರೀ ರಾಮನನ್ನು ಕುರಿತು ಹೇಳಿದ್ದೇನೆಂದರೆ:— ಹನುಮಂತನು ಖಂಡಿತವಾಗಿಯೂ ಸೀತಾದೇವಿಯನ್ನು ನೋಡಿದ್ದಾನೆ. ಆದ್ದರಿಂದಲೇ ಕಪಿಗಳೆಲ್ಲರೂ ಕೃತಕೃತ್ಯರಾಗಿ ಮಧುಪಾನ ಮಾಡಿದ್ದಾರೆ

ಆನಂದೀ ದಿನಕರನಂದನಃ ಕಪೀಂದ್ರಾ ನಾನೇತುಂ ದಧಿಮುಖ ಮಾದಿಶ ದ್ದುತಂತರ್ ॥
ಪ್ರಾಪ್ತಸ್ತಾ ಸ ಮಧುವನೇ ಪ್ರಣಮ್ಯಚೋಚೇ ರಾಜಾವಃ ಸಪದಿ ದಿದೃಕ್ಷತೇ ಮುದೇತಿ

ಈ ವರ್ತಮಾನವನ್ನು ಕೇಳಿದ ಸೂರ್ಯಪುತ್ರನಾದ ಸುಗ್ರೀವನು ಸಂತೋಷಪಟ್ಟು ಆ ಕಪಿಶ್ರೇಷ್ಠರನ್ನು ಕರೆತರಲು ದಧಿಮುಖನಿಗೆ ಅಪ್ಪಣೆ ಮಾಡಿದನು- ಆ ದಧಿಮುಖನು ಜಾಗ್ರತೆಯಾಗಿ ಹೋಗಿ ಮಧುವನದಲ್ಲಿರುವ ಕಪಿಶ್ರೇಷ್ಠರನ್ನು ಸೇರಿ ಅವರಿಗೆ ನಮಸ್ಕಾರಮಾಡಿ, ಎಲೈ ! ಕಪಿವೀರರಿರಾ ! ರಾಜನಾದ ಸುಗ್ರೀವನು ತಮ್ಮನ್ನು ಜಾಗ್ರತೆಯಾಗಿ ಸಂತೋಷದಿಂದ ನೋಡಬೇಕೆಂದು ಅಪೇಕ್ಷಿಸುತ್ತಾನೆಂದು ಹೇಳಿದನು.

ಆಯಾಂತೋ ವಿಯತಿ ಘನಾ ಘನಾಯಮಾನಾಃ ಸಂಮೋದಾತ್ಸಕಿಲ ಕಿಲಾರವಾಃ ಕಿಲೇತೇ ॥
ಸಂಪ್ರಾಪ್ತಾ ರವಿಸುತ ಸೇವಿತಂ ಪರೇಶಂ ಸನ್ನೇಮುಃ ಸಹಮಹತಾ ಹನೂಮತಾಥ ॥ ೭೫ ॥

ಆ ಕಪಿಗಳೆಲ್ಲರೂ ಆನಂದದಿಂದ ಅಂತರಿಕ್ಷಕ್ಕೆ ಹಾರಿ ದೊಡ್ಡದಾದ ದೇಹದಿಂದ ಅಂತರಿಕ್ಷದಲ್ಲಿ ಓಡಾಡುವ ಮೇಘಗಳೋಪಾದಿಯಲ್ಲಿ ಕಿಲ, ಕಿಲ ಧ್ವನಿಯನ್ನು ಮಾಡುತ್ತಾ ಪ್ರಯಾಣಮಾಡಿ, ಸುಗ್ರೀವನಿಂದ

ಸೇವಿತನಾದ ಸರ್ವೇಶ್ವರನಾದ ಶ್ರೀ ರಾಮಚಂದ್ರನನ್ನು ಸೇರಿ ಮಹಾತ್ಮನಾದ ಹನುಮಂತನಿಂದೊಡಗೂಡಿ, ಶ್ರೀ ರಾಮಚಂದ್ರನಿಗೆ ಸಾಷ್ಟಾಂಗ ನಮಸ್ಕಾರವನ್ನು ಮಾಡಿದರು.

ದೃಷ್ಟಾ ಸಾ ಜನಕಸುತೇತಿ ವಾಕ್ಯಮಾತ್ರಾತ್ಸಂಹೃಷ್ಟೇ ಸ ರವಿಜ ಲಕ್ಷ್ಮಣೇರಮೇಶೇ ||
ಪ್ರೋಚೇಸೌ ಪವನಸುತೋಽಖಿಳಂಚ ವೃತ್ತಂ ಸಂದೇಶಾನಪಿ ವಿಶದಾಂಚ್ಛುಕಾಲಪಾಯಾಃ || ೬೬ ||

ಜನಕರಾಜನ ಮಗಳಾದ ಜಾನಕಿಯು ಹನುಮಂತನಿಂದ ಕಾಣಲ್ಪಟ್ಟಳು. ಎಂಬ ವಾಕ್ಯವನ್ನು ಕೇಳುವ ಮಾತ್ರದಿಂದಲೇ ಸುಗ್ರೀವನಿಂದಲೂ, ಲಕ್ಷ್ಮಣನಿಂದಲೂ, ಕೂಡಿದ ಶ್ರೀ ರಾಮಚಂದ್ರನು ಸಂತೋಷ ಪಡುತ್ತಿರಲಾಗಿ, ವಾಯುಪುತ್ರನಾದ ಹನುಮಂತನು ಎಲ್ಲಾ ಸಮಾಚಾರವನ್ನು ಗಿಳಿಯಂತೆ ಇಂಪಾಗಿ ಮಾತಡುವ ಸೀತಾದೇವಿಯು ಹೇಳಿಕಳುಹಿಸಿದ ಸಮಾಚಾರವನ್ನೆಲ್ಲಾ ವಿಶದವಾಗಿ ಶ್ರೀ ರಾಮಚಂದ್ರನಿಗೆ ಹೇಳಿದನು.

ಕಾಂತಾಯಾಸ್ತಿಲಕವಿಧಿಂ ಮನಃ ಶಿಲಾಯಾಃ ಕಾಕಾಕ್ಷಿಕ್ಷತಿಮಪಿ ಚಿತ್ರಕೂಟ ಊಚೇ ||
ತಂ ಚೂಡಾಮಣಿಮಪಿ ದತ್ತವಾ೯ ಹನೂಮಾ೯ ಸೋಭಿಜ್ಞಾ ಇತಿ ವಿದಧೇಽಖಿಳಜ್ಞಾ ಪಾರ್ಶ್ವೇ೯ || ೬೭||

ಸೀತಾದೇವಿಯನ್ನು ಕಂಡ ಗುರಿತಿಗಾಗಿ ಹನುಮಂತನು ಹೇಳಿದ್ದೇನೆಂದರೆ " ಸೀತಾದೇವಿಯ ಮನಸ್ಸೆಂಬ ಶಿಲೆಯಲ್ಲಿ ರಚಿಸುತ್ತಿರುವ ತಿಲಕ ವಿಧಿಯನ್ನೂ, ಚಿತ್ರಕೂಟ ಪರ್ವತದಲ್ಲಿದ್ದಾಗ ಕಾಕಾಸುರನ ಕಣ್ಣನ್ನು ಕಳೆದ ಸಮಾಚಾರವನ್ನು ಹೇಳಿ ಆ ಹನುಮಂತನು ರಾಮನ ಅಂತರ್ಯ ಗುರ್ತಿಗಾಗಿ ಚೂಡಾಮಣಿಯನ್ನು ಶ್ರೀ ರಾಮಚಂದ್ರನ ಕೈಲಿ ಕೊಟ್ಟು ನಮಸ್ಕಾರಮಾಡಿ " ಸರ್ವಜ್ಞನಾದ ಶ್ರೀ ರಾಮನ ಪಕ್ಕದಲ್ಲಿ ನಿಂತುಕ್ಕೊಂಡನು.

ನಿರ್ದುಃಖ ಪರಮಸುಖಾನು ಭೂತಿರೇಕೋ ರಾಮೋಯಂ ಜಗತಿ ತಥೈವ ರಾಮರಾಮಾ ||
ವೇದಾಯಂ ಪವನಸುತೋಹಿತತ್ವ ತಸ್ತ್ವಾವಪ್ಯೇವಂ ವ್ಯಧುರಧಿಕಂ ವಿಡಂಬನಂತೇ || ೬೮ ||

ಈ ಶ್ರೀ ರಾಮಚಂದ್ರನು ದುಃಖರಹಿತನೂ, ಸುಖಪೂರ್ಣನೂ, ಜಗತ್ತಿಗೆಲ್ಲಾ ಮುಖ್ಯ ಆಶ್ರಯನೂ ಆಗಿರುತ್ತಾನೆ. ಮತ್ತು ರಾಮನ ಪತ್ನಿಯಾದ ಸೀತಾದೇವಿಯು ಈ ಗುಣಗಳಿಂದ ಕೂಡಿರುತ್ತಾಳೆ. ಈ ವಾಯು ಪುತ್ರನಾದ ಹನುಮಂತನು ತತ್ವತಃ ಈ ವೃತ್ತಾಂತವನ್ನು ತಿಳಿದಿರುತ್ತಾನೆ. ಆದರೂ ಈ ಮೂರುಮಂದಿಯೂ (ರಾಮನೂ, ಸೀತೆಯೂ, ಹನುಮಂತನೂ,) ಸಹ ಅಜ್ಞಜನರ ಮೋಹನಾರ್ಥವಾಗಿಯೂ, ಲೋಕವಿಡಂಬ

ಸಾರ್ಥವಾಗಿಯೂ, ಹೀಗೆ ನಟಿಸಿದರೆ ಹೊರ್ತು ಬೇರೆ ಇಲ್ಲವು.

ಜಾತಾಂಸೇವಾಸ್ಸಮುದ್ರಾತ್ಸ್ವಪದ ಸರಸಿಜೇ ಸ್ವರ್ಪಿತಾಂ ಸ್ವಪ್ರಕಾಶಾಂ ।
ನಿರ್ದೋಷಾಮರ್ಘಹೀನಾಂ ಜಗತಿ ಹನುಮತೋ ಭಕ್ತಿಮಾಣಿಕ್ಯಮಾಲಾಂ ॥

ದೃಷ್ಟ್ವೈವ ತಸ್ಮೈಪ್ರದಾತುಂ ಸಕಲಮಸದೃಶಂ ಚಿಂತಯನ್ ರಾಮದೇವಃ ।
ಸ್ವಾದಾ ದಾತ್ಮಾನಮೇವ ಪ್ರಮದ ಮಹಪರಿಷ್ವಂಗಲೀ ಲಾಚ್ಛಲೇನ ॥ ೬೯ ॥

ಇತಿ ಶ್ರೀಮನ್ನಾರಾಯಣ ಪಂಡಿತಾಚಾರ್ಯ ಕೃತೌ ಶ್ರೀಮತ್ಸಂಗ್ರಹರಾಮಾಯಣೇ
ಸುಂದರಕಾಂಡೇ ರಾಮಾಂಕೇ ಷಷ್ಠಸ್ಸರ್ಗಃ ॥ ಶ್ರೀ ರಾಮಚಂದ್ರಪ್ರೀಯತಾಂ ॥

— 0 —

ಸೇವಾಖ್ಯವಾದ ಸಮುದ್ರದ ದೆಶೆಯಿಂದ ಹುಟ್ಟಿದ ತನ್ನ ಪಾದ ಕಮಲಗಳಲ್ಲಿ ಭಕ್ತಿಯಿಂದ ಸಮರ್ಪಿಸಿದ ಸ್ವಪ್ರಕಾಶವುಳ್ಳ, ದೋಷರಹಿತವಾದ, ಅಮೌಲ್ಯವಾದ, ಭಕ್ತಿಎಂಬ, ಮಾಣಿಕ್ಯದ ಮಾಲೆಯನ್ನು,

ಸಮರ್ಪಿಸಿದ ಹನುಮಂತನನ್ನು ನೋಡಿ, ಲೋಕದಲ್ಲಿ ಇಂಥಾ ಭಕ್ತರನ್ನು ಬೇರೆ ಇನ್ಯಾರನ್ನೂ ಕಾಣದೇ ಇಂಥಾಭಕ್ತನಿಗೆ ಕೊಡತಕ್ಕಪದಾರ್ಥವು ಸಕಲ ಲೋಕಗಳಲ್ಲಿಯೂ, ಇಲ್ಲದೇ ಇರುವುದನ್ನು ತಿಳಿದು, ಶ್ರೀ ರಾಮಚಂದ್ರದೇವರು ಆಲಿಂಗನಾಮಾಡಿಕೊಳ್ಳುವ ನೆಪದಿಂದ ತನ್ನನ್ನೇ ತಾನು ಹನುಮಂತನಿಗೆ ದಾನ-ಮಾಡಿದನು (ಅಂದರೆ) ಹನುಮಂತನಲ್ಲಿ ಶ್ರೀ ರಾಮಚಂದ್ರನು ಪೂರ್ಣಾನುಗ್ರಹವನ್ನು ಮಾಡಿದನು.

ಇತಿ ಶ್ರೀಮತ್ಸಂಗ್ರಹರಾಮಾಯಣದ ಸುಂದರಕಾಂಡದ ರಾಮಾಂಕದ ಆರನೆಯಸರ್ಗದಲ್ಲಿ
ಮುಳಬಾಗಲು ಅವರೂರು ನಂದಗುಡಿ ಪೂರ್ಣಪ್ರಜ್ಞಾಚಾರ್ಯಸುತ
ಆನಂದತೀರ್ಥಾಚಾರ್ಯರವರಿಂದ ವಿರಚಿತವಾದ ಕರ್ಣಾಟಕಾಭಿಪ್ರಾಯ ಸಮಾಪ್ತವು.

— ೦ —

॥ ಶ್ರೀ ಸೀತಾಲಕ್ಷ್ಮಣ ಭರತ ಶತೃಘ್ನ ಹನುಮತ್ಸಮೇತ ಶ್ರೀ ರಾಮಚಂದ್ರ ಪ್ರೀಯತಾಂ ॥

—: ಸಂಪೂರ್ಣವು :—

ಅಶುದ್ಧಾ ಶುದ್ಧ ಪತ್ರಿಕೆ.

ಅಶುದ್ಧ	ಶುದ್ಧ	ಪಂಗ್ತಿ	ಪೇಜು	ಅಶುದ್ಧ	ಶುದ್ಧ	ಪಂಗ್ತಿ	ಪೇಜು
ಸಾನಾರ್ಥ್ಯಂ	ಸಾನಾಥ್ಯಂ	೩	೧	ನ್ವೇಪ	ನ್ವೇಕ	೪	೯
ಶಿತಾ ಸಿತಾ	ಸಿತಾ ಸಿತಾ	೪	೧೨	ಸುವೃಕ್ತ್ಯಾ	ಸುವೃತ್ತ್ಯಾ	೧	೧೪
ತತ್ರಿ	ತತ್ರಿ	೨	೧೭	ಘದ್ರಿಂ	ಮದ್ರಿಂ	೨	೨೪
ದೀಂ	ದಿನೀಂ	೨	೨೯	ಕ್ಕೇವಲಂ	ತ್ಕೇವಲಂ	೨	೫೨
ಗಪ್ಲ	ಪಪ್ಲ	೬	೫೭	ಶದ್ಯ	ಸ್ವಾದ್ಯ	೩	೬೫
ತಾಕ್ಷ	ರಾಕ್ಷ	೨	೭೨	ನಾಭ	ನಾಭ್ಯ	೫	೮೪
ಯೋರ್ಥ	ಯ್ಯೋರ್ಥ	೮	೮೮	ಯತ್ರ	ಯತ್ರ	೩	೯೨
ಡ್ಡವಳ	ದ್ಧವಳ	೧	೧೦೫	ಕುಲ	ಕುಲಾ	೪	೧೨೧
ವ್ಯದಥ	ವಿದಥ	೩	೧				

ಪುಸ್ತಕವು ದೊರೆಯುವ ಸ್ಥಳ

1. ಎಂ. ಆನಂದತೀರ್ಥಾಚಾರ್

   ೩ ನೆಯ ಕ್ರಾಸ್‌ರೋಡ್ ೩೧, ನಂಬರ್, ಔಟ್ ಹೌಸ್,

   ಬಸವನಗುಡಿ, ಬೆಂಗಳೂರು ಸಿಟಿ.

2. ಪರಮಾರ್ಥ ಚಂದ್ರೋದಯ ಕಾರ್ಯಾಲಯ,

   ಆನಂದನಿಲಯ, ವಿಶ್ವೇಶ್ವರಪುರ, ಬೆಂಗಳೂರು ಸಿಟಿ.

ಬೇಕಾದವರು ವಿ. ಪಿ. ಮೂಲಕವಾಗಿ ತರಿಸಿಕೊಳ್ಳಬಹುದು. ವಿ. ಪಿ. ಛಾರ್ಜು ಪ್ರತ್ಯೇಕ.